ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಸಂಪುಟ 8 • ಸಂಚಿಕೆ 8 • ಜನವರಿ 2026 • ಬೆಲೆ ರೂ. 18/–

VENMAI ಕನ್ನಡ ಮಾಸಿಕ

ಕನ್ನಡ ಮಾಸಿಕ

ಹೊಸ ವರ್ಷದ ಹಾಗೂ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು

ಹೊಸ ಆರಂಭದ

ವಿಶೇಷಾಂಕ

RAMRAJ
CULTURE CLUB®
MATCHING DHOTIS • SHIRTS
CONQUER WITH BOLD TRADITION & REFINED STYLE.
SCAN QR CODE FOR STORE LOCATION
Available at Ramraj Cotton Showrooms and All Leading Textile Shops
Shop online at www.ramrajcotton.in

ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಒಂದು ಕೆಲಸವನ್ನು ನಂಬಿಕೆಯಿಂದ ಆರಂಭಿಸಿ,
ಎಂತಹ ಪರಿಸ್ಥಿತಿಯಲ್ಲೂ ಅದರಲ್ಲಿ ಅಭಿವೃದ್ಧಿ ಸಾಧಿಸಿ,
ಸಂತೋಷ ಹಾಗೂ ಗೆಲುವನ್ನು ಹೊಂದಲು ದಾರಿ ತೋರಿಸುವ

ಹೊಸ ಆರಂಭದ

ವಿಶೇಷಾಂಕ

ಎನ್ನುವ ಈ ಉಪಯುಕ್ತ ಸಂಚಿಕೆಯನ್ನು ನಿಮಗೆ ನೀಡಲು
ನಾವು ಹೆಮ್ಮೆ ಪಡುತ್ತೇವೆ.

ಗೌರವಾನ್ವಿತರಿಗೆ...

ನಮಸ್ಕಾರ.

'ಒಳ್ಳೆಯ ಆರಂಭವೇ ಅರ್ಧ ಗೆಲುವು ಸಾಧಿಸಿದಂತೆ' ಎನ್ನುವುದುಂಟು. ಆದರೆ ನನ್ನ ಪ್ರಕಾರ,'ನಂಬಿಕೆಯಿಂದ ಆರಂಭಿಸುವುದರಲ್ಲೇ ಅರ್ಧ ಗೆಲುವು ಇರುತ್ತದೆ!'.ನಿಮ್ಮ ಗುರಿ ತಲುಪಲು ನೀವು ಸಾವಿರ ಹೆಜ್ಜೆಗಳನ್ನು ಎತ್ತಿಡಬೇಕಾಗಬಹುದು. ಆದರೆ ಪೂರ್ತಿ ನಂಬಿಕೆಯಿಂದ ಆತ್ಮವಿಶ್ವಾಸದಿಂದ ಮೊದಲ ಹೆಜ್ಜೆಯನ್ನು ಎತ್ತಿಡಲು ನೀವು ಸಿದ್ಧವಾಗಿದ್ದರೆ ಆ ಪ್ರಯಾಣಕ್ಕೆ ಒಂದು ಆರಂಭ ದೊರೆತಂತೆಯೇ ಅಲ್ಲವೇ!

ಒಂದೊಂದೇ ಹೆಜ್ಜೆಯನ್ನಿಟ್ಟು, ಸಾವಿರ ಹೆಜ್ಜೆಗಳನ್ನು ಕ್ರಮಿಸಿದರೆ ಮಾತ್ರವೇ ಗುರಿಯನ್ನು ತಲುಪಲು ಸಾಧ್ಯ. ಮೊದಲ ಹೆಜ್ಜೆಯನ್ನು ಎತ್ತಿಡದೆ ಇದು ಸಾಧ್ಯವಿಲ್ಲ. ಎಂದರೆ, ಚಿಕ್ಕಚಿಕ್ಕ ಗೆಲುವುಗಳು ಕೂಡ ಒಂದು ದೊಡ್ಡ ಗೆಲುವನ್ನು ನಮಗೆ ಬಹುಮಾನವಾಗಿ ತಂದು ಕೊಡುತ್ತವೆ. ನಾಲ್ಕು ವರ್ಷಗಳಿಗೊಮ್ಮೆ ಮಾತ್ರ ನಡೆಯುವ ಒಲಿಂಪಿಕ್ ಸ್ಪರ್ಧೆಯಲ್ಲಿ ಭಾಗವಹಿಸಲೂ, ಅದರಲ್ಲಿ ಗೆಲುವು ಪಡೆಯಲೂ ಒಬ್ಬ ಕ್ರೀಡಾ ಪಟು ಪ್ರತಿ ದಿನವೂ ತರಬೇತಿಯನ್ನು ಪಡೆದುಕೊಳ್ಳಲೇಬೇಕು.

ಯಾವುದೇ ಒಂದು ಕೆಲಸದ ಆರಂಭವಾಗಿರಲಿ ಅದು ಪ್ರತ್ಯೇಕತೆಯನ್ನು ಹೊಂದಿರುತ್ತದೆ. ಭವಿಷ್ಯದ ಸಾಧನೆಯ ಆರಂಭ ಎಲ್ಲಿಂದ, ಹೇಗೆ ಪ್ರಾರಂಭವಾಗುತ್ತದೆ ಎಂಬುದನ್ನು ಯಾರಿಂದಲೂ ಗಣಿಸಲು ಸಾಧ್ಯವೇ ಇಲ್ಲ. ಜಗತ್ತಿನ ಎಲ್ಲಾ ಸಾಧನೆಗಳಿಗೂ ಖಂಡಿತವಾಗಿಯೂ ಒಂದು ಆರಂಭ ಇದ್ದೇ ಇರುತ್ತದೆ. ತಮಗಾದ ಅವಮಾನವನ್ನು, ತಮ್ಮ ವೈಯಕ್ತಿಕ ಅವಮಾನ ಎಂದು ಭಾವಿಸದೆ, ತನ್ನಂತೆ ಕಷ್ಟಕ್ಕೊಳಗಾಗಿರುವ ಎಲ್ಲಾ ಜನರ ಅವಮಾನವೆಂದು ಸಾಮೂಹಿಕ ಪ್ರಜ್ಞೆಯಿಂದ ಚಿಂತಿಸಿದ ಇಬ್ಬರು ವ್ಯಕ್ತಿಗಳು ಜಗತ್ತಿನ ಅತಿ ದೊಡ್ಡ ನಾಯಕರಾಗಿ ಇತಿಹಾಸದಲ್ಲಿ ಅಚ್ಚಳಿಯದ ಸ್ಥಾನ ಗಳಿಸಿದ್ದಾರೆ.

ಇಂಗ್ಲೆಂಡ್‌ಗೆ ಹೋಗಿ ವಿದ್ಯಾಭ್ಯಾಸ ಮಾಡಿ, ವಕೀಲರಾಗಿ, ದಕ್ಷಿಣ ಆಫ್ರಿಕಾದಲ್ಲಿ ಯಶಸ್ವಿಯಾಗಿ ವಕೀಲಿ ವೃತ್ತಿಯನ್ನು ಮಾಡುತ್ತಿದ್ದ ಗಾಂಧಿಯವರು, ತಾವು ದುಡಿದು ಸಂಪಾದಿಸಿದ ಹಣದಲ್ಲಿ ರೈಲಿನಲ್ಲಿ ಮೊದಲ ದರ್ಜೆಯ ಭೋಗಿಯಲ್ಲಿ ಟಿಕೆಟ್ ತೆಗೆದುಕೊಂಡು ಪ್ರಯಾಣ ಮಾಡುತ್ತಿದ್ದುದನ್ನು ನೋಡಿ, 'ನಿನ್ನಂತಹ ಗುಲಾಮನಿಗೆ ನಮ್ಮ ಜೊತೆಯಲ್ಲಿ ಒಟ್ಟಿಗೆ ಕುಳಿತು ಪ್ರಯಾಣ ಮಾಡಲು ಯೋಗ್ಯತೆ ಇಲ್ಲ' ಎಂದು ಹೀಯಾಳಿಸಿ ಗಾಂಧಿಯನ್ನು ಅರ್ಧ ಪ್ರಯಾಣದಲ್ಲೇ ರೈಲಿನಿಂದ ಕೆಳಗಿಳಿಸಿ ಬಿಟ್ಟರು ಬಿಳಿಯರು.

ಇದರಿಂದ ಗಾಂಧಿಯವರಿಗೆ ಅಪರಿಮಿತ ಅವಮಾನವಾಯಿತು. 'ಚೆನ್ನಾಗಿ ಓದಿ, ಉತ್ತಮ ರೀತಿಯಲ್ಲಿ ವೃತ್ತಿ ನಡೆಸುತ್ತಿರುವ ನನ್ನಂತಹವರಿಗೇ ಇಂತಹ ಸ್ಥಿತಿ ಎಂದಾದರೆ, ಭಾರತದಲ್ಲಿ ವಾಸಿಸುತ್ತಿರುವ ನನ್ನ ದೇಶದ ಜನರು ಇನ್ನು ಎಂತಹ ಅವಮಾನವನ್ನು ಎದುರಿಸುತ್ತಿರಬಹುದು?' ಎಂದು ಆ ಕ್ಷಣ ಗಾಂಧಿ ಯೋಚಿಸಿದರು. ಅದೇ ಅವರ ಹೊಸ ಪ್ರಯಾಣದ ಆರಂಭವಾಗಿತ್ತು.

ಅಮೇರಿಕದಲ್ಲಿ, ಬಸ್‌ನಲ್ಲಿ ಸರಿಯಾದ ಟಿಕೆಟ್ ತೆಗೆದುಕೊಂಡು ಪ್ರಯಾಣ ಮಾಡುತ್ತಿದ್ದ ಇನ್ನೊಬ್ಬ ಬಾಲಕ. ಬಿಳಿಯರು ಅರ್ಧ ದಾರಿಯಲ್ಲಿ ಅವನನ್ನೂ ಕೂಡ, 'ನೀನು ನಮ್ಮ ಜೊತೆಯಲ್ಲಿ ಸಮಾನವಾಗಿ ಕುಳಿತು ಈ ಬಸ್‌ನಲ್ಲಿ ಪ್ರಯಾಣಿಸುವಂತಿಲ್ಲ' ಎಂದು ಹೇಳಿ ಕೆಳಗಿಳಿಸಿಬಿಟ್ಟರು. 'ನಾನು ಬಿಳಿಯರಿಗಿಂತ ಅದು ಯಾವ ರೀತಿಯಲ್ಲಿ ಕಡಿಮೆಯಾಗಿ ಹೋಗಿದ್ದೇನೆ' ಎಂದು ಆ ಬಾಲಕನಿಗೆ ವಿಪರೀತ ಕೋಪ ಬಂದು ಬಿಟ್ಟಿತು.

'ಇದು ವೈಯಕ್ತಿಕವಾಗಿ ನನಗೆ ಮಾತ್ರ ನಡೆದ ಅವಮಾನವೇ? ನನ್ನಂತೆ ಕಪ್ಪು ವರ್ಣದವರಾಗಿ ಜನಿಸಿದ ಪ್ರತಿಯೊಬ್ಬರನ್ನೂ ಹೀಗೆ ತಾನೇ ಅರ್ಧ ದಾರಿಯಲ್ಲಿ ಕೆಳಗಿಳಿಸಿ ಬಿಡುತ್ತಾರೆ. ಅವರೆಲ್ಲರಿಗಾಗಿಯೂ ನಾನು ಹೋರಾಡಬೇಕು' ಎಂದು ತನಗಾದ ಅವಮಾನವನ್ನು ತನ್ನ ಸಮುದಾಯದವರೆಲ್ಲರ ಅವಮಾನವೆಂದು ಭಾವಿಸಿದ ಆ ಕ್ಷಣದಿಂದಲೇ ಮಾರ್ಟಿನ್ ಲೂಥರ್ ಕಿಂಗ್ ಅವರ ಹೊಸ ಕ್ರಾಂತಿಯ ಪ್ರಯಾಣ ಆರಂಭವಾಯಿತು.

ಹೊಸ ಆರಂಭವನ್ನು ತಂದು ಕೊಡುವ ಆ ಅಂಶ ಯಾವುದು ಎಂಬುದರ ಕಡೆ ಹೆಚ್ಚು ಗಮನ ಇಡಬೇಕು. ರಾಮ್‌ರಾಜ್ ಕಾಟನ್ ಸಂಸ್ಥೆಯ ಆರಂಭ ಕೂಡ ಇಂತಹ ಎರಡು ಬಗೆಯ ಅವಮಾನಗಳ ಕಾರಣದಿಂದಲೇ ಆರಂಭವಾದದ್ದು. ಒಂದು: ನನಗೆ ವೈಯಕ್ತಿಕವಾಗಿ ನಡೆದ ಒಂದು ಅವಮಾನ. ಇನ್ನೊಂದು: ನಾನು ಮಾನಸಿಕವಾಗಿ ತುಂಬ ಗೌರವಿಸುವ ನೇಕಾರರಿಗೆ ಆದ ಅವಮಾನ!

ಕಠಿಣವಾಗಿ ದುಡಿದು ಪಂಚೆಗಳನ್ನು ನೇಯ್ದು, ತೆಗೆದುಕೊಂಡು ಬಂದು ಜವುಳಿ ಅಂಗಡಿಗಳಿಗೆ ನೀಡಿ, ಅದಕ್ಕಾದ ಕೂಲಿಯನ್ನು ಪಡೆಯಲು ದಿನವಿಡೀ ಅಂಗಡಿಯ ಬದಿಯಲ್ಲಿ ಕುಳಿತಿರುತ್ತಿದ್ದ ನೇಕಾರರನ್ನು ಕಂಡು ನನಗೆ ತುಂಬಾ ವ್ಯಥೆಯಾಗುತ್ತಿತ್ತು. 'ತಾವು ನೇಯ್ದು ತಂದ ಬಟ್ಟೆಗಳನ್ನು ಅಂಗಡಿಗಳಲ್ಲಿ ಕೊಟ್ಟ ಮೇಲೆ, ಅದನ್ನು ತೆಗೆದುಕೊಂಡವರು ಅವರಿಗೆ ಹಣವನ್ನು ಕೂಡಲೇ ನೀಡಿದರೆ ಅವರು ಮನೆಗೆ ಹಿಂದಿರುಗಿ, ತಮ್ಮ ಕೆಲಸದ ಕಡೆ ಗಮನ ಹರಿಸಲು ಸಾಧ್ಯ! ಆದರೆ ಯಾವ ಕಾರಣಕ್ಕಾಗಿ ಹೀಗೆ ಇವರನ್ನು ಅನಗತ್ಯವಾಗಿ ದಿನವಿಡೀ ಹೀಗೆ ಕಾಯಿಸುತ್ತಾರೆ' ಎಂಬ ಪ್ರಶ್ನೆ ನನ್ನೊಳಗೆ ಸದಾ ಮೂಡುತ್ತಲೇ ಇತ್ತು.

'ಅವರ ದುಡಿಮೆಗೆ ತಕ್ಕ ಸಂಭಾವನೆಯನ್ನು ಕೂಡಲೇ ನೀಡಿದರೆ, ಅವರು ಬೇರೆ ಅಂಗಡಿಗಳಿಗೆ ಹೋಗಿ, ಅಲ್ಲಿ ವಿಚಾರಿಸಿ, ಅಲ್ಲಿ ತಾವು ನೇಯ್ದು ತಂದ ಪಂಚೆಗಳನ್ನು ಎಷ್ಟು ರೂಪಾಯಿಗಳಿಗೆ ಮಾರಲಾಗುತ್ತಿದೆ

ಎನ್ನುವುದನ್ನು ಅರಿತುಕೊಳ್ಳುತ್ತಾರೆ' ಎನ್ನುವ ಅಲ್ಪ ಕಾರಣದಿಂದ ಮಾತ್ರವೇ, ಅವರನ್ನು ದಿನವಿಡೀ ತಮ್ಮ ಅಂಗಡಿಯ ಮುಂದೆಯೇ ಕಾದು ಕುಳಿತುಕೊಳ್ಳುವಂತೆ ಮಾಡುತ್ತಿದ್ದರು. ಜನರ ಮಾನವನ್ನು ಕಾಪಾಡುವುದಕ್ಕಾಗಿ ವಸ್ತ್ರವನ್ನು ನೇಯ್ದು ತರುತ್ತಿದ್ದ ನೇಕಾರರು ತಾವು ಮಾತ್ರ ಮೇಲಂಗಿಯನ್ನೂ ಹಾಕಿಕೊಳ್ಳುವ ಅನುಕೂಲ ಕೂಡ ಇಲ್ಲದೆ, ಹೀಗೆ ಕಾಯುತ್ತಾ ಕುಳಿತುಕೊಳ್ಳಬೇಕಾಗಿರುವ ಸ್ಥಿತಿಯನ್ನು ಬದಲಾಯಿಸಬೇಕು ಎನ್ನುವ ಅಪೇಕ್ಷೆ ನನ್ನ ಮನಸ್ಸಿನಲ್ಲಿ ಮೂಡಿತು.

ಅದೇ ರೀತಿಯಾಗಿ ಒಮ್ಮೆ ನಾನು, ಒಂದು ಪಂಚತಾರಾ ಹೋಟೆಲಿಗೆ ಪಂಚೆ ಉಟ್ಟುಕೊಂಡು ಹೋದಾಗ, ನಾನು ಪಂಚೆ ಉಟ್ಟುಕೊಂಡು ಹೋಗಿದ್ದೆ ಎನ್ನುವ ಒಂದೇ ಒಂದು ಕಾರಣದಿಂದಾಗಿ ನನಗೆ ಒಳಗೆ ಹೋಗಲು ಅನುಮತಿಯನ್ನು ನಿರಾಕರಿಸಲಾಯಿತು. 'ನಾನು ನಮ್ಮ ಪರಂಪರೆಯ ಉಡುಗೆಯಾದ ಪಂಚೆಯನ್ನು ಮಾತ್ರವೇ ಉಟ್ಟುಕೊಳ್ಳುವುದು' ಎಂದು ಸಮಜಾಯಿಷಿ ನೀಡಿದ ನಂತರವೂ ಅವರು ನನ್ನ ಮಾತಿಗೆ ಯಾವುದೇ ಬೆಲೆ ಕೊಡಲಿಲ್ಲ. ಆ ಸಮಯದಲ್ಲಿ ನನ್ನೊಳಗೆ ಮೂಡಿದ ಕೋಪ ನ್ಯಾಯಯುತವಾದುದೇ ಆಗಿತ್ತು. ಆ ಕ್ಷಣವೇ ನಾನು, 'ಇಂತಹ ಪಂಚತಾರಾ ಹೋಟೆಲ್‌ಗಳಲ್ಲಿ ಪಂಚೆ ಉಟ್ಟುಕೊಂಡೂ ಹೋದರೂ ಕೂಡ ಇವರು ನನ್ನನ್ನು ಬನ್ನಿ ಬನ್ನಿ... ಎಂದು ಸ್ವಾಗತಿಸುವಂತಹ ಬದಲಾವಣೆಯನ್ನು ಖಂಡಿತ ತರಲೇಬೇಕು' ಎಂದು ದೃಢ ನಿಶ್ಚಯ ಮಾಡಿಕೊಂಡೆ.

'ನಮ್ಮ ಪಾರಂಪಾರಿಕ ಉಡುಗೆಯಾದ ಪಂಚೆಗೆ ವಿದೇಶಗಳಲ್ಲೂ ಕೂಡ ಗೌರವ ಇದೆ. ಆದರೆ ನಮ್ಮ ದೇಶದೊಳಗೆ ಅದಕ್ಕೆ ಬೆಲೆ ಇಲ್ಲದಂತಹ ಸ್ಥಿತಿ ಏರ್ಪಟ್ಟಿದೆಯಲ್ಲ!' ಎಂದು ಚಿಂತಿಸುತ್ತ ಕೂಡದೆ, 'ಪಂಚೆ ಉಡುವ ವ್ಯಕ್ತಿಯನ್ನು ಗೌರವಾನ್ವಿತ ವ್ಯಕ್ತಿಯೆಂದು ಭಾವಿಸುವಂತಹ ವಾತಾವರಣವನ್ನು ಸೃಷ್ಟಿಸಬೇಕು' ಎಂದು ಪ್ರತಿಜ್ಞೆ ಮಾಡಿಕೊಂಡು ದುಡಿಯಲು ಆರಂಭಿಸಿದೆ.

ರಾಮ್‌ರಾಜ್ ಕಾಟನ್ ಸಂಸ್ಥೆಯ ಅಸ್ತಿವಾರದ ಆರಂಭವೇ ಈ ಎರಡೂ ಘಟನೆಗಳು! ಒಂದು ಕಟ್ಟಡವನ್ನು ಕಟ್ಟಲು ಆರಂಭಿಸುವ ಮುನ್ನ ಬಲವಾದ ಅಸ್ತಿವಾರವನ್ನು ಹಾಕುವ ಹಾಗೆಯೇ, ಒಂದು ಕ್ರಿಯೆಯನ್ನು ಆರಂಭಿಸಲೂ ಒಂದು ಪ್ರಾರಂಭವೆನ್ನುವುದು ಇರಬೇಕು. ಸರಿಯಾದ ಅಸ್ತಿವಾರವಿಲ್ಲದ ಕಟ್ಟಡವು ದೃಢವಾಗಿ ನಿಲ್ಲಲಾರದು. ನಂಬಿಕಸ್ಥವಾದ ಆರಂಭವಿಲ್ಲದ ಯಾವ ಕ್ರಿಯೆಯೂ ಯಶಸ್ಸಿನ ಕಡೆಗೆ ಸಾಗದು.

ಸಾಮಾನ್ಯವಾಗಿ ಮನುಷ್ಯರಿಗೆ ಒಂದು ಕಾರ್ಯವನ್ನು ಆರಂಭಿಸಲು ಹಿಂಜರಿಕೆಯೂ, ಆತಂಕವೂ ಇರುತ್ತದೆ. 'ಇದು ಯಶಸ್ವಿಯಾಗಿ ಮುಗಿಯಬಹುದೇ?' ಎನ್ನುವ ಸಂದೇಹ ಎಲ್ಲರಿಗೂ ಇರುವುದು ಸಹಜವೇ. ಆದುದರಿಂದಲೇ ಯಾವುದನ್ನೇ ಆಗಲಿ ಸರಿಯಾದ ಸಮಯದಲ್ಲಿ ಆರಂಭಿಸದೆ, ಯೋಚಿಸಿ, ಹಿಂಜರಿದು, ನಿಧಾನ ಮಾಡಿ, ಪ್ರಮುಖ ಅವಕಾಶವನ್ನು ಕೈ ಬಿಟ್ಟು ಬಿಡುತ್ತಾರೆ. ಜಗತ್ಪ್ರಸಿದ್ಧ ತತ್ವಜ್ಞಾನಿಯಾದ ಪ್ಲೇಟೋ, 'ಯಾವುದೇ ನೆಪಗಳನ್ನು ಹೇಳಿಕೊಂಡಿರದೆ, ಮೊದಲಿಗೆ ಒಂದು ಕೆಲಸವನ್ನು ಆರಂಭಿಸಿ ಬಿಡಬೇಕು' ಎಂದು ಒತ್ತಿ ಹೇಳುತ್ತಾರೆ.

ಈಜು ಕಲಿಯಬೇಕು ಎಂದು ಒಬ್ಬ ವ್ಯಕ್ತಿ ನಿರ್ಧಾರ ತೆಗೆದು–ಕೊಂಡರೆ, ಪ್ರಾಥಮಿಕ ಸುರಕ್ಷತಾ ಏರ್ಪಾಡುಗಳೊಂದಿಗೆ, ಮೊದಲು ನೀರಿನೊಳಗೆ ಧುಮುಕಬೇಕು! ನಡೆಯಬೇಕು ಎಂದು ಅಪೇಕ್ಷಿಸುವ ಒಂದು ಮಗು, ತನಗೆ ನಡೆಯಲು ಗೊತ್ತಿಲ್ಲ ಎಂಬುದನ್ನಾಗಲೀ, ತಾನು ಇದಕ್ಕೆ ಮುನ್ನ ಯಾವಾಗಲೂ ನಡೆದದ್ದೇ ಇಲ್ಲ ಎಂಬುದನ್ನಾಗಲೀ ಯೋಚಿಸಿ ಹಿಂಜರಿಯುವುದಿಲ್ಲ. ತನ್ನ ಮೊದಲ ಹೆಜ್ಜೆಯನ್ನು ನಂಬಿಕೆಯಿಂದಲೇ ಅದು ಎತ್ತಿಡುತ್ತದೆ. ಕೆಳಗೆ ಬಿದ್ದರೂ ಕೂಡ ಮತ್ತೆ ತನ್ನ ಹಿಂದಿನ ಅದೇ ಆಸಕ್ತಿಯಿಂದ ಮತ್ತೊಂದು ಹೆಜ್ಜೆಯನ್ನು ಎತ್ತಿಡುತ್ತದೆ. ಕೆಳಗೆ ಬಿದ್ದರೂ, ಮತ್ತೆ ಆಸಕ್ತಿಯಿಂದ ಮುಂದಿನ ಹೆಜ್ಜೆಯನ್ನು ಎತ್ತಿಡುವ ಮೂಲಕ ತನ್ನ ಪ್ರಯತ್ನವನ್ನು ಮುಂದುವರೆಸುತ್ತದೆ.

ನಾವು ಆರಂಭಿಸುವ ಕಾರ್ಯದಲ್ಲಿ ಚಿಕ್ಕ ಚಿಕ್ಕ ಅಡೆತಡೆಗಳು, ಹಿಂದೇಟುಗಳು ಏರ್ಪಡಬಹುದು. ಅವೆಲ್ಲವೂ ನಾವು ಗಳಿಸಲಿರುವ ಅತಿ ದೊಡ್ಡ ಯಶಸ್ಸಿನ ಗುರುತುಗಳೂ ಆಗಿರಬಹುದು! ಹೊಸ ವರ್ಷದಲ್ಲಿ ನಂಬಿಕೆಯೊಂದಿಗೆ ಹೊಸ ಪ್ರಯತ್ನವನ್ನು ಆರಂಭಿಸೋಣ.

ನಮ್ಮ ಗೌರವಾನ್ವಿತ ಗ್ರಾಹಕರು, ನಮಗೆ ಸದಾ ಬೆಂಬಲ ನೀಡುತ್ತ ಬಂದಿರುವ ನಮ್ಮ ಆಪ್ತರಾದ ನೇಕಾರರು, ನಮ್ಮ ಹೆಮ್ಮೆಯ ಮಾರಾಟಗಾರರು, ನಮ್ಮೊಂದಿಗೆ ಸೇರಿ ಕೆಲಸ ಮಾಡುತ್ತಿರುವ ನಮ್ಮ ಪ್ರೀತಿಯ ನೌಕರರು, ಆತ್ಮೀಯ ಸಿಬ್ಬಂದಿಗಳು, ನಮ್ಮ 'ಬೆಳುಪು' ಸಂಚಿಕೆಯ ಓದುಗರು... ಇವರೆಲ್ಲರಿಗೂ ಹೊಸ ವರ್ಷದ ಹಾಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

The Culturepreneur

ಗುರು ಕೃಪೆ
ಬಾಳ್ಗೆ ಭೂಮಂಡಲ –ಬಾಳ್ಗೆ
ಸಮೃದ್ಧಿಯೊಂದಿಗೆ!

ಕೆ.ಆರ್. ನಾಗರಾಜನ್

ಸಂಸ್ಥಾಪಕರು – ರಾಮ್‌ರಾಜ್ ಕಾಟನ್.

ಹೊಸ ಆರಂಭ ದೊರಕುತ್ತದೆ!

ಮಹೇಶ್ ಒಂದು ದೊಡ್ಡ ಕಂಪೆನಿಯಲ್ಲಿ ಸೀನಿಯರ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ನೂರಾರು ಜನರನ್ನು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಕೆಲಸ ಮಾಡಿಸುವ ಜವಾಬ್ದಾರಿಯುತ ಹುದ್ದೆ ಅವರದಾಗಿತ್ತು. ಹಾಗಿದ್ದರೂ ಅವರು ಯಾರೊಂದಿಗೂ ಕೋಪದಿಂದ ಮಾತನಾಡಿರುವುದನ್ನು ಯಾರೂ ಒಮ್ಮೆಯೂ ನೋಡಿದ್ದೇ ಇಲ್ಲ. ಎಂತಹ ಗಂಭೀರ ಸನ್ನಿವೇಶದಲ್ಲಿ ಕೂಡ ಅವರು ಭಾವಾವೇಶದಿಂದ ಪದಗಳನ್ನು ಆಡಿದ್ದಿಲ್ಲ. ತನ್ನ ಮೇಲಧಿಕಾರಿಯ ಬಳಿ ತೋರಿಸುತ್ತಿದ್ದ ಅದೇ ವಿನಯವನ್ನು ತಮ್ಮ ಕೆಳಗೆ ಕೆಲಸ ಮಾಡುತ್ತಿದ್ದ ಸಾಮಾನ್ಯ ಕೆಲಸಗಾರರ ಬಳಿಯೂ ತೋರಿಸುತ್ತಿದ್ದರು. ಅದೇ ಸಮಯದಲ್ಲಿ ನೌಕರರ ಬಳಿ ಕೆಲಸ ತೆಗೆದುಕೊಳ್ಳುವುದರಲ್ಲಿ ಕೂಡ ಯಾವುದೇ ಕೊರತೆಯನ್ನೂ ಅವರ ಬಳಿ ಕಾಣಲು ಸಾಧ್ಯವಿರಲಿಲ್ಲ. ಅವರ ಮೇಲೆ ಎಲ್ಲರೂ ತುಂಬ ಗೌರವವನ್ನು ಇಟ್ಟುಕೊಂಡಿದ್ದರು. ಆ ಕಾರಣದಿಂದಲೇ ಅವರು ಯಾವ ಕೆಲಸ ಹೇಳಿದರೂ ಎಲ್ಲರೂ ಗೌರವದಿಂದ ಮಾಡುತ್ತಿದ್ದರು.

ಮಹೇಶ್ ನಿವೃತ್ತಿ ಹೊಂದಿದ ದಿನ ಕಛೇರಿಯ ಎಲ್ಲ ನೌಕರರೂ ಅವರ ಬಳಿ ಬಂದು ಅವರ ಕೈ ಕುಲುಪಿ, ಕಣ್ಣೀರಿನಿಂದ ಅವರನ್ನು ಬೀಳ್ಕೊಟ್ಟರು. ಕಂಪೆನಿಯ ಮಾಲೀಕರು ಇವರ ಬಳಿ, 'ನಿಮಗೆ ನಿಜವಾಗಿಯೂ ಎಂದೂ ಕೋಪ ಬಂದದ್ದೇ ಇಲ್ಲವೇ? ಅದು ಹೇಗೆ ಇಷ್ಟು ಜನ ನೌಕರರ ಬಳಿಯೂ ಇಷ್ಟು ವರ್ಷಗಳ ಕಾಲ ಸಮಾಧಾನದಿಂದ ಕೆಲಸ ಮಾಡಿಸಲು ನಿಮ್ಮಿಂದ ಸಾಧ್ಯವಾಯಿತು!?' ಎಂದು ಕೇಳಿದರು. ಮಹೇಶ್ ಹೇಳಿದ ಉತ್ತರ ನಮ್ಮೆಲ್ಲರಿಗೂ ಒಂದು ಒಳ್ಳೆಯ ಪಾಠ!

'ನನ್ನ ತಂದೆ ಒಂದು ಕಂಪೆನಿಯಲ್ಲಿ ಸೂಪರ್ ವೈಸರ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ನಾವು ಹೊರಗೆ ಎಲ್ಲಾದರೂ ಹೋದಾಗ ಅಲ್ಲಿ ನನ್ನ ತಂದೆಗೆ ಸಿಗುತ್ತಿದ್ದ ಗೌರವವನ್ನು ನೋಡಿ, "ಅಪ್ಪ ತುಂಬ ಶಕ್ತಿಶಾಲಿಯಾದವರು, ಬಲಶಾಲಿಯಾದವರು" ಎನ್ನುವ ಭಾವನೆ ನನ್ನೊಳಗೆ ಮೂಡುತ್ತಿತ್ತು. ಅವರನ್ನು ನನ್ನ ರೋಲ್ ಮಾಡೆಲ್ ಆಗಿ ನಾನು ಭಾವಿಸುತ್ತಿದ್ದೆ.

ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ಒಂದು ದಿನ ತರಗತಿಗಳು ಬೇಗನೆ ಮುಗಿದುದುದರಿಂದ, ಅಪ್ಪನನ್ನು ಭೇಟಿಯಾಗಲು ಅವರಿಗೆ ಯಾವ ಮಾಹಿತಿಯನ್ನೂ ನೀಡದೆ, ಸರ್‌ಪ್ರೈಜ್ ಆಗಿ ಅವರನ್ನು ಭೇಟಿಯಾಗಲು ಅವರ ಕಛೇರಿಗೆ ಹೋದೆ. ಅಲ್ಲಿ ನಾನು ನೋಡಿದ ದೃಶ್ಯ ನನ್ನನ್ನು ತುಂಬ ಬೆಚ್ಚಿ ಬೀಳಿಸಿತು. ಆ ಕಂಪೆನಿಯ ಮಾಲೀಕರು ಅತ್ಯಂತ ಜೋರು ಧ್ವನಿಯಲ್ಲಿ ನನ್ನ ಅಪ್ಪನನ್ನು ಗದರಿಸುತ್ತಿದ್ದರು. ಕಛೇರಿಯ ಎಲ್ಲಾ ನೌಕರರ ಮುಂದೆಯೇ ಇದು ನಡೆಯುತ್ತಿತ್ತು. ನನ್ನ ಅಪ್ಪ ತಲೆ ತಗ್ಗಿಸಿ ನಿಂತುಕೊಂಡಿದ್ದರು. ಅಲ್ಲಿಂದ ಹಿಂದೆ ಬರುವಾಗ ಅಪ್ಪನ ಕಣ್ಣುಗಳಲ್ಲಿ ನೀರು ತುಂಬಿತ್ತು. ತುಂಬ ಶಕ್ತಿಶಾಲಿಯಾದವರು ಎಂದು ನಾನು ನಂಬಿದ್ದ ನನ್ನ ಅಪ್ಪ ಅಳುತ್ತಿದ್ದರು! ಸಮಾಧಾನ ಹೇಳಲು ಕೂಡ ಯಾರೂ ಇಲ್ಲದೆ ಅವರು ಪರಿತಪಿಸುತ್ತಿದ್ದುದನ್ನು ನಂಬಲು ನನ್ನಿಂದ ಸಾಧ್ಯವೇ ಇರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನನ್ನನ್ನು ಅವರು ಅಲ್ಲಿ ನೋಡಿದರೆ ಅವರು ಇನ್ನೂ ಕುಗ್ಗಿ ಹೋಗಿ ಬಿಡಬಹುದು ಎಂದು ಭಾವಿಸಿ ನಾನು ಅವರ ಕಣ್ಣಿಗೆ ಬೀಳದೆ ಅಲ್ಲಿಂದ ಹೊರ ಬಂದು ಮನೆಗೆ ಮರಳಿದೆ.

ಆ ದಿನ ನಾನು ಒಂದು ನಿರ್ಧಾರ ತೆಗೆದುಕೊಂಡೆ. "ಭವಿಷ್ಯದಲ್ಲಿ ನಾನು ಯಾವ ಕೆಲಸಕ್ಕೆ ಹೋದರೂ ಅಥವಾ ಸ್ವಂತ ಉದ್ಯಮವನ್ನು ಆರಂಭಿಸಿದರೂ, ನನ್ನ ಬಳಿ ಕೆಲಸ ಮಾಡುವ ಜನರ ಬಳಿ ನಾನು

ನನ್ನ ತಂದೆಯ ಮಾಲೀಕರು ನಡೆದುಕೊಂಡ ರೀತಿ ನಡೆದುಕೊಳ್ಳಲೇ ಕೂಡದು" ಎಂಬುದೇ ಅಂದು ನಾನು ತೆಗೆದುಕೊಂಡ ನಿರ್ಧಾರ. ಏಕೆಂದರೆ, ಎಲ್ಲಾ ಕೆಲಸಗಾರರಿಗೂ ಮಗನೋ ಮಗಳೋ ಇದ್ದೇ ಇರುತ್ತಾರೆ. ಆ ಮಕ್ಕಳು ಕೂಡ ತಮ್ಮ ತಂದೆ ಶಕ್ತಿಶಾಲಿಯಾದವರು ಎಂದೇ ಭಾವಿಸುತ್ತಾರೆ. ನಾನು ಅವರ ನಂಬಿಕೆಯನ್ನು ಮುರಿಯಬಾರದು ಎಂದು ನಿರ್ಧಾರ ತೆಗೆದುಕೊಂಡೆ. ಆದ್ದರಿಂದಲೇ ನನ್ನಿಂದ ಹೀಗೆ ನಡೆದುಕೊಳ್ಳಲು ಸಾಧ್ಯವಾಯಿತು" ಎಂದು ಮಹೇಶ್ ಹೇಳಿದರು.

ಎಂತಹ ನಿರ್ಧಾರದಿಂದಲೇ ಆಗಲಿ, ಒಂದು ಹೊಸ ಆರಂಭ ಉದಯವಾಗುತ್ತದೆ. ಒಬ್ಬ ಹೊಸ ವ್ಯಕ್ತಿಯಾಗಿ ಬದಲಾಗಿ, ಹೊಸ ಜೀವನವನ್ನು ಆರಂಭಿಸಲು ನೀವು ಕೆಲವು ಬದಲಾವಣೆಗಳಿಗೆ ತಯಾರಾಗಬೇಕು. ಅವು:

● ನಿಮಗೇನು ಬೇಕು ಎಂಬುದನ್ನು ಮೊದಲು ತೀರ್ಮಾನಿಸಿಕೊಳ್ಳಿ. ಜೀವನದಲ್ಲಿ, ಕೆಲಸದಲ್ಲಿ, ಉದ್ಯಮದಲ್ಲಿ, ವ್ಯಾಪಾರದಲ್ಲಿ ಬದಲಾವಣೆಯಾಗಬೇಕು ಎಂಬುದಕ್ಕಾಗಿ ಹೊಸದಾಗಿ ಒಂದನ್ನು ಮಾಡಬೇಕಾಗಿ ಬರಬಹುದು ಅಥವಾ ಬೇರೆ ದಾರಿ ಇಲ್ಲದೆ, ಹೊಸ ಆರಂಭದೊಳಗೆ ನೀವು ತಳ್ಳಲ್ಪಟ್ಟಿರಬಹುದು. ಪರಿಸ್ಥಿತಿ ಎಂತಹುದೇ ಆಗಿದ್ದರೂ, ಆ ಆರಂಭವೂ, ಮೂಲವೂ ನಾವೇನಾಗಬೇಕು ಎಂದು ಬಯಸುತ್ತೇವೆಯೋ ಅದನ್ನು ತೀರ್ಮಾನಿಸಬೇಕು. ಅದಕ್ಕೆ ಮೊದಲು ಏನು ಮಾಡಿದರೆ ಅದಕ್ಕೆ ಸಹಾಯಕವಾಗಿರುತ್ತದೆ ಎಂಬುದನ್ನೂ ಅರಿತುಕೊಳ್ಳಬೇಕು. ಸರಿಯಾದ ಗುರಿಗಳೊಡನೆ ಯಾವುದನ್ನೇ ಆಗಲಿ ಆರಂಭಿಸಿದರೆ, ನಂಬಿಕೆಯೊಂದಿಗೆ ಹೆಜ್ಜೆ ಹಾಕಲು ಸಾಧ್ಯವಾಗುತ್ತದೆ.

● ನೀವು ಮಾಡುವ ಕೆಲಸದ ಪರಿಣಾಮಗಳು ಏನಾಗಿರುತ್ತದೆ ಎಂಬುದನ್ನು ಯೋಚಿಸಿ ನೋಡಿ. ಲಾಭ ನಷ್ಟಗಳನ್ನು ಲೆಕ್ಕ ಹಾಕಿ ನೋಡಿ. ಈ ಕಾರ್ಯದ ಮೂಲಕ ನಾವು ಗಳಿಸುವುದು ಹೆಚ್ಚಾಗಿರುತ್ತದೆಯೇ, ಕಳೆದುಕೊಳ್ಳುವುದು ಹೆಚ್ಚಾಗಿರುತ್ತದೆಯೇ ಎಂದು ಮೌಲ್ಯಮಾಪನ ಮಾಡಿ ನೋಡಿ. ಅನಿರೀಕ್ಷಿತ ನಷ್ಟಗಳು ಏರ್ಪಟ್ಟರೆ ಹೇಗೆ ಅದನ್ನು ನಿಭಾಯಿಸುವುದು ಎನ್ನುವುದನ್ನೂ ಯೋಜಿಸಿ.

● 'ಜೀವನವನ್ನು ಹೊಸದಾಗಿ ಆರಂಭಿಸುವುದು ಸುಲಭ ಎನ್ನುವುದಾದರೆ, ಎಲ್ಲರೂ ದಿನದಿನವೂ ಅದನ್ನು ಮಾಡುತ್ತಲೇ ಇರುತ್ತಾರೆ. ಆದರೆ ನಾವು ಜೀವನದಲ್ಲಿ ತುಂಬ ತಡೆಗಳನ್ನು ದಾಟಬೇಕಾಗಿರುತ್ತದೆ. ಹೀಗೆ ಜೀವನದಲ್ಲಿ ಏರ್ಪಡುವ ಅನಿರೀಕ್ಷಿತವಾದ ಬದಲಾವಣೆಗಳಿಗೆ ಒಗ್ಗಿಕೊಳ್ಳಬೇಕು. ತಡೆಗಳನ್ನು ಹೇಗೆ ನಿಭಾಯಿಸುವುದು, ಜೀವನದಲ್ಲಿ ಏರ್ಪಡುವ ಬದಲಾವಣೆಗಳಿಗೆ ನಾವು ಸಿದ್ಧರಾಗಿದ್ದೇವೆಯೇ ಎಂಬುದನ್ನೆಲ್ಲ ಯೋಚಿಸಿ ನಿರ್ಧರಿಸಿಬೇಕು. ಇಲ್ಲದೇ ಹೋದಲ್ಲಿ ನಮ್ಮ ಮಾನಸಿಕ ತಡೆಯನ್ನು ದಾಟುವುದಕ್ಕೇ ನಮ್ಮಿಂದ ಸಾಧ್ಯವಾಗದೇ ಹೋಗಬಹುದು.

● ನಮ್ಮ ಬಳಿ ಸರಿಯಾದ ಯೋಜನೆಗಳು ಇಲ್ಲದೇ ಹೋದಲ್ಲಿ ನಾವು ಏನನ್ನೂ ಮಾಡಲು ಸಾಧ್ಯವಾಗದೇ ಹೋಗಬಹುದು. ಏನೇನು ಮಾಡಲಿದ್ದೇವೆ, ಅವುಗಳನ್ನು ಹೇಗೆ ಮಾಡಲಿದ್ದೇವೆ, ಅದಕ್ಕೆ ಯಾವುದೆಲ್ಲ ಅಗತ್ಯವಿದೆ, ನಮಗೆ ಯಾರೆಲ್ಲ ಸಹಾಯ ಮಾಡುತ್ತಾರೆ, ಅದನ್ನು ಪಡೆಯುವುದಕ್ಕಾಗಿ ನಾವು ನಮ್ಮ ಬದುಕಿನಲ್ಲಿ ಏನೇನು ಬದಲಾವಣೆಗಳನ್ನು ಮಾಡಿಕೊಳ್ಳಬೇಕು... ಹೀಗೆ ಪ್ರತಿಯೊಂದನ್ನು ಕುರಿತೂ ಯೋಜನೆ ರೂಪಿಸಿಕೊಳ್ಳಿ. ಅನಿರೀಕ್ಷಿತವಾದ ಹಿನ್ನಡೆಗಳು ಉಂಟಾದಲ್ಲಿ ಯಾವುದನ್ನೆಲ್ಲ ಬದಲಾಯಿಸಬೇಕು ಎಂಬುದನ್ನೂ ಮೊದಲೇ ಯೋಚಿಸಿಟ್ಟುಕೊಳ್ಳಿ. ಇದನ್ನು ಅನುಸರಿಸಿದರೆ, ಎಂತಹ ಪರಿಸ್ಥಿತಿಯಲ್ಲೂ ನಿಮ್ಮೊಳಗೆ ಗೊಂದಲಗಳಿರುವುದಿಲ್ಲ.

● ಇಷ್ಟು ದಿನಗಳು ನೀವು ಹೇಗಿದ್ದಿರೋ ಈಗಲೂ ಹಾಗೆಯೇ ಇದ್ದುಕೊಂಡು ಹೊಸದಾಗಿ ಏನನ್ನಾದರೂ ಸಾಧಿಸಲು ಸಾಧ್ಯವಿಲ್ಲ. ಜೀವನದಲ್ಲಿ ತಲೆಕೆಳಗಾಗಿ ಏರ್ಪಡಬಹುದಾದ ಯಾವುದೇ ಬದಲಾವಣೆಗಳಿಗಾದರೂ ಸಿದ್ಧರಾಗಿರಿ. ಹೊಸದಾಗಿ ಅರಳಿದ ಒಂದು ಹೂವಿನಂತೆ ನಿಮ್ಮ ಪ್ರತಿಯೊಂದು ದಿನವೂ ನವ ಚೈತನ್ಯದಿಂದ ತುಂಬಿರಬೇಕು. ಸಕಾರಾತ್ಮಕ ಚಿಂತನೆಗಳೊಂದಿಗೇ ಎಲ್ಲವನ್ನೂ ಮಾಡಬೇಕು. ನೀವು ಮಾಡುವ ಕೆಲಸ ಯಾವುದೇ ಆಗಿದ್ದರೂ, ಅದರಲ್ಲಿ ಪೂರ್ಣ ನಂಬಿಕೆಯೊಂದಿಗೆ ಆತ್ಮವಿಶ್ವಾಸದಿಂದ ತೊಡಗಿಸಿಕೊಳ್ಳಬೇಕು.

● ನಿಮ್ಮ ಗಮನ ಪೂರ್ತಿಯಾಗಿ ನಿಮ್ಮ ಮೇಲೆ ಮಾತ್ರವೇ ಇರಬೇಕು. ಇತರರ ಬಳಿ ಏನೆಲ್ಲ ಇದೆ, ಅವರು ಏನೇನನ್ನೆಲ್ಲ ಸಾಧಿಸಿದರು ಎಂಬುದನ್ನೆಲ್ಲ ನೋಡಿ, 'ನಾನು ಇದಕ್ಕೆಲ್ಲ ಅರ್ಹನಲ್ಲವೇ?' ಎಂದು ಯೋಚಿಸಿದರೆ, ನಿಮ್ಮೊಳಗೆ ನಂಬಿಕೆ ಕುಸಿದು ಬಿಡಬಹುದು. ನಿಮ್ಮ ಬಳಿ ಇರುವುದನ್ನಿಟ್ಟುಕೊಂಡೇ ಉತ್ತಮವಾಗಿ ಏನನ್ನು ಮಾಡಲು ಸಾಧ್ಯವೋ ಅದನ್ನು ಮಾಡಿ. ನಿಮ್ಮ ಸಾಮರ್ಥ್ಯಕ್ಕೆ ತಕ್ಕ ಪ್ರತಿಫಲ ಖಂಡಿತ ದೊರಕಿಯೇ ದೊರಕುತ್ತದೆ.

● ಹೊಸದಾಗಿ ಒಂದು ವಿಷಯವನ್ನು ಆರಂಭಿಸುವುದಕ್ಕೋ, ಮಾಡುವುದಕ್ಕೋ ಯಾವಾಗಲೂ ಹೆದರಿಕೊಳ್ಳಬೇಡಿ. ಏನನ್ನು ಮಾಡಲು ಆರಂಭಿಸಿದರೂ, ಸಂತೋಷದಿಂದ ಆರಂಭಿಸಿ. ಒಳ್ಳೆಯ ಪರಿಣಾಮಗಳಿಗಾಗಿ ತಾಳ್ಮೆಯಿಂದ ಕಾಯಿರಿ. ನಿಮ್ಮ ಪರಿಸ್ಥಿತಿ ತಿಳಿಯದೆ ಇತರರು ಮಾತನಾಡುವ ಮಾತುಗಳಿಗೆ ಕಿವಿಗೊಡಬೇಡಿ. ನಿಮ್ಮಿಂದ ಖಂಡಿತಾ ಜಯಿಸಲು ಸಾಧ್ಯ! ●

ಯಾವುದರಿಂದ ಆರಂಭಿಸುತ್ತೇವೆ?

ನೀವು ಕಡಿದಾದ ಬೆಟ್ಟದ ಮೇಲೆ ನಿಂತು, ಅಲ್ಲಿಂದ ಒಂದು ಬಂಡೆಯನ್ನು ಮೇಲಕ್ಕೆ ತಳ್ಳಲು ಪ್ರಯತ್ನಿಸಿದರೂ ಕೂಡ, ಅದು ತುಂಬ ಬೇಗನೆ ನೆಲಕ್ಕೆ ಜಾರಿ ಬೀಳುತ್ತದೆ. ನೀವು ಅದನ್ನು ಮತ್ತೆ ಮೇಲಕ್ಕೆ ಎಳೆದೊಯ್ದರೂ ಕೂಡ, ಮತ್ತೆ ಅದೇ ಸಂಭವಿಸುತ್ತದೆ. ಈ ಕೆಲಸವನ್ನು ಪ್ರಯತ್ನಿಸುವುದನ್ನು ಮುಂದುವರಿಸುವುದಕ್ಕಿಂತ ಅಸಂಬದ್ಧತೆ ಇನ್ನೊಂದಿಲ್ಲ. ಅನೇಕ ಜನರು ಹೀಗೆಯೇ ಅಸಾಧ್ಯವಾದ ಒಂದು ಕೆಲಸವನ್ನು ಮತ್ತೆ ಮತ್ತೆ ಮಾಡಲು ಪ್ರಾರಂಭಿಸುತ್ತಾರೆ ಮತ್ತು ಅದರಲ್ಲಿ ವಿಫಲರಾಗುತ್ತಾರೆ.

ಒಂದು ಕಂಪನಿ ಅನಿರೀಕ್ಷಿತವಾಗಿ ನಷ್ಟ ಅನುಭವಿಸಿದುದರಿಂದ, ತನ್ನ ಇಬ್ಬರು ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕಿತು. ಮೊದಲ ಉದ್ಯೋಗಿ ತನ್ನ ಆಸನದಲ್ಲಿ ಕುಳಿತು, "ನಾನು ಈಗ ಮತ್ತೆ ಕೆಲಸ ಹುಡುಕಬೇಕಾದ ದುರದೃಷ್ಟಕರ ಸ್ಥಿತಿಯಲ್ಲಿದ್ದೇನೆ" ಎಂದು ದುಃಖಿಸಿದ. ಎರಡನೇ ವ್ಯಕ್ತಿ ಕುಳಿತು,ಕಂಪ್ಯೂಟರ್‌ನಲ್ಲಿ ಏನೋ ಒಂದನ್ನು ಟೈಪ್ ಮಾಡಲು ಪ್ರಾರಂಭಿಸಿದ. "ನೀವು ಇನ್ನೂ ಈ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೀರಾ?" ಮೊದಲ ವ್ಯಕ್ತಿ ಅವನನ್ನು ಕೇಳಿದ. "ಇಲ್ಲ. ನಾನು ನನ್ನ ಬಯೋ–ಡೇಟಾವನ್ನು ಸಿದ್ಧಪಡಿಸುತ್ತಿದ್ದೇನೆ. ಇದು, ಇದಕ್ಕಿಂತ ಉತ್ತಮ ಉದ್ಯೋಗವನ್ನು ಹುಡುಕುವ ಆರಂಭ ಎಂದು ನಾನು ಭಾವಿಸುತ್ತೇನೆ" ಎಂದ. ನಾವು ಎಲ್ಲಿಂದ ಪ್ರಾರಂಭಿಸುತ್ತೇವೆ ಎಂಬುದು ಮುಖ್ಯ.

ಬದಲಾವಣೆಯೂ ಆರಂಭವೂ!

ಒಬ್ಬ ವ್ಯಕ್ತಿಯು ತನ್ನ ಎಲ್ಲಾ ಕ್ರಿಯೆಗಳನ್ನೂ ತಲೆಕೆಳಗು ಮಾಡಿದರೆ ಮಾತ್ರವೇ ಹೊಸದನ್ನು ಪ್ರಾರಂಭಿಸಬಹುದು ಎಂದು ಕೆಲವರು ಹೇಳಬಹುದು. ಆದರೆ ಒಬ್ಬ ವ್ಯಕ್ತಿಯು ತನ್ನ ಸ್ವಭಾವವನ್ನು ಸಂಪೂರ್ಣವಾಗಿ ತ್ಯಜಿಸಿ ಹೊಸ ವ್ಯಕ್ತಿಯಾಗಲು ಸಾಧ್ಯವೇ ಇಲ್ಲ. ಆದರೆ, ಮರಿಹುಳು ಚಿಟ್ಟೆಯಾಗಿ ರೂಪಾಂತರಗೊಳ್ಳುವಂತೆಯೇ, ಅವನು ಈಗಿರುವುದಕ್ಕಿಂತ ಉತ್ತಮ ವ್ಯಕ್ತಿಯಾಗಿ ಮೇಲೇರಲು ಸಾಧ್ಯವಿದೆ. ಆ ಏರಿಕೆಯು ಅವನಿಗೆ ಹೊಸ ಆರಂಭದ ಭರವಸೆಯನ್ನು ನೀಡುತ್ತದೆ.

ಹೊಸ ಆರಂಭವನ್ನು ಮಾಡಲು ಪ್ರಯತ್ನಿಸುವಾಗ ನೀವು ಮರೆಯಬಾರದ ಕೆಲವು ವಿಷಯಗಳಿವೆ. ನಿಮ್ಮ ದೌರ್ಬಲ್ಯಗಳನ್ನು ಮೊದಲು ಗುರುತಿಸಿ. ನೀವು ಅವುಗಳನ್ನು ತಕ್ಷಣ ಬದಲಾಯಿಸಲು ಸಾಧ್ಯವಿಲ್ಲ. ಆದರೆ, ಅವು ನಿಮ್ಮ ಚಟುವಟಿಕೆಗೆ ಅಡ್ಡಿಯಾಗದಂತೆ ನೋಡಿಕೊಳ್ಳಿ. ನಿಮ್ಮ ಸಾಮರ್ಥ್ಯಗಳು ಏನೆಂಬುದನ್ನು ಕೂಡ ಗುರುತಿಸಿ ಮತ್ತು ಅದಕ್ಕೆ ತಕ್ಕಂತೆ ವರ್ತಿಸಿ. ನಿಮ್ಮ ಉತ್ಸಾಹಗಳು, ಆಸಕ್ತಿಗಳು ಮತ್ತು ಪ್ರತಿಭೆಗಳು ಏನೆಂದು ತಿಳಿದುಕೊಳ್ಳಿ ಮತ್ತು ಅಲ್ಲಿಂದ ಪ್ರಾರಂಭಿಸಿ.

ವರ್ತಮಾನದಲ್ಲಿ ಸಂತೋಷ!

ಶಿಥಿಲಗೊಂಡ ಮರದ ಸೇತುವೆಯ ಮೇಲೆ ಮೂವರು ಪುರುಷರು ನಡೆದುಕೊಂಡು ಹೋಗುತ್ತಿದ್ದರು. ಸೇತುವೆ ಬಲವಾದ ಗಾಳಿಗೆ ತೀವ್ರವಾಗಿ ತೂಗಾಡುತ್ತಿದ್ದುದರಿಂದ ಸೇತುವೆಯ ಅಂಚಿನಲ್ಲಿ ನಡೆಯುತ್ತಿದ್ದ ವ್ಯಕ್ತಿ ನೋವಿನಿಂದ ನರಳಿದ. ಹೀಗೆ ನೋವನ್ನು ಅನುಭವಿಸುವುದಕ್ಕಿಂತ ಕೆಳಗಿನ ನದಿಗೆ ಹಾರುವುದೇ ಉತ್ತಮ ಎಂದು ಅವನು ಯೋಚಿಸಿದ. ಮಧ್ಯದಲ್ಲಿ ಸುರಕ್ಷಿತವಾಗಿ ನಡೆಯುತ್ತಿದ್ದ ಎರಡನೇ ವ್ಯಕ್ತಿಗೆ ಸೇತುವೆ ಇನ್ನೇನು ಮುರಿದು ಕೆಳಗೆ ಬೀಳುತ್ತದೆ ಎಂದು ಭಯವಾಯಿತು. ಮೂರನೇ ವ್ಯಕ್ತಿ ಮಾತ್ರ ಸೇತುವೆಯ ಕೊನೆಯಲ್ಲಿ ನಡೆದು ಸಾಗುತ್ತಾ, ನದಿಯ ಸೌಂದರ್ಯವನ್ನು ಆನಂದಿಸಿದ.

ಮೊದಲನೆಯ ಮನುಷ್ಯ ಭೂತಕಾಲದಲ್ಲಿ ಬದುಕುತ್ತಾನೆ. ಅವನಿಗೆ ಜೀವನದ ಕಹಿ ಕ್ಷಣಗಳು ಮಾತ್ರ ನೆನಪಾಗುತ್ತವೆ. ಎರಡನೆಯವನು ಭವಿಷ್ಯದ ಬಗ್ಗೆ ಚಿಂತಿಸುತ್ತಾನೆ. ಅವನು ಯಾವಾಗಲೂ ಭಯದಲ್ಲಿ ಮುಳುಗಿರುತ್ತಾನೆ. ಮೂರನೆಯವನು ವರ್ತಮಾನದಲ್ಲಿ ಜೀವಿಸುತ್ತಾನೆ. ಭೂತಕಾಲ ಅಥವಾ ಭವಿಷ್ಯದ ಬಗ್ಗೆ ಯೋಚಿಸದೆ, ಈ ಕ್ಷಣದ ಸಂತೋಷವನ್ನು ಆನಂದಿಸುವ ಮೂಲಕ ಎಲ್ಲವನ್ನೂ ಮಾಡಲು ಪ್ರಾರಂಭಿಸಬೇಕು ಎಂದು ಅವನು ಅರಿತುಕೊಂಡಿದ್ದಾನೆ.



ಆರಂಭ ಅತ್ಯಗತ್ಯ!

ವರ್ಜಿನ್ ಅಟ್ಲಾಂಟಿಕ್ ಸಂಸ್ಥೆಯಸಂಸ್ಥಾಪಕರು ರಿಚರ್ಡ್ ಫ್ರಾನ್ಸನ್. ಅವರು ಸುಮಾರು 400 ಕಂಪನಿಗಳ ಮಾಲೀಕರು. ಆದರೆ ಅವರ ಆರಂಭಿಕ ದಿನಗಳು ಅಷ್ಟೇನೂ ಉತ್ತಮವಾಗಿರಲಿಲ್ಲ. ಅವರು ಕಲಿಕೆಯಲ್ಲಿ ಅಸಮರ್ಥರಾಗಿದ್ದರು ಮತ್ತು ಶಾಲೆಯಲ್ಲಿ ಚೆನ್ನಾಗಿ ಓದುತ್ತಿರಲಿಲ್ಲ. ಅವರು ತಮ್ಮ 16ನೇ ವಯಸ್ಸಿನಲ್ಲಿ ಶಾಲೆಯನ್ನು ತೊರೆದು, ಮೊದಲು 'ಮರ ಬೆಳೆಸುವ ಉದ್ಯಮ'ವನ್ನು ಪ್ರಾರಂಭಿಸಿದರು. ನಂತರ ಅವರು ವಿದ್ಯಾರ್ಥಿಗಳಿಗಾಗಿ ಒಂದು ಪತ್ರಿಕೆಯನ್ನು ಪ್ರಾರಂಭಿಸಿದರು. ಅದಕ್ಕಾಗಿ ಅವರು ಒಂದು ಜಾಹೀರಾತು ಏಜೆನ್ಸಿಯನ್ನು ಪ್ರಾರಂಭಿಸಿದರು. ನಂತರ ಅವರು ಸಂಗೀತ ಕಂಪನಿಯನ್ನು ಪ್ರಾರಂಭಿಸಿದರು. ಅವರು ಯುವ ಸಮುದಾಯಕ್ಕಾಗಿ ಹೀಗೆ ವಿವಿಧ ವ್ಯವಹಾರಗಳನ್ನು ಮಾಡಿದರು.

ಕ್ರಮೇಣ, ಅವರು ಬ್ಯಾಂಕಿಂಗ್, ವಿಮಾನಯಾನ ಸಂಸ್ಥೆಗಳು, ಪ್ರಯಾಣ ಸೇವೆಗಳು, ವೈದ್ಯಕೀಯ ಸೇವೆಗಳು ಮತ್ತು ಮೊಬೈಲ್ ಫೋನ್ ಸೇವೆಗಳೂ ಸೇರಿದಂತೆ ಎಲ್ಲಾ ದಿಕ್ಕುಗಳಲ್ಲಿಯೂ ಅನೇಕ ಕಂಪನಿಗಳನ್ನು ಆರಂಭಿಸದರು. ಅವರು ಶಾಲೆಯಲ್ಲಿ ಉತ್ತಮ ವಿದ್ಯಾರ್ಥಿಯೂ ಆಗಿರಲಿಲ್ಲ ಅಥವಾ ಉತ್ತಮ ವ್ಯವಹಾರ ವ್ಯವಸ್ಥಾಪಕರೂ ಆಗಿರಲಿಲ್ಲ. ಆದರೂ ಅವರು ಅದು ಹೇಗೆ ಎಲ್ಲದರಲ್ಲೂ ಯಶಸ್ವಿಯಾದರು?

ಅವರಿಗೆ ಯಾವುದೇ ವಿಷಯವನ್ನು ಹೇಗೆ ಪ್ರಾರಂಭಿಸಬೇಕೆಂದು ಚೆನ್ನಾಗಿ ತಿಳಿದಿತ್ತು. ಅವರು ಕೇವಲ ಯೋಜಿಸಲಿಲ್ಲ, ಅವುಗಳನ್ನು ತಕ್ಷಣವೇ ಕಾರ್ಯರೂಪಕ್ಕೆ ತಂದರು. ಜೀವನದಲ್ಲಿ ನೀವು ಯಾವ ಕನಸು ಕಾಣುತ್ತೀ-ರೋ ಅದನ್ನು ತಕ್ಷಣವೇ ಮಾಡಿ. ಕನಸುಗಳನ್ನು ಕಾರ್ಯರೂಪಕ್ಕಿಳಿಸದೆ ಏನೂ ಬದಲಾಗುವುದಿಲ್ಲ.

ಆರಂಭವೂ ನಿರಂತರ ಪ್ರಯತ್ನವೂ!

ಅರಣ್ಯ ಮಾರ್ಗದಲ್ಲಿ ನಡೆಯುತ್ತಿದ್ದ ಗುರುಗಳು, ಕಾಡಿನಲ್ಲಿ ಕಾಣಿಸಿದ ಜಲಪಾತಕ್ಕೆ ಅಂಟಿಕೊಂಡಂತೆ ಇದ್ದ ಒಂದು ಬಂಡೆಯನ್ನು ನೋಡಿ ಆಶ್ಚರ್ಯದಿಂದ ನಿಂತುಕೊಂಡರು. ಅದು ಕೆತ್ತಿರುವ ಒಂದು ಪ್ರತಿಮೆಯಂತೆ ಕಾಣುತ್ತಿತ್ತು. ಅವರು ಅದನ್ನು ಆಶ್ಚರ್ಯದಿಂದ ನೋಡುತ್ತಲೇ ಇದ್ದರು. ಅವರು ತಮ್ಮ ಜೊತೆಯಲ್ಲಿದ್ದ ಶಿಷ್ಯನಿಗೆ ಅದನ್ನು ತೋರಿಸಿದರು. ಅವನಿಗೆ ಏನೂ ಅರ್ಥವಾಗಲಿಲ್ಲ. "ಏನು ಗುರುಗಳೇ?" ಎಂದು ಕೇಳಿದ.

"ಆ ಬಂಡೆಯ ಮೇಲೆ ಬೀಳುತ್ತಿರುವ ನೀರಿನ ಹನಿಗಳನ್ನು ನೋಡು" ಎಂದು ಅವರು ಹೇಳಿದರು. ಒಂದೊಂದೇ ಹನಿ ನೀರು ಆ ಬಂಡೆಯ ಮೇಲೆ ಒಂದೇ ಸಮನೆ ಬೀಳುತ್ತಲೇ ಇತ್ತು. ಅದು ವೇಗವಾಗಿ ಬೀಳುತ್ತಿರಲಿಲ್ಲ. "ಇದು ನಮಗೆ ಎರಡು ಪಾಠಗಳನ್ನು ಕಲಿಸುತ್ತದೆ ಎಂದು ನಿನಗೆ ತಿಳಿದಿದೆಯೇ?" ಗುರುಗಳು ಮತ್ತೆ ಕೇಳಿದರು. ಶಿಷ್ಯ ಏನೂ ತಿಳಿಯದೆ ಸುಮ್ಮನೆ ಮಿಕಿಮಿಕಿ ನೋಡುತ್ತಿದ್ದ.

"ಈ ಒಂದು ಹನಿ ನೀರು ಈ ಬಂಡೆಯ ಮೇಲೆ ಬಿದ್ದು, ಕ್ರಮೇಣಬಂಡೆಯನ್ನು ಸವೆಸಿ ಪ್ರತಿಮೆಯಂತೆ ಅದರ ಆಕಾರವನ್ನು ಬದಲಾಯಿಸಿದೆ. ಇದು ಒಂದು ಸಣ್ಣ ಪ್ರಯತ್ನವಾಗಿದ್ದರೂ, ಒಂದು ಕೆಲಸವನ್ನು ಪ್ರಾರಂಭಿಸಿ, ಅದನ್ನು ಆಯಾಸಗೊಳ್ಳದೆ ಮುಂದುವರಿಸಿದರೆ, ಯಶಸ್ಸು ಖಚಿತ. ಇನ್ನೊಂದು ರೀತಿಯಲ್ಲಿ ನೋಡು... ಈ ಗಟ್ಟಿಯಾದ ಬಂಡೆಯು ಒಂದು ಹನಿ ನೀರಿಗಿಂತ ದುರ್ಬಲವಾಗಿದೆ! ಬಲಿಷ್ಠ ಜನರು, ತಮ್ಮ ಸಣ್ಣ ದೌರ್ಬಲ್ಯಗಳಿಗೆ ದಾರಿ ಮಾಡಿಕೊಟ್ಟರೆ, ಅವರು ಖಂಡಿತಾ ಕೆಳಗೆ ಬೀಳುತ್ತಾರೆ. ಈ ಎರಡು ಪಾಠಗಳೂ ಜೀವನದಲ್ಲಿ ಮುಖ್ಯವಾದವು" ಎಂದು ಅವರು ಹೇಳಿದರು. ಶಿಷ್ಯನಿಗೆ ಈಗ ಅರ್ಥವಾಯಿತು.

ಎರಡು ಆರಂಭಗಳು!

ನೀವು ಉದ್ಯಮ, ವ್ಯಾಪಾರ, ಕೆಲಸ, ವೃತ್ತಿ ಹೀಗೆ ಏನನ್ನೇ ಮಾಡಿದರೂ ಅದಕ್ಕೆ ಎರಡು ಬಗೆಯ ಆರಂಭಗಳಿರುತ್ತವೆ. ಅದನ್ನು ಎಚ್ಚರಿಕೆಯಿಂದ ಅರ್ಥಮಾಡಿಕೊಂಡವರು ಜೀವನದಲ್ಲಿ ಮುನ್ನಡೆಯುತ್ತಾರೆ. ಮೊದಲ ಆರಂಭವೆಂದರೆ ನೀವು ಏನನ್ನಾದರೂ ಮಾಡಲು ಪ್ರಾರಂಭಿಸುವ ಸಮಯ. ನಿಮ್ಮ ಅಧ್ಯಯನ ಮುಗಿಸಿದ ನಂತರ ಕೂಡಲೇ ನೀವು ವ್ಯವಹಾರ ಅಥವಾ ಉದ್ಯೋಗವನ್ನು ಪ್ರಾರಂಭಿಸಿದಾಗ, ಅದರಿಂದ ನಿಮಗೆ ಹೆಚ್ಚಿನ ಲಾಭ ಸಿಗುವುದಿಲ್ಲ. ನೀವು ಎಷ್ಟೇ ಕಷ್ಟಪಟ್ಟು ಕೆಲಸ ಮಾಡಿದರೂ, ನಿಮ್ಮ ವ್ಯವಹಾರದಿಂದ ನೀವು ಪಡೆಯುವ ಲಾಭ ಕಡಿಮೆ ಇರುತ್ತದೆ. ಹಾಗೆಯೇ ನಾವು ಮಾಡುವ ಕೆಲಸದ ಪ್ರಮಾಣಕ್ಕೂ ನಾವು ಪಡೆಯುವ ಸಂಬಳಕ್ಕೂ ಯಾವುದೇ ಸಂಬಂಧವಿರುವುದಿಲ್ಲ.

ಆದರೆ, ಇದರಿಂದ ನಿರುತ್ಸಾಹಗೊಳ್ಳಬೇಡಿ. ನೀವು ವ್ಯಾಪಾರ ಅಥವಾ ವೃತ್ತಿಯನ್ನು ಮಾಡುತ್ತಿದ್ದರೆ, ಇದನ್ನು ಕಲಿಕೆಯ ಅವಧಿ ಎಂದು ಪರಿಗಣಿಸಿ. ನೀವು ವೃತ್ತಿಯ ಒಳಹೊರಗನ್ನು, ಜನರ ಮನಸ್ಥಿತಿಯನ್ನು ಕಲಿಯುತ್ತೀರಿ. ಇದು ಒಂದು ರೀತಿಯ ಅನುಭವ ಸಂಗ್ರಹ. ಕೆಲಸದಲ್ಲಿ ಸಂಬಳ ಕಡಿಮೆ ಇದ್ದರೂ, ಕಂಪನಿಯು ನಿಮಗೆ ತರಬೇತಿ ನೀಡುತ್ತದೆ. ಇದನ್ನು ಒಂದು ಕ್ಯಾಚ್–ಅಪ್ ಎಂದು ಭಾವಿಸಿ. ಈ ಅನುಭವದ ಆಧಾರದ ಮೇಲೆ ಹೊಸದಾಗಿ ಏನನ್ನಾದರೂ ಮತ್ತೆ ಪ್ರಾರಂಭಿಸಿ.

ನೀವು ತಾಳ್ಮೆಯಿಂದ ಕಾಯುತ್ತಿದ್ದರೆ, ಕೆಲವು ವರ್ಷಗಳಲ್ಲಿ ನಿಮ್ಮ ಕಠಿಣ ಪರಿಶ್ರಮಕ್ಕೆ ಅನುಗುಣವಾಗಿ ಆದಾಯ ಅಥವಾ ಸಂಬಳ ಸಿಗುತ್ತದೆ. ಅಲ್ಲಿಯವರೆಗೆ, ಕೆಲಸ ಮತ್ತು ಸಂಬಳದ ನಡುವಿನ ಅಂತರದಿಂದ ಬೇಸರಗೊಂಡವರು, ಏಣಿ ಹಾಕಿದರೂ ಮೇಲೆ ತಲುಪಲು ಸಾಧ್ಯವಾಗದವರು... ಕೊನೆಗೆ ಆ ಹಂತದಲ್ಲೇ ಅನೇಕ ಜನರು ತೃಪ್ತರಾಗುತ್ತಾರೆ. ಅವರು 'ಇದು ಸಾಕು' ಎಂದುಕೊಳ್ಳುತ್ತಾರೆ ಮತ್ತು ಜಡರಾಗುತ್ತಾರೆ. ಆದರೆ ಅಭಿವೃದ್ಧಿಯ ಮುಂದಿನ ಹಂತದತ್ತ ಪ್ರಯಾಣ ಆರಂಭಿಸುವ ಸಮಯ ಅದು. ಒಂದು ರಾಕೆಟ್ ಭೂಮಿಯನ್ನು ಬಿಟ್ಟು ಮೇಲ್ಭಾಗವನ್ನು ತಲುಪಿದೆ ಎಂದು ತೃಪ್ತಿಪಟ್ಟರೆ, ಅದು ಬಾಹ್ಯಾಕಾಶಕ್ಕೆ ಹೋಗಲು ಸಾಧ್ಯವಿಲ್ಲ. ಪ್ರತಿ ಹಂತದಲ್ಲೂ ಅದು ತನ್ನ ವೇಗವನ್ನು ಹೆಚ್ಚಿಸುತ್ತದೆ. ಅದು ಖಾಲಿ ಇಂಧನ ಟ್ಯಾಂಕ್‌ಗಳನ್ನು ಬೀಳಿಸಿ ಮೇಲಕ್ಕೆ ಹಾರುತ್ತದೆ. ಅದಕ್ಕಾಗಿಯೇ ಅದು ಭೂಮಿಯ ಗುರುತ್ವಾಕರ್ಷಣೆಯನ್ನು ಧಿಕ್ಕರಿಸಿ ಬಾಹ್ಯಾಕಾಶಕ್ಕೆ ಹೋಗುತ್ತದೆ. ಎರಡನೇ ಆರಂಭವನ್ನು ಹೀಗೆಯೇ ಮಾಡಬೇಕು.

ಬಂಡಿಯಲ್ಲಿ ಐಸ್ ಕ್ರೀಮ್ ಮಾರುತ್ತಿದ್ದ ವ್ಯಕ್ತಿಯೊಬ್ಬ, ನಂತರ ತನ್ನದೇ ಆದ ಐಸ್ ಕ್ರೀಮ್ ತಯಾರಿಸಲು ಪ್ರಾರಂಭಿಸಿ ತನಗಾಗಿ ಒಂದು ಬ್ರ್ಯಾಂಡ್ ಅನ್ನೇ ಸೃಷ್ಟಿಸಿಕೊಂಡ! ಕಟ್ಟಡ ನಿರ್ಮಾಣ ಕೆಲಸಗಾರನಾಗಿದ್ದ ವ್ಯಕ್ತಿಯೊಬ್ಬ ಮುಂದೆ ತನ್ನ ವೃತ್ತಿಯಲ್ಲಿ ಏರಿ ಒಂದು ನಿರ್ಮಾಣ ಕಂಪನಿಯನ್ನೇ ಪ್ರಾರಂಭಿಸಿದ್ದೂ ಉಂಟು! ಸಾಮಾನ್ಯ ಗುಮಾಸ್ತನಾಗಿ ಕಂಪನಿಗೆ ಸೇರಿ ತನ್ನ ಕಠಿಣ ಪರಿಶ್ರಮದಿಂದ ಮ್ಯಾನೇಜರ್ ಆದ ವ್ಯಕ್ತಿಯ ಕಥೆ–ಯೂ ಇದೆ. ಇವರೆಲ್ಲ ತಮ್ಮ ಆರಂಭಿಕ ಕಷ್ಟಗಳ ಅವಧಿಯಲ್ಲಿ ಅನುಭವವನ್ನು ಸಂಗ್ರಹಿಸಿದರು ಮತ್ತು ಆ ಅನುಭವವನ್ನು ತಮ್ಮ ಕ್ಷೇತ್ರದಲ್ಲಿ ಪೂರ್ಣವಾಗಿ ಬಳಸಿಕೊಂಡರು. ಆ ಎರಡನೇ ಅವಧಿಯಲ್ಲಿ, ಅವರು ಕಡಿಮೆ ಕೆಲಸ ಮಾಡುತ್ತಿದ್ದರು, ಆದರೆ ಹೆಚ್ಚು ಗಳಿಸುತ್ತಿದ್ದರು.

ಒಬ್ಬ ವ್ಯಕ್ತಿಯು 20ನೇ ವಯಸ್ಸಿನಲ್ಲಿ ಮಾಡಿದ ಅದೇ ಕೆಲಸವನ್ನು 60ನೇ ವಯಸ್ಸಿನಲ್ಲೂ ಮಾಡುತ್ತಿದ್ದರೆ, ತನ್ನ ಜೀವನದಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದಿದ್ದರೆ, ಅವನು ತನಗಾಗಿ ಎರಡನೇ ಆರಂಭವನ್ನು ಮಾಡಿಕೊಂಡಿಲ್ಲ ಎಂದರ್ಥ. ಎರಡೂ ಆರಂಭಗಳು ಜೀವನದಲ್ಲಿ ಮುಖ್ಯ. ಯಾವುದನ್ನೂ ಕಳೆದುಕೊಳ್ಳಬೇಡಿ.

●

ಆಸಕ್ತಿ ಕಡಿಮೆಯಾಗುತ್ತದೆಯೇ?

ಅನೇಕ ಜನರಿಗೆ ಈ ಅಭ್ಯಾಸವಿರುತ್ತದೆ. ಅವರು ಒಂದು ಚಟುವಟಿಕೆ ಅಥವಾ ಕೆಲಸವನ್ನು ಪ್ರಾರಂಭಿಸಿದಾಗ ಅವರು ತುಂಬಾ ಉತ್ಸುಕರಾಗಿರುತ್ತಾರೆ. ಆದರೆ ಮೊದಲ ದಿನ ಇರುವ ಉತ್ಸಾಹವು ದಿನಗಳು ಕಳೆದಂತೆ ಅವರಲ್ಲಿ ಕಡಿಮೆಯಾಗುತ್ತಾ ಹೋಗುತ್ತದೆ. ಉತ್ಸಾಹ ಕಡಿಮೆಯಾದಾಗ ಅವರು ಸ್ವಾಭಾವಿಕವಾಗಿ ಆ ಚಟುವಟಿಕೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅದು ನಿರೀಕ್ಷಿತ ಫಲಿತಾಂಶಗಳನ್ನು ನೀಡುವುದಿಲ್ಲ. ಒಂದು ಹಂತದಲ್ಲಿ, ಅವರು 'ಇದನ್ನು ಹೇಗಾದರೂ ಮುಗಿಸಿದರೆ ಸಾಕು' ಎಂಬ ತೀರ್ಮಾನಕ್ಕೆ ಬರುತ್ತಾರೆ.

ಈ ರೀತಿಯ ಕೆಲಸಗಳನ್ನು ಮಾಡುವವರು ಅನೇಕರಿದ್ದಾರೆ. ಉತ್ಸಾಹದಿಂದ ಒಂದು ಪುಸ್ತಕವನ್ನು ಓದಲು ಪ್ರಾರಂಭಿಸುವ ವಿದ್ಯಾರ್ಥಿ ಎರಡನೇ ಪುಟಕ್ಕೆ ಬಂದಾಗ ನಿರಾಸಕ್ತಿ ಹೊಂದುತ್ತಾನೆ. ಬೆಳಿಗ್ಗೆ ಉತ್ಸಾಹದಿಂದ ಒಂದು ಕೆಲಸವನ್ನು ಮಾಡಲು ಪ್ರಾರಂಭಿಸುವ ಕೆಲಸಗಾರ 11 ಗಂಟೆಯ ನಂತರ ಚಹಾ ಕುಡಿದಾದ ಮೇಲೆ ತನ್ನ ಆಸಕ್ತಿಯನ್ನು ಕಳೆದುಕೊಳ್ಳುತ್ತಾನೆ ಮತ್ತು ನಿರಾಸಕ್ತಿಯಿಂದಲೇ ಕೆಲಸ ಮಾಡುತ್ತಾನೆ. ಬೆಳಿಗ್ಗೆ ಹತ್ತು ನಿಮಿಷಗಳಲ್ಲಿ ನಾಲ್ಕು ಅಥವಾ ಐದು ಗ್ರಾಹಕರಿಗೆ ಸೇವೆ ಸಲ್ಲಿಸುವ ಮಾರಾಟಗಾರನು, ಸಮಯ ಕಳೆದಂತೆ ಸೋಮಾರಿಯಾಗುತ್ತಾನೆ. ಅವನ ಅಂಗಡಿಯಲ್ಲಿ ಕಾಯುವಾಗ ಅನೇಕ ಗ್ರಾಹಕರು ಕಿರಿಕಿರಿಗೊಳ್ಳುತ್ತಾರೆ

ಅಂತಹ ಜನರನ್ನು 'ಆರಂಭ ಶೂರರು' ಎಂದು ಕರೆಯಲಾಗುತ್ತದೆ. ಏಕೆ ಅವರಿಗೆ ಹೀಗಾಗುತ್ತದೆ? ಇದಕ್ಕೆ ಹಲವು ಕಾರಣಗಳಿವೆ. ಮೊದಲ ಕಾರಣವೆಂದರೆ ಅವರು ಇಷ್ಟಪಡದ ಕೆಲಸವನ್ನು ಮಾಡುತ್ತಾರೆ ಮತ್ತು ಅವರಿಗೆ ಬೇರೆ ಆಯ್ಕೆಯಿರುವುದಿಲ್ಲ. ಇನ್ನೊಂದು ಕಾರಣವೆಂದರೆ ಅವರು ಒಂದೇ ರೀತಿಯ ಕೆಲಸಗಳನ್ನು ಮತ್ತೆ ಮತ್ತೆ ಮಾಡುವುದರಿಂದ ಬೇಸರಗೊಳ್ಳುತ್ತಾರೆ. ಮೂರನೆಯ ಕಾರಣವೆಂದರೆ ಅವರು ಒಂದು ಕೆಲಸ ಮಾಡುವಾಗ ಮತ್ತೊಂದು ಕೆಲಸದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ. ನೀವು ಅಥವಾ ನಿಮಗೆ ತಿಳಿದಿರುವ ಯಾರಾದರೂ ಸರಿ, ಮೊದಲಿನ ಅದೇ ಉತ್ಸಾಹವನ್ನು ಕಳೆದುಕೊಳ್ಳದೆ ಆರಂಭಿಸಿ ಕೆಲಸವನ್ನು ಮುಗಿಸಲು ಕೆಲವು ಮಾರ್ಗಗಳಿವೆ.

- ನೀವು ಏನೇ ಮಾಡಿದರೂ, ಅದರ ಸಂಪೂರ್ಣ ಕಾರಣವನ್ನು ಅರ್ಥಮಾಡಿಕೊಳ್ಳಿ. ಒಬ್ಬ ವಿದ್ಯಾರ್ಥಿಯು, 'ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯದಿದ್ದರೆ, ಮನೆಯಲ್ಲಿ ನನ್ನನ್ನು ಬೈಯುತ್ತಾರೆ' ಎಂದು ಯೋಚಿಸಿ ಒಂದು ವಿಷಯವನ್ನು ಅಧ್ಯಯನ ಮಾಡಿದರೆ, ಅವನಿಗೆ ಅದರಲ್ಲಿ ಆಸಕ್ತಿ ಇರುವುದಿಲ್ಲ. ಅವನು ಅಧ್ಯಯನವನ್ನು ಅದರ ಸಂಪೂರ್ಣ ಅರ್ಥದಲ್ಲಿ ಅರ್ಥಮಾಡಿಕೊಳ್ಳಬೇಕು. 'ನಾನು ಈ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದು ಉತ್ತಮ ಕಾಲೇಜಿಗೆ ಸೇರಿದರೆ ಮಾತ್ರ, ನನಗೆ ಒಳ್ಳೆಯ ಕೆಲಸ ಸಿಗುತ್ತದೆ. ನನಗೆ ಜೀವನದಲ್ಲಿ ಉತ್ತಮ ಭವಿಷ್ಯವಿರುತ್ತದೆ' ಎಂದು ಯೋಚಿಸಬೇಕು. ನೀವು ಪ್ರತಿಯೊಂದು ಕ್ರಿಯೆಯನ್ನೂ ಈ ರೀತಿಯ ನಿಜವಾದ ಕಾರಣದೊಂದಿಗೆ ಅರ್ಥಮಾಡಿಕೊಂಡರೆ, ನೀವು ಅದನ್ನು ಮಾಡಲು ಇಷ್ಟಪಡುತ್ತೀರಿ.
- ಒಂದೇ ಕೆಲಸವನ್ನು ಪದೇ ಪದೇ ಮಾಡುವುದು ಕೆಲವರಿಗೆ ಬೇಸರ ತರಿಸಬಹುದು. ಒಬ್ಬ ಚಾಲಕ ತನ್ನ ಜೀವನದುದ್ದಕ್ಕೂ ಒಂದೇ ಮಾರ್ಗದಲ್ಲಿ ಬಸ್ ಓಡಿಸುತ್ತಾನೆ. ಆದರೆ ಪ್ರತಿದಿನ ಹೊಸ ಪ್ರಯಾಣಿಕರೊಂದಿಗೆ ಸಂವಹನ ನಡೆಸುವ ಮೂಲಕ, ಅವನು ಹೊಸ ಅನುಭವಗಳನ್ನು ಪಡೆಯುತ್ತಾನೆ ಮತ್ತು ರೋಮಾಂಚನಗೊಳ್ಳುತ್ತಾನೆ. ಬೇಸರವನ್ನು ಹೋಗಲಾಡಿಸಲು ಒಂದೇ ಕೆಲಸವನ್ನು ಬೇರೆ ರೀತಿಯಲ್ಲಿ ಮಾಡುವುದುಕೂಡ ಒಂದು ಮಾರ್ಗವಾಗಿದೆ.
- ಒಂದು ಕೆಲಸ ಮಾಡುವಾಗ ಇನ್ನೊಂದು ಕೆಲಸದಲ್ಲಿ ಆಸಕ್ತಿ ಕಳೆದುಕೊಳ್ಳುತ್ತೀರಾ? ಒಂದು ಕೆಲಸ ಪೂರ್ಣಗೊಳಿಸುವುದರಿಂದ ನಿಮ್ಮ ಪಾತ್ರ ಮತ್ತು ವಿಶ್ವಾಸಾರ್ಹತೆ ನಿರ್ಧರಿಸಲ್ಪಡುತ್ತದೆ ಎಂಬುದನ್ನು ಅರಿತುಕೊಳ್ಳಿ. ಆ ನಂತರ, ಪ್ರಲೋಭನೆ ಬರುವುದಿಲ್ಲ.



ಹೊಸ ವರ್ಷದಲ್ಲಿ ಹೊಸ ಆರಂಭ!

ಕಳೆದ ವರ್ಷದ 12 ತಿಂಗಳುಗಳನ್ನೂ ನಾವು ಹೇಗೆ ಕಳೆದಿದ್ದೇವೆ ಎಂಬುದನ್ನು ಮತ್ತು ಬರಲಿರುವ 2026ರ 12 ತಿಂಗಳುಗಳಲ್ಲಿ ನಾವು ಏನು ಮಾಡಬೇಕೆಂದು ಯೋಚಿಸುವ ಮತ್ತು ಯೋಜಿಸುವ ಸಮಯ ಇದು. ಅನೇಕ ಜನರು ಹೊಸ ವರ್ಷದ ಸಂಕಲ್ಪಗಳು ಮತ್ತು ಪ್ರತಿಜ್ಞೆಗಳನ್ನು ಇದರ ಆಧಾರದ ಮೇಲೆ ಮಾಡುತ್ತಾರೆ. 'ನಮ್ಮಿಂದ ಇದನ್ನು ಮಾಡಲು ಸಾಧ್ಯವೇ?' ಎಂಬ ಯಾವುದೇ ಅನುಮಾನವಿಲ್ಲದೆ, 'ನಮಗೆ ಇದನ್ನು ಮಾಡುವ ಇಚ್ಛಾಶಕ್ತಿ ಏಕೆ ಇಲ್ಲ' ಎಂಬ ಅಪರಾಧಿ ಭಾವನೆಯೂ ಇಲ್ಲದೆ, ನೀವು ಬಯಸಿದ ಎಲ್ಲಾ ಕೆಲಸಗಳನ್ನೂ ಸಂತೋಷದಿಂದ ಮಾಡಬಹುದು. ಅದನ್ನು ಮಾಡಲು, ನಿಮ್ಮ ಜೀವನವನ್ನು ಸರಳ ರೀತಿಯಲ್ಲಿ ಬದಲಾಯಿಸುವ ಇಂತಹ ಸಣ್ಣ ಸಂಕಲ್ಪಗಳನ್ನು ಮಾಡಿ...

- ನಿಮ್ಮ ಕೆಲಸದ ಜಂಜಾಟ ಮತ್ತು ಹವ್ಯಾಸಗಳ ಗೊಂದಲದ ನಡುವೆಯೂ, ತಿಂಗಳಿಗೆ ಕನಿಷ್ಠ ಎರಡು ಪುಸ್ತಕಗಳನ್ನಾದರೂ ಓದಲು ಬದ್ಧರಾಗಿರಿ. ಅವುಗಳಲ್ಲಿ ಒಂದು ನಿಮ್ಮ ಕೆಲಸ ಅಥವಾ ವೃತ್ತಿ ಪ್ರಗತಿಗೆ ಉಪಯುಕ್ತವಾಗಿರಬೇಕು. ಇನ್ನೊಂದು ನಿಮ್ಮ ಮನಸ್ಸನ್ನು ಉಲ್ಲಾಸಗೊಳಿಸುವಂತಿರಬೇಕು. ಪ್ರತಿದಿನ ಸ್ವಲ್ಪ ಹೊತ್ತು ಓದುವುದರಿಂದ ನಿಮ್ಮ ಮೆದುಳು ಉಲ್ಲಾಸಗೊಳ್ಳುತ್ತದೆ.

- ಈಗ ಸಾಕಷ್ಟು ಆನ್‌ಲೈನ್ ಕೋರ್ಸ್‌ಗಳು ಲಭ್ಯವಿದೆ. ಈ ವರ್ಷ ನಿಮ್ಮ ಕೆಲಸ ಅಥವಾ ನಿಮ್ಮ ಆಸಕ್ತಿಗೆ ಸಂಬಂಧಿಸಿದ ಹೊಸ ತರಗತಿಗೆ ಸೇರಿ. ಅದು ನಿಮಗೆ ಹೊಸ ಅನುಭವವನ್ನು ನೀಡುತ್ತದೆ. ನೀವು ಕಲಿಯುವ ಇಚ್ಛೆಯನ್ನು ಹೊಂದಿದ್ದರೆ, ನೀವು ಪ್ರಬುದ್ಧರಾಗುತ್ತೀರಿ.

- ನೀವು ಅಂಗಡಿಗೆ ಹೋದಾಗಲೆಲ್ಲಾ ತಾಜಾ ಹಣ್ಣು ಮತ್ತು ತರಕಾರಿಗಳನ್ನು ಖರೀದಿಸಿ, ಆಯಾ ಋತುವಿನಲ್ಲಿ ಸಿಗುವ ಹಣ್ಣುಗಳು ಮತ್ತು ತರಕಾರಿಗಳನ್ನು ತಿನ್ನಲು ಮತ್ತು ಹೊಸದನ್ನು ಪ್ರಯತ್ನಿಸಲು ಬದ್ಧರಾಗಿರಿ.

- ಕ್ರೆಡಿಟ್ ಕಾರ್ಡ್ ಹೊಂದಿರುವ ಅನೇಕ ಜನರು ಸಂದೇಶ ಬಂದ ತಕ್ಷಣ ಸಾಲದ ಮೊತ್ತವನ್ನು ಪಾವತಿಸುತ್ತಾರೆ ಅಥವಾ ಪ್ರತಿ ತಿಂಗಳೂ ಕಂತುಗಳಲ್ಲಿ ಪಾವತಿಸುವ ಮೂಲಕ ಸಾಲದ ಬಲೆಗೆ ಸಿಲುಕುತ್ತಾರೆ. ನೀವು ಪ್ರತಿ ತಿಂಗಳೂ ನಿಮ್ಮ ಬ್ಯಾಂಕಿನಿಂದ ಈ ಸಂದೇಶ ಬಂದಾಗ, ನೀವು ಯಾವ್ಯಾವುದಕ್ಕೆಲ್ಲ ಕ್ರೆಡಿಟ್ ಕಾರ್ಡ್ ಅನ್ನು ಬಳಸಿದ್ದೀರಿ ಎಂದು ಗಮನಿಸಿ. ಯಾವುದಕ್ಕೆಲ್ಲ ಹೆಚ್ಚು ಖರ್ಚು ಮಾಡಿದ್ದೀರಿ ಎಂದು ನಿಮಗೆ ತಿಳಿಯುತ್ತದೆ. ಯಾವುದನ್ನು ತಪ್ಪಿಸಬಹುದಿತ್ತು ಎಂದು ಯೋಚಿಸಿ ನೋಡಿ. ಮಿತವ್ಯಯದಿಂದ ಖರ್ಚು ಮಾಡುವ ಅಭ್ಯಾಸವು ನಿಧಾನವಾಗಿ ರೂಢಿಯಾಗುತ್ತದೆ.

- ನಾವು ಕೆಲವು ಕೆಲಸಗಳನ್ನು ಮಾಡಲು ಹೆದರಬಹುದು. ಆದರೆ ಆ ಕೆಲಸಗಳು ನಮಗೆ ಪ್ರಯೋಜನವನ್ನು ನೀಡುತ್ತವೆ. ಆದ್ದರಿಂದ, ಈ ವರ್ಷ, ನೀವು ಮೊದಲು ಮಾಡಲು ಹೆದರುತ್ತಿದ್ದ ಏನನ್ನಾದರೂ ಮಾಡಲು ಪ್ರತಿಜ್ಞೆ ಮಾಡಿ. ಅದು ನಿಮ್ಮನ್ನು ಹೊಸ ವ್ಯಕ್ತಿಯನ್ನಾಗಿ ಮಾಡುತ್ತದೆ.

- ವಾರದಲ್ಲಿ ಕನಿಷ್ಠ ಒಂದು ದಿನವಾದರೂ, ನಿಮ್ಮ ಮೊಬೈಲ್ ಫೋನ್ ಮತ್ತು ಕಂಪ್ಯೂಟರ್ ಸೇರಿದಂತೆ ಎಲ್ಲದರಿಂದ ದೂರವಿದ್ದು, ಕೆಲವು ಗಂಟೆಗಳ ಕಾಲ ವಿರಾಮ ತೆಗೆದುಕೊಳ್ಳಿ. ನಿಮ್ಮ ಕುಟುಂಬದೊಂದಿಗೆ ಮಾತನಾಡಿ. ಆ ಸಮಯದಲ್ಲಿ ಉದ್ಯಾನವನದಲ್ಲಿ ವಾಕಿಂಗ್ ಮಾಡಿ ಅಥವಾ ಪುಸ್ತಕ ಓದುತ್ತ ಸಮಯ ಕಳೆಯಿರಿ.

- ಮನೆಯಲ್ಲಿ, ಕಚೇರಿಯಲ್ಲಿ, ನಿಮ್ಮ ಮೇಜು

ಸೇರಿದಂತೆ ಎಲ್ಲವೂ ಸ್ವಚ್ಛವಾಗಿರಬೇಕು. ಇದು ನಿಮ್ಮ ಮನಸ್ಸಿಗೆ ಚೈತನ್ಯ ತುಂಬುತ್ತದೆ ಮತ್ತು ನಿಮ್ಮನ್ನು ಹೆಚ್ಚು ಉಲ್ಲಾಸವಾಗಿರಿಸುತ್ತದೆ. ನಿಯಮಿತ ಸಮಯದ ಅಂತರದಲ್ಲಿ ಎಲ್ಲವನ್ನೂ ಸ್ವಚ್ಛಗೊಳಿಸುವ ಅಭ್ಯಾಸ ಮಾಡಿಕೊಳ್ಳಿ.

● ನೀವು ಭವಿಷ್ಯಕ್ಕಾಗಿ ಇನ್ನೂ ಉಳಿತಾಯ ಮಾಡುತ್ತಿಲ್ಲವೇ? ಈ ಜನವರಿಯಿಂದ ಪ್ರತಿ ತಿಂಗಳೂ ಇಂತಿಷ್ಟು ಹಣವನ್ನು ಉಳಿಸಲು ಬದ್ಧರಾಗಿ. ಈಗಾಗಲೇ ಉಳಿತಾಯ ಮಾಡುವ ಅಭ್ಯಾಸ ಹೊಂದಿರುವವರು ಆ ಉಳಿತಾಯವನ್ನು ಇನ್ನಷ್ಟು ಹೆಚ್ಚಿಸುವ ಮಾರ್ಗಗಳನ್ನು ಹುಡುಕಿ.

● ವಯಸ್ಸಾದಂತೆ, ನಿಮ್ಮ ಆರೋಗ್ಯಕ್ಕೆ ಪ್ರಾಮುಖ್ಯತೆ ನೀಡಿ. ನಿರ್ದಿಷ್ಟವಾಗಿ ಹೇಳುವುದಾದರೆ, ಪ್ರತಿದಿನ ಕನಿಷ್ಠ 20 ನಿಮಿಷಗಳ ಕಾಲ ನಡೆಯಲು ಹೋಗಿ. ಇದಕ್ಕೆ ಸ್ವಲ್ಪ ಸಮಯದ ಹೊರತಾಗಿ ಬೇರೇನೂ ಖರ್ಚಾಗುವುದಿಲ್ಲ. ಇದು ದೇಹಕ್ಕೆ ಸೂರ್ಯನ ಬೆಳಕನ್ನು ಮತ್ತು ಉಸಿರಾಟಕ್ಕೆ ತಾಜಾ ಗಾಳಿಯನ್ನು ಒದಗಿಸುತ್ತದೆ. ಇದು ದೇಹವನ್ನು ಬಲಪಡಿಸುತ್ತದೆ. ಪ್ರತಿದಿನ ಕೆಲವು ನಿಮಿಷಗಳ ಕಾಲ ಧ್ಯಾನ ಮಾಡುವುದು ಸಹ ಮನಸ್ಸಿಗೆ ಪ್ರಯೋಜನಕಾರಿಯಾಗಿರುತ್ತದೆ.

● ಪ್ರತಿದಿನ ನಿಗದಿತ ಸಮಯಕ್ಕೆ ಮಲಗಲು ಮರೆಯಬೇಡಿ, ತಡರಾತ್ರಿಯವರೆಗೆ ಟಿವಿ ನೋಡದೆ ಅಥವಾ ಸಾಮಾಜಿಕ ಮಾಧ್ಯಮಗಳಲ್ಲಿ ಸಮಯ ಕಳೆಯದೆ, ಸಾಕಷ್ಟು ನಿದ್ರೆ ಮಾಡುವುದು ನಿಮ್ಮ ಆರೋಗ್ಯ ಮತ್ತು ಮಾನಸಿಕ ಸ್ವಾಸ್ಥ್ಯಕ್ಕೆ ಒಳ್ಳೆಯದು. ಸಾಕಷ್ಟು ವಿಶ್ರಾಂತಿ ಪಡೆದಾಗ ಮಾತ್ರ ನೀವು ನಿಮ್ಮ ಕೆಲಸವನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದು.

● ಅನಾರೋಗ್ಯದ ಲಕ್ಷಣಗಳ ಬಗ್ಗೆ ತಿಳಿದಿರುವುದು ಮತ್ತು ವೈದ್ಯರನ್ನು ಭೇಟಿ ಮಾಡುವುದು ಒಳ್ಳೆಯದು. ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಸಹ ಒಳ್ಳೆಯದು. ಇದು ಆರಂಭಿಕ ಹಂತದಲ್ಲಿ ರೋಗಗಳನ್ನು ಪತ್ತೆ ಹಚ್ಚಲು ಸಹಾಯ ಮಾಡುತ್ತದೆ ಮತ್ತು ದೀರ್ಘಾಯುಷ್ಯವನ್ನು ಖಾತರಿ ಪಡಿಸುತ್ತದೆ.

● ನಾವು ತಿಂಗಳಿಗೆ ಕನಿಷ್ಠ ಒಂದು ದಿನವನ್ನಾದರೂ ಸಂತೋಷದಿಂದ ಆಚರಿಸಬೇಕು. ಹೊಸ ವರ್ಷ, ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ, ತಾಯಂದಿರ ದಿನ, ತಂದೆಯ ದಿನ, ಮಕ್ಕಳ ದಿನ ಮುಂತಾದ ಮಹತ್ವದ ಕ್ಷಣಗಳನ್ನು ನಮ್ಮ ಕುಟುಂಬದೊಂದಿಗೆ ಆಚರಿಸುವುದು ಮತ್ತು ಆ ದಿನಗಳಲ್ಲಿ ಮರೆಯಲಾಗದ ಉಡುಗೊರೆಗಳನ್ನು ಹಂಚಿಕೊಳ್ಳುವುದು ಜೀವನವನ್ನು ಆನಂದದಾಯಕವಾಗಿಸುತ್ತದೆ.

● ಅನೇಕ ಜನರು ನಡೆದುಕೊಂಡು ಹೋಗುವಾಗ, ಪ್ರಯಾಣಿಸುವಾಗ ಅಥವಾ ಸಂಬಂಧಿಕರು ಅಥವಾ ಸ್ನೇಹಿತರೊಂದಿಗೆ ಕುಟುಂಬ ಕಾರ್ಯಕ್ರಮಗಳಲ್ಲಿ ಭಾಗವಹಿಸುವಾಗ ತಮ್ಮ ಸೆಲ್ ಫೋನ್‌ಗಳಲ್ಲಿ ಫೋಟೋಗಳನ್ನು ತೆಗೆದುಕೊಳ್ಳುತ್ತಾರೆ. ಇವುಗಳನ್ನು ಸುಂದರ ನೆನಪುಗಳಾಗಿ ಸಂಗ್ರಹಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಇವೆಲ್ಲವನ್ನೂ ನೋಡುವುದರಿಂದ ಸಂತೋಷ ಹೆಚ್ಚಾಗುತ್ತದೆ.

● ಜೀವನದಲ್ಲಿ ಅನೇಕ ಜನರ ಸಹಾಯದಿಂದ ನಾವು ಉನ್ನತ ಸ್ಥಾನಕ್ಕೆ ಏರಿದ್ದೇವೆ. ನಮಗೆ ಸಹಾಯ ಮಾಡಿದವರ ಬಗ್ಗೆ ಯೋಚಿಸುವುದು ಮತ್ತು ಅವರಿಗೆ ಧನ್ಯವಾದ ಹೇಳುವುದು ನಾವು ಪ್ರಬುದ್ಧರಾಗಲು ಸಹಾಯ ಮಾಡುತ್ತದೆ. ನೀವು ಚಿಕ್ಕವರಿದ್ದಾಗ ನಿಮಗೆ ಸಹಾಯ ಮಾಡಿದ ಸ್ನೇಹಿತನಾಗಿರಲಿ, ನಿಮ್ಮ ಶಾಲಾ ದಿನಗಳಲ್ಲಿ ನಿಮಗೆ ಮಾರ್ಗದರ್ಶನ ನೀಡಿದ ಶಿಕ್ಷಕರಾಗಿರಲಿ, ನೀವು ಉನ್ನತ ಶಿಕ್ಷಣಕ್ಕೆ ಹೋದಾಗ ನಿಮಗೆ ಸಹಾಯ ಮಾಡಿದ ಸಂಬಂಧಿಯಾಗಿರಲಿ ಅಥವಾ ನೀವು ಮೊದಲು ಕೆಲಸ ಮಾಡಲು ಪ್ರಾರಂಭಿಸಿದಾಗ ನಿಮಗೆ ಕಲಿಸಿದ ಕಚೇರಿಯ ಹಿರಿಯ ವ್ಯಕ್ತಿಯಾಗಿರಲಿ, ಎಲ್ಲರಿಗೂ ಧನ್ಯವಾದ ಹೇಳಲು ಮರೆಯಬೇಡಿ.

● ಅಪರಿಚಿತರನ್ನು ನೋಡಿ ನಗುವುದು ಮತ್ತು ಒಳ್ಳೆಯ ಕೆಲಸಗಳನ್ನು ಮಾಡುವ ಪ್ರತಿಯೊಬ್ಬರನ್ನೂ ಮುಕ್ತವಾಗಿ ಪ್ರಶಂಸಿಸುವುದು ನಿಮ್ಮ ಪ್ರತಿದಿನವನ್ನೂ ಹೆಚ್ಚು ಆಹ್ಲಾದಕರವಾಗಿಸುತ್ತದೆ. ನಿಮಗೆ ಅಭಿನಂದನೆಗಳು ಸಹ ಸಿಗುತ್ತವೆ.

● ನಿಮ್ಮ ಸಂಬಂಧಿಕರು ಮತ್ತು ಸ್ನೇಹಿತರೊಂದಿಗೆ ಸಂಪರ್ಕದಲ್ಲಿರಿ. ಅವರನ್ನು ಕಾಲಕಾಲಕ್ಕೆ ಭೇಟಿಯಾಗುವುದು ಮತ್ತು ಹುಟ್ಟುಹಬ್ಬ ಮತ್ತು ವಿವಾಹ ವಾರ್ಷಿಕೋತ್ಸವದಂತಹ ಸಂದರ್ಭಗಳಲ್ಲಿ ಅವರನ್ನು ಅಭಿನಂದಿಸುವುದರಿಂದ ಅವರು ನಿಮ್ಮ ಹತ್ತಿರ ಇರುತ್ತಾರೆ.

● ವರ್ಷಕ್ಕೆ ಕನಿಷ್ಠ ಎರಡು ಬಾರಿಯಾದರೂ ಪ್ರವಾಸಕ್ಕೆ ಹೋಗಿ. ಹೊಸ ಸ್ಥಳಗಳಿಗೆ ಹೋಗುವುದರಿಂದ ನಮಗೆ ಹೊಸ ಅನುಭವಗಳು ಸಿಗುತ್ತವೆ. ಅದು ಮನಸ್ಸಿಗೆ ಚೈತನ್ಯ ನೀಡುತ್ತದೆ. ●

ಒಂದು ಕಂಪನಿಯಲ್ಲಿ ಕೆಲಸ ಮಾಡುವ ಅನೇಕ ಜನರು, "ಹಿಂದೆ ಅವರು ಕೆಲಸ ಮಾಡಿದ ಕಂಪನಿಯಲ್ಲಿದ್ದ ಒಳ್ಳೆಯ ವಿಷಯಗಳ ಬಗ್ಗೆಯೇ ಯಾವಾಗಲೂ ಮಾತನಾಡುತ್ತಿರುತ್ತಾರೆ. 'ಅವರು ಅಲ್ಲಿ ಸಾಕಷ್ಟು ಬೋನಸ್‌ಗಳನ್ನು ನೀಡುತ್ತಿದ್ದರು', 'ಅಲ್ಲಿ ಕ್ಯಾಂಟೀನ್‌ನಲ್ಲಿ ಊಟ ತುಂಬಾ ಚೆನ್ನಾಗಿರುತ್ತಿತ್ತು', 'ಅಲ್ಲಿದ್ದ ಮ್ಯಾನೇಜರ್ ಚಿನ್ನದಂತಹ ಮನುಷ್ಯ'... ಎಂದೆಲ್ಲ ಅವರು ಕೊರಗುತ್ತಾರೆ. ಅಲ್ಲದೆ, 'ನಾನು ಅದನ್ನು ಬಿಟ್ಟು ಇಲ್ಲಿಗೆ ಬಂದು ಸಿಕ್ಕಿಹಾಕಿಕೊಂಡೆ' ಎಂದು ಬೇರೆ ಬೇಸರ ವ್ಯಕ್ತಪಡಿಸುತ್ತಿರುತ್ತಾರೆ.

"ಸರಿ, ನೀವು ಅಷ್ಟು ಒಳ್ಳೆಯ ಕಂಪನಿಯನ್ನು ಬಿಟ್ಟು ಇಲ್ಲಿಗೆ ಏಕೆ ಬಂದಿರಿ?" ಎಂದು ಕೇಳಿದರೆ ಅವರು ಉತ್ತರಿಸದೆ ತತ್ತರಿಸುತ್ತಾರೆ. ಹೆಚ್ಚಿನ ಸಂಬಳ, ಹೆಚ್ಚಿನ ಸವಲತ್ತುಗಳು, ಬಡ್ತಿ, ಹೀಗೆ ಯಾವುದೋ ಒಂದು ಅವರ ಮನಸ್ಸನ್ನು ಬದಲಾಯಿಸಿರುತ್ತದೆ. ಆದರೆ ಅವರು ಈ ಹೊಸ ಕೆಲಸದಿಂದ ಪಡೆದ ಒಳ್ಳೆಯ ವಿಷಯಗಳನ್ನು ನೆನಪಿಸಿಕೊಳ್ಳುವುದಿಲ್ಲ ಮತ್ತು ಭೂತಕಾಲದಲ್ಲಿಯೇ ಬದುಕುತ್ತಿರುತ್ತಾರೆ.

ಇದು ತಪ್ಪು. ಈ ಗುಣವು ಜೀವನದಲ್ಲಿ ಪ್ರಗತಿಗೆ ದೊಡ್ಡ ಅಡಚಣೆ–ಯಾಗುತ್ತದೆ. ಇದನ್ನು ಬಿಟ್ಟುಬಿಡಿ ಮತ್ತು ಯಾವುದೇ ಕೆಲಸದಲ್ಲಾಗಲೀ ಧೈರ್ಯದಿಂದ ಕೆಲವು ವಿಷಯಗಳನ್ನು ಪ್ರಾರಂಭಿಸಿ...

- ಒಂದು ಸಂಸ್ಥೆಯಲ್ಲಿನ ಕೆಲವು ಅಭ್ಯಾಸಗಳು ಕಾಲಾನಂತರದಲ್ಲಿಯೂ ಬದಲಾಗದೆ ಹಾಗೇ ಉಳಿಯುತ್ತವೆ. ಇಂದಿನ ಪರಿಸರದಲ್ಲಿ ಅವು ಇನ್ನು ಮುಂದೆ ಅಗತ್ಯವಿಲ್ಲ ಎಂದು ನಿಮಗನ್ನಿಸಬಹುದು. ಅವು ಕಂಪನಿಯ ಪ್ರಗತಿಗೆ ಅಡ್ಡಿಯಾಗಿರುವಂತೆ ತೋರಬಹುದು. ಹಿಂದಿನಂತೆಯೇ ಇರುವವರನ್ನು ಬದಲಾಯಿಸುವುದಕ್ಕಾಗಿ ಅವರೊಂದಿಗೆ ಮಾತನಾಡಿ. ಇದಕ್ಕಾಗಿ ಹೋರಾಡುವ ಅಗತ್ಯವಿಲ್ಲ. ಹಾಗೆ ಮಾಡುವುದರಿಂದ ನೀವು ಬಂಡಾಯಗಾರ ಎಂಬ ಹೆಸರನ್ನು ಗಳಿಸುವಿರಿ. ಅದಕ್ಕೆ ಬದಲಾಗಿ, ಅವರು ಬದಲಾಗುವುದರಿಂದ ಏನೆಲ್ಲಾ ಪ್ರಯೋಜನಗಳಿವೆ ಎಂಬುದನ್ನು ದೃಢವಾದ ಧ್ವನಿಯಲ್ಲಿ ಸ್ಪಷ್ಟವಾಗಿ ವಿವರಿಸಿ. ಬದಲಾವಣೆ ಖಂಡಿತಾ ಸಂಭವಿಸುತ್ತದೆ.
- ನಿಮ್ಮ ಮೇಲಧಿಕಾರಿಗಳು ಹೇಳುವುದನ್ನು ಕುರುಡಾಗಿ ಅನುಸರಿಸುವ ಸಮಯ ಈಗ ಮುಗಿದು ಹೋಗಿದೆ. ಅವರು ಸ್ಪಷ್ಟ ಸೂಚನೆಗಳನ್ನು ನೀಡದಿದ್ದರೆ, ಅವರು ಹೇಳುವುದನ್ನು ಮಾಡುವುದರಿಂದ ಕಂಪನಿಗೆ ಹಾನಿಯಾಗುವುದಾದರೆ, ಅವರು ಹೇಳುವುದು ತಪ್ಪು ಎಂದು ನೀವು ಭಾವಿಸಿದರೆ, ಧೈರ್ಯದಿಂದ ಅವರಿಗೆ ಪ್ರಶ್ನೆಗಳನ್ನು ಕೇಳಿ. ಕಂಪನಿಯ ಲಾಭಕ್ಕಾಗಿ ಪ್ರಶ್ನೆಗಳನ್ನು ಕೇಳುವುದರಲ್ಲಿ ಯಾವುದೇ ತಪ್ಪಿಲ್ಲ. ನೀವು ಅಗತ್ಯ ಪ್ರಶ್ನೆಗಳನ್ನು ಕೇಳದಿದ್ದರೆ, ಸಮಸ್ಯೆಗಳು ಪರಿಹಾರವಾಗುವುದಿಲ್ಲ.
- ಬದಲಾವಣೆಗಾಗಿ ಮಾತನಾಡಲು ಮತ್ತು ಪ್ರಶ್ನೆಗಳನ್ನು ಕೇಳಲು ನೀವು ಮುಂದಾದರೆ, ನೀವು ಸಾಕಷ್ಟು ಧೈರ್ಯಶಾಲಿಯಾಗಿದ್ದರೂ ಸಹ, ವಿನಮ್ರರಾಗಿರಿ ಮತ್ತು ನಿಮ್ಮ ಮೇಲಧಿಕಾರಿಗಳಿಂದ ಹಿಡಿದು ನಿಮ್ಮ ಕೈಕೆಳಗೆ ಕೆಲಸ ಮಾಡುವ ಉದ್ಯೋಗಿಗಳವರೆಗೆ ಎಲ್ಲರನ್ನೂ ಗೌರವದಿಂದ ನಡೆಸಿಕೊಳ್ಳಿ. ಕೋಪದಿಂದ ಮಾತನಾಡುವ ನಿಮ್ಮ ಮೇಲಧಿಕಾರಿಗಳೊಂದಿಗೆ ಸಭ್ಯವಾಗಿ ವರ್ತಿಸುವುದರಿಂದ ನಿಮಗೆ ಗೌರವ ಸಿಗುತ್ತದೆ. ಆಗ ಮಾತ್ರ ಆಡಳಿತ ಮಂಡಳಿಯು ನಿಮ್ಮ ಪ್ರಶ್ನೆಗಳನ್ನು ಕೇಳುತ್ತದೆ.

● ಕೆಲಸದಲ್ಲಿ ಏನೋ ಸರಿಯಿಲ್ಲ ಎಂದು ನಿಮಗೆ ಅನಿಸಬಹುದು. ಇತರ ಉದ್ಯೋಗಿಗಳ ಅಭಿಪ್ರಾಯಗಳನ್ನು ಕೇಳಿ. ಎಲ್ಲರೂ ಒಂದೇ ರೀತಿ ಭಾವಿಸಿದರೆ, ಅದನ್ನು ಹೇಗೆ ಬದಲಾಯಿಸಬಹುದು ಎಂಬುದರ ಕುರಿತು ಚರ್ಚಿಸಿ. ನಂತರ ನಿರ್ವಾಹಕರೊಂದಿಗೆ ಮಾತನಾಡಿ. "ಇದು ಅನೇಕ ಜನರ ಅಭಿಪ್ರಾಯ" ಎಂದು ನೀವು ಹೇಳಿದಾಗ ಅದು ತುಂಬಾ ಮೌಲ್ಯಯುತವಾಗಿರುತ್ತದೆ.

● ಒಂದು ಸಂಸ್ಥೆಯಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರಲು ನೀವು ಮಾತನಾಡಿದರೆ, ನೀವು ಇತರ ಉದ್ಯೋಗಿಗಳಿಗೆ ಮಾದರಿಯಾಗುತ್ತೀರಿ. "ಈ ಕಚೇರಿ ಹೀಗಿದೆ. ಇಲ್ಲಿ ಏನೂ ಬದಲಾಗುವುದಿಲ್ಲ" ಎಂದು ಸುಮ್ಮನೆ ಯಾವಾಗಲೂ ದೂರುವುದರಲ್ಲಿ ಅರ್ಥವಿರುವುದಿಲ್ಲ. ಅದನ್ನು ಬದಲಾಯಿಸಲು ಶ್ರಮಿಸಿ. ಅಂತಹ ಸಕಾರಾತ್ಮಕ ಚಿಂತನೆ ಎಲ್ಲೆಡೆ ಹರಡಿದಾಗ, ಅದು ಸಂಸ್ಥೆಗೆ ಪ್ರಯೋಜನವನ್ನು ನೀಡುತ್ತದೆ. ಸಂಸ್ಥೆಯು ಬೆಳವಣಿಗೆಯತ್ತ ಸಾಗುತ್ತದೆ.

● ಒಂದು ಕೆಲಸವನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಮಾಡಲು ನಿಮ್ಮನ್ನು ಕೇಳಲಾಗುತ್ತದೆ, ಆದರೆ ಅದನ್ನು ಇನ್ನೊಂದು ರೀತಿಯಲ್ಲಿ ಸುಲಭವಾಗಿ ಮಾಡಬಹುದು ಎಂದು ನೀವು ಭಾವಿಸುತ್ತೀರಿ. "ನಾವು ಅದನ್ನು ಈ ರೀತಿ ಮಾಡಬಹುದೇ?" ಎಂದು ಕೇಳಿ. ಬೆಳಗಿನ ಹೊತ್ತು ನಡೆಯುವ ದೀರ್ಘ ಸಭೆಗಳು ಉತ್ಪಾದಕತೆಯನ್ನು ಕಡಿಮೆ ಮಾಡುತ್ತಿದ್ದರೆ, ಸಭೆಯ ಸಮಯವನ್ನು ಬದಲಾಯಿಸಲು ಅಥವಾ ಕಡಿಮೆ ಮಾಡಲು ಕೇಳಿ. ಹೀಗೆ ಸಮಸ್ಯೆಗಳಿಗೆ ಪರ್ಯಾಯ ಪರಿಹಾರಗಳನ್ನು ಸೂಚಿಸುವುದು ಪರಿಣಾಮಕಾರಿಯಾಗಬಹುದು.

● ನಿಮ್ಮ ಕೆಲಸದ ಹೊರೆ ಹೆಚ್ಚಿರುವಾಗ ಹೆಚ್ಚುವರಿ ಕೆಲಸವನ್ನು ಮಾಡಲು ಕೇಳಿದರೆ, ಹಿಂಜರಿಕೆಯಿಲ್ಲದೆ ಅದನ್ನು ನಿರಾಕರಿಸಿ. ಅಲ್ಲದೆ, ನೀವು ಏಕೆ ನಿರಾಕರಿಸುತ್ತಿದ್ದೀರಿ ಎಂಬುದನ್ನು ವಿವರಿಸಿ. ಒಂದು ಕೆಲಸವನ್ನು ಪೂರ್ಣಗೊಳಿಸದೆ ಮತ್ತೊಂದು ಕೆಲಸವನ್ನು ಪ್ರಾರಂಭಿಸುವುದರಿಂದ ಕಂಪನಿಗೆ ಹಾನಿಯಾಗುತ್ತದೆ ಎಂದು ಸ್ಪಷ್ಟಪಡಿಸಿ. ಅಲ್ಲದೆ, ಆ ಇನ್ನೊಂದು ಕೆಲಸವನ್ನು ಯಾರು ಬೇಗನೆ ಮತ್ತು ಹೇಗೆ ಪೂರ್ಣಗೊಳಿಸಬಹುದು ಎಂಬುದನ್ನು ಸೂಚಿಸಿ.

● ನಾಯಕತ್ವದೊಂದಿಗೆ ಕೆಲಸಗಳನ್ನು ಮಾಡಿ. ಸಹೋದ್ಯೋಗಿಯೊಬ್ಬರು ಬಹಳಷ್ಟು ಅಪೂರ್ಣ ಕೆಲಸಗಳೊಂದಿಗೆ ಹೋರಾಡುತ್ತಿದ್ದಾರೆಯೇ? ಅವರಿಗೆ ಸಹಾಯ ಮಾಡಿ. ಒಂದು ಕೆಲಸವನ್ನು ಪೂರ್ಣಗೊಳಿಸಲು ನೀವು ಕಚೇರಿ ಸಮಯವನ್ನು ಮೀರಿ ಕೆಲಸ ಮಾಡಬೇಕೇ? ಹೆಚ್ಚುವರಿ ಸಮಯವನ್ನು ನೀಡಲು ಹಿಂಜರಿಯಬೇಡಿ. ಪ್ರತಿಯೊಬ್ಬರೂ ಹೊಸ ಕೆಲಸವನ್ನು ಹೇಗೆ ಮಾಡಬೇಕೆಂದು ಅರ್ಥವಾಗದ ಕಾರಣ ಪ್ರಾರಂಭಿಸಲು ಹಿಂಜರಿಯುತ್ತಾರೆಯೇ? ನಿಮಗೆ ಕೆಲಸ ತಿಳಿದಿದ್ದರೆ, ಮುಂದುವರಿಯಿರಿ ಮತ್ತು ಪ್ರಾರಂಭಿಸಿ. ಯಾವುದೇ ಪರಿಸ್ಥಿತಿಯಲ್ಲಿ ಮೊದಲು ನಿಮ್ಮ ಕೈ ಎತ್ತಿ, ಕೆಲಸ ಮಾಡುವ ಮೊದಲಿಗರಾಗಿರಿ.

● ಇಂದಿನ ಸ್ಪರ್ಧಾತ್ಮಕ ವಾತಾವರಣದಲ್ಲಿ, ಇತರರೊಂದಿಗೆ ಸರಿಸಮಾನವಾಗಿ ಅಥವಾ ಅವರಿಗಿಂತ ಉತ್ತಮವಾಗಿ ಕೆಲಸ ಮಾಡಲು ಸಾಕಷ್ಟು ಪ್ರತಿಭೆ ಬೇಕಾಗುತ್ತದೆ. ಅದನ್ನು ಪಡೆಯಿರಿ. ಸರಿಯಾದ ಗುರಿಗಳೊಂದಿಗೆ ಕೆಲಸ ಮಾಡಿ. ಇತರರು ನಕಾರಾತ್ಮಕವಾಗಿ ಮಾತನಾಡಿದರೂ ಅಥವಾ ನಿಮ್ಮನ್ನು ಗೇಲಿ ಮಾಡಿದರೂ ಸಹ, ಚಿಂತಿಸಬೇಡಿ. ದೊಡ್ಡ ಕನಸು ಕಾಣಿರಿ.

● ನೀವು ಪಡೆಯುವ ಕೆಲಸ ಮತ್ತು ನೀವು ಗಳಿಸುವ ಆದಾಯದಿಂದ ಎಂದಿಗೂ ತೃಪ್ತರಾಗಬೇಡಿ. ಹೊಸ ಅವಕಾಶಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಮತ್ತು ಕಷ್ಟಪಟ್ಟು ಕೆಲಸ ಮಾಡಲು ಹಿಂಜರಿಯಬೇಡಿ. ನೀವು ಇರುವ ಕಂಪನಿಯಲ್ಲಿ ಕಾರ್ಯನಿರ್ವಾಹಕರು ಸವಾಲಿನ ಕೆಲಸದ ಬಗ್ಗೆ ಯೋಚಿಸುವಾಗ ಅವರಿಗೆ ನಿಮ್ಮ ಪ್ರತಿಭೆ ನೆನಪಿಗೆ ಬರಬೇಕು. ಆ ರೀತಿಯ ಗೌರವವನ್ನು ಗಳಿಸಿ. ●

ಬಿಳುಪು

| ಭಾವನೆಗಳು

ಸಂಪುಟ 8 | ಸಂಚಿಕೆ 8
ಜನವರಿ 2026

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು
ಕೆ.ಆರ್. ನಾಗರಾಜನ್

ಲೇಖಕರು
ತ.ಸೆ. ಜ್ಞಾನವೇಲ್

ಗೌರವ ಸಂಪಾದಕರು ಮತ್ತು
ಕನ್ನಡಾನುವಾದ
ಡಾ. ತಮಿಳ್ ಸೆಲ್ವಿ
ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ರಚನೆ ಮತ್ತು ವಿನ್ಯಾಸ
ತರು ಮೀಡಿಯಾ (ಪ್ರೈ) ಲಿ.,
ನಂ, 188, ನೆಲ ಮಹಡಿ
14ನೇ ಅಡ್ಡರಸ್ತೆ ಜಂಕ್ಷನ್
ಡಿಫೆನ್ಸ್ ಕಾಲನಿ,
ಈಕ್ಕಾಟ್ಟು ತಾಂಗಲ್,
ಚೆನ್ನೈ 600 032.

ಈ ಸಂಚಿಕೆಯಲ್ಲಿರುವ ಯಾವುದೇ ಭಾಗವನ್ನಾಗಲೀ ವಿಷಯಗಳನ್ನಾಗಲೀ ಸಂಪಾದಕರ ಲಿಖಿತ ಪೂರ್ವ ಅನುಮತಿ ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ, ಅಂತರ್‌ಜಾಲ ತಾಣಗಳಲ್ಲಿ ಪುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.

Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604. | Ph: 0421-4304106

ಆರಂಭಿಸುವುದು ಸುಲಭ!

ಹೊಸ ಜೀವನ ಪ್ರಯಾಣವನ್ನು ಪ್ರಾರಂಭಿಸುವುದು ಗಾಡಿಯ ಕೀಲಿಯನ್ನು ಆನ್ ಮಾಡಿ ಪ್ರಯಾಣವನ್ನು ಪ್ರಾರಂಭಿಸುವಷ್ಟು ಸುಲಭವೇ? ನೀವು ನಿಮ್ಮ ಮನಸ್ಸನ್ನು ಅದರ ಮೇಲೆ ಇಟ್ಟರೆ ಮಾತ್ರ ಅದು ಸುಲಭ!

ಎಲ್ಲರೂ ಒಮ್ಮೆ ಮಾತ್ರ ಬದುಕುತ್ತಾರೆ ಮತ್ತು ನಾವು ಸಂತೋಷದಿಂದ, ಯಶಸ್ವಿಯಾಗಿ ಮತ್ತು ಅರ್ಥಪೂರ್ಣವಾಗಿ ಬದುಕಬೇಕು. ಅದಕ್ಕಾಗಿ, ನಾವು ಯಾವುದೇ ಪರಿಸ್ಥಿತಿಯಲ್ಲಿ ಬದಲಾವಣೆಗೆ ಸಿದ್ಧರಾಗಿರಬೇಕು. ಅನಿರೀಕ್ಷಿತ ಬಿಕ್ಕಟ್ಟುಗಳು ಯಾವುದೇ ಸಮಯದಲ್ಲಿ ಬರಬಹುದು. ಅವುಗಳನ್ನು ನಗುವಿನೊಂದಿಗೆ ಹೇಗೆ ಜಯಿಸಬೇಕೆಂದು ನಮಗೆ ತಿಳಿದಿದ್ದರೆ, ನಮ್ಮ ಜೀವನವು ಬದಲಾಗುತ್ತದೆ.

ಇಬ್ಬರು ಬಾಲಕರು!

ಇಬ್ಬರು ಹುಡುಗರು ಚರ್ಚ್‌ನಲ್ಲಿ ಕೆಲಸ ಮಾಡುವ ಕೆಲಸಗಾರರಾಗಿ ಬೆಳೆದರು. ಒಬ್ಬ ಹುಡುಗ ಯುಗೊಸ್ಲಾವಿಯಾ ಎಂಬ ಯುರೋಪಿಯನ್ ದೇಶದಲ್ಲಿ ಚರ್ಚ್‌ನಲ್ಲಿ ಸೇವೆ ಸಲ್ಲಿಸಿದನು ಮತ್ತು ಇನ್ನೊಬ್ಬ ಅಮೆರಿಕದಲ್ಲಿ ಸೇವೆ ಸಲ್ಲಿಸಿದನು.

ಯುಗೊಸ್ಲಾವಿಯಾದಲ್ಲಿದ್ದ ಹುಡುಗ ಇದ್ದ ಚರ್ಚ್‌ನ ಪಾದ್ರಿ ಆ ಹುಡುಗನನ್ನು ನಿರಂತರವಾಗಿ ಗದರಿಸುತ್ತಿದ್ದಡು. ಅವನು ಮಾಡುವ ಎಲ್ಲದರಲ್ಲೂ ಅವರು ತಪ್ಪು ಹುಡುಕುತ್ತಿದ್ದರು. ಒಂದು ದಿನ, ಅವನು ಒಂದು ಹೊತ್ತಿಸಿದ ಮೇಣದಬತ್ತಿಯನ್ನು ಹಿಡಿದುಕೊಂಡು ತರುತ್ತಿದ್ದಾಗ, ಅವನು ಅದನ್ನು ಕೆಳಗೆ ಬೀಳಿಸಿದ. ಬೆಂಕಿ ಕಾರ್ಪೆಟ್‌ಗೆ ಹರಡಿ ದೊಡ್ಡ ಹಾನಿಯನ್ನುಂಟು ಮಾಡಿತು. ಪಾದ್ರಿ ತಕ್ಷಣ ಅವನ ಕೆನ್ನೆಗೆ ಹೊಡೆದು, "ನೀನು ಮೂರ್ಖ. ಈಗಲೇ ಇಲ್ಲಿಂದ ಹೊರಟು ಹೋಗು" ಎಂದು ಹೇಳಿ ಅವರು ಅವನನ್ನು ಓಡಿಸಿದರು.

ನಂತರ ಆ ಹುಡುಗ ಅಪರಾಧಿಗಳೊಂದಿಗೆ ಬೀದಿಗಳಲ್ಲಿ ಬೆಳೆದ. ಅವನು ನಿರ್ದಯ ಮತ್ತು ನಾಸ್ತಿಕನಾಗಿ ಬೆಳೆದ ಮತ್ತು ನಂತರ ದೇಶವನ್ನು ಆಳುವ ಮತ್ತು ಲಕ್ಷಾಂತರ ಜನರನ್ನು ಹಿಂಸಿಸುವ ಸರ್ವಾಧಿಕಾರಿಯಾದ.

ಅಮೆರಿಕದಲ್ಲಿಯೂ ಇದೇ ಘಟನೆ ನಡೆಯಿತು. ತನ್ನ ಮೇಣದಬತ್ತಿಯನ್ನು ಕಳೆದುಕೊಂಡ ಹುಡುಗನನ್ನು ಮೃದುವಾಗಿ ಅಪ್ಪಿಕೊಂಡ ಪಾದ್ರಿ, "ಭಯಪಡಬೇಡ, ಇದು ಎಲ್ಲರಿಗೂ ಆಗುತ್ತದೆ. ಮುಂದಿನ ಬಾರಿ ನೀನು ಇದನ್ನು ಸರಿಯಾಗಿ ಮಾಡಬಹುದು" ಎಂದು ಹೇಳಿದರು. ಮುಂದೆ ಆ ಹುಡುಗ ಜನರಿಂದ ಪ್ರೀತಿಸಲ್ಪಡುವ ಧಾರ್ಮಿಕ ನಾಯಕನಾದ. ಕೋಪ ಮತ್ತು ಟೀಕೆಗಿಂತ ದಯೆ ಮತ್ತು ಬೆಂಬಲ ಉತ್ತಮ ಫಲಿತಾಂಶಗಳನ್ನು ತರುತ್ತದೆ. ಇವುಗಳನ್ನು ಹಂಚಿಕೊಳ್ಳಲು ಪ್ರಾರಂಭಿಸೋಣ.



ಯಾರು ಸಮಸ್ಯೆ!

ಮನೆಯಲ್ಲಿ ತಂದೆ ಮತ್ತು ತಾಯಿ ನಿರಂತರವಾಗಿ ಜಗಳವಾಡುವುದನ್ನು ನೋಡಿ ಒಬ್ಬ ಯುವಕ ಚಿಂತಿತನಾದ. ತನ್ನ ಚಿಂತೆಗಳನ್ನು ಮರೆಯಲು ಮದ್ಯಪಾನ ಮಾಡಲು ಪ್ರಾರಂಭಿಸಿದ. ಮದ್ಯದ ಚಟದಿಂದಾಗಿ ಅವನಿಗೆ ಸರಿಯಾಗಿ ಓದಲು ಸಾಧ್ಯವಾಗಲಿಲ್ಲ. ಈ ಹಿಂದೆ ಅವನು ಯಾವಾಗಲೂ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯುತ್ತಿದ್ದ. ಆದರೆ ಈಗ ಅವನು ಪರೀಕ್ಷೆಯಲ್ಲಿ ಅನುತ್ತೀರ್ಣನಾದ. ಅವನ ಪ್ರಾಧ್ಯಾಪಕರು ಅವನನ್ನು ಗದರಿಸುತ್ತಿದ್ದರು, ಅವನ ಸ್ನೇಹಿತರು ಅವನಿಂದ ದೂರ ಸರಿದರು. ಅವನ ಆರೋಗ್ಯ ಹದಗೆಟ್ಟಿತು. ಅವನು ತನ್ನ ಸುತ್ತಲಿನ ಎಲ್ಲವನ್ನೂ ಸಮಸ್ಯೆಗಳೆಂದು ನೋಡತೊಡಗಿದ. ಇದರಿಂದ ಅವನು ಇನ್ನಷ್ಟು ಕುಡಿಯತೊಡಗಿದ. ಅವನು ತನ್ನ ನಿದ್ರೆ, ಮನಸ್ಸಿನ ಶಾಂತಿ ಮತ್ತು ಒಳ್ಳೆಯ ಹೆಸರನ್ನು ಕಳೆದುಕೊಂಡ.

ಒಂದು ದಿನ, ತೀವ್ರವಾದ ಹೊಟ್ಟೆ ನೋವಿನಿಂದ ವೈದ್ಯರನ್ನು ನೋಡಲು ಕಾಯುತ್ತಿದ್ದಾಗ, ಗಂಭೀರ ಗಾಯಗಳೊಂದಿಗೆ ಅಲ್ಲಿಗೆ ಬಂದಿದ್ದ ಇತರ ರೋಗಿಗಳನ್ನು ನೋಡಿ ಅವನು ಗಾಬರಿಗೊಂಡ. ಅಪಘಾತದಲ್ಲಿ ಒಂದು ಕಾಲು ಕಳೆದುಕೊಂಡವರು, ಮೂತ್ರಪಿಂಡ ವೈಫಲ್ಯದಿಂದ ಡಯಾಲಿಸಿಸ್‌ಗೆ ಬಂದವರು,

ಬದಲಾಗಬೇಕಾದುದು ಯಾರು?

ಹೊಸ ಪ್ರಯಾಣ ಆರಂಭಿಸುವಾಗ, ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾದ ಒಂದು ವಿಷಯವಿದೆ. ಅದೇನೆಂದರೆ, ಜಗತ್ತು ನಮಗಾಗಿ ಎಂದಿಗೂ ಬದಲಾಗುವುದಿಲ್ಲ. ಬದಲಾವಣೆ ನಮ್ಮೊಳಗಿನಿಂದಲೇ ಬರಬೇಕು. ನಮ್ಮ ಆಲೋಚನೆ ಮತ್ತು ವಿಧಾನ ಬದಲಾಗಬೇಕು. ಯಾವುದೇ ಸಂದರ್ಭಗಳು ಬಂದರೂ, ನಾವು ಅವರಲ್ಲಿರುವ ಒಳ್ಳೆಯದನ್ನು ನೋಡಲು ಕಲಿಯಬೇಕು.

ಒಬ್ಬ ವ್ಯಕ್ತಿಯು ವ್ಯವಹಾರವನ್ನು ಪ್ರಾರಂಭಿಸಿ ತನ್ನ ಎಲ್ಲಾ ಹೂಡಿಕೆಯನ್ನು ಕಳೆದುಕೊಂಡು ಕಷ್ಟದಲ್ಲಿದ್ದರೆ, 'ಎಲ್ಲವೂ ಮುಗಿತು ಹೋಯಿತು' ಎಂದು ಭಾವಿಸಿದರೆ ಅವನು ಎಂದಿಗೂ ಚೇತರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. 'ಎಲ್ಲವೂ ನನ್ನ ಬಳಿಯಿಂದ ಹೊರಟು ಹೋದರೇನು? ನನಗೆ ಯಾವ ಸಾಲಗಳೂ ಇಲ್ಲ, ಅಷ್ಟೇ ಸಾಕು. ನನ್ನನ್ನು ನಂಬಿ ಸಾಲ ನೀಡುವವರ ಸಹಾಯದಿಂದ ನಾನು ನನ್ನ ಜೀವನವನ್ನು ಮತ್ತೆ ಹೊಸದಾಗಿ ಪ್ರಾರಂಭಿಸಬಹುದು' ಎಂದು ಅವನು ಭಾವಿಸಿದರೆ, ಅವನು ಮತ್ತೆ ಬೇಗ ಚೇತರಿಸಿಕೊಳ್ಳಲು ಸಾಧ್ಯವಾಗುತ್ತದೆ. ಒಬ್ಬ ವ್ಯಕ್ತಿಯು ತನ್ನ ಕೆಲಸವನ್ನು ಕಳೆದುಕೊಂಡು ಹತಾಶ ಸ್ಥಿತಿಯಲ್ಲಿದ್ದರೆ, ಅವನಿಗೆ ಭವಿಷ್ಯ ಕಾಣುವುದಿಲ್ಲ. ಬದಲಾಗಿ, 'ಇದಕ್ಕಿಂತ ಉತ್ತಮ ಅವಕಾಶ ನನಗೆ ಸಿಗಬಹುದು' ಎಂದು ಅವನು ಭಾವಿಸಿದರೆ ಮತ್ತಷ್ಟು ಅವಕಾಶಗಳು ಅವನಿಗೆ ಬರುತ್ತವೆ. ವಿಷಯಗಳನ್ನು ವಿಭಿನ್ನ ದೃಷ್ಟಿಕೋನದಿಂದ ನೋಡುವವರು ಬೇಗನೆ ಹೊಸ ಆರಂಭವನ್ನು ಪಡೆಯುತ್ತಾರೆ.

ಹುಟ್ಟಿನಿಂದಲೇ ದೋಷದಿಂದ ಬಳಲುತ್ತಿರುವ ಮಗು... ಹೀಗೆ ಇನ್ನೂ ಅನೇಕರು ಅಲ್ಲಿದ್ದರು. "ಅವರ ಸಮಸ್ಯೆಗಳಿಗೆ ಹೋಲಿಸಿದರೆ ನನ್ನದೂ ಒಂದು ಸಮಸ್ಯೆಯೇ?" ಎಂಬ ಪ್ರಶ್ನೆ ಅವನಲ್ಲಿ ಉದ್ಭವಿಸಿತು.

ಆಗ ಅವನಿಗೆ ಪ್ರಜ್ಞೆ ಬಂದಿತು. "ನನ್ನ ಸುತ್ತಲೂ ತುಂಬಾ ದೊಡ್ಡ ದೊಡ್ಡ ಸಮಸ್ಯೆಗಳಿವೆ ಎಂದು ನನಗೆ ಅನ್ನಿಸುತ್ತಿರುತ್ತದೆ! ನನ್ನ ಸುತ್ತಲೂ ಇರುವುದು ನಿಜವಾಗಿಯೂ ನನ್ನ ಸಮಸ್ಯೆಯೇ ಅಥವಾ ನಾನೇ ಸಮಸ್ಯೆಯೇ?" ಎಂದು ಅವನು ಯೋಚಿಸಿ ಆಶ್ಚರ್ಯಪಟ್ಟ. ತನ್ನ ಕುಡಿತವೇ ನಿಜವಾದ ಸಮಸ್ಯೆ ಎಂದು ಆಗ ಅವನಿಗೆ ಅರಿವಾಯಿತು.

ಅವನು ಆ ಕೂಡಲೇ ಕುಡಿಯುವುದನ್ನು ನಿಲ್ಲಿಸಿದನು. ನಂತರ ಅವನು ನಿಯಮಿತವಾಗಿ ಕಾಲೇಜಿಗೆ ಹೋಗತೊಡಗಿದ. ಉತ್ತಮ ಅಂಕಗಳನ್ನು ಪಡೆಯಲು ಅವನು ಪ್ರಯತ್ನಿಸತೊಡಗಿದ. ಸ್ನೇಹಿತರು ಮತ್ತೆ ಹಿಂತಿರುಗಿ ಬಂದರು, ಪ್ರಾಧ್ಯಾಪಕರು ಅವನನ್ನು ಹೊಗಳಿದರು. ಅವನ ಕಾರಣದಿಂದಾಗಿ ಮನೆಯಲ್ಲಿ ನಡೆಯುತ್ತಿದ್ದ ಜಗಳಗಳು ನಿಂತು ಹೋದವು. ಇದೇ ರೀತಿ, ಜೀವನದಲ್ಲಿ ಹಿನ್ನಡೆಗಳಿರುವ ಸಂದರ್ಭಗಳಲ್ಲಿ, 'ನಾನೇ ಸಮಸ್ಯೆಯೇ?' ಎಂದು ನೀವು ನಿಮ್ಮನ್ನು ಕೇಳಿಕೊಂಡರೆ, ಅದಕ್ಕೆ ನೀವು ಪರಿಹಾರಗಳನ್ನು ಕಂಡುಕೊಳ್ಳುವಿರಿ.

ವಯಸ್ಸು ಎಷ್ಟು?

ಸುಮಾರು 70 ವರ್ಷಗಳ ಒಬ್ಬ ವೃದ್ಧ, ಆಶೀರ್ವಾದ ಪಡೆಯಲು ಒಬ್ಬ ಋಷಿಯ ಬಳಿಗೆ ಬಂದ. ಆದರೆ ಅವನು ವೃದ್ಧಾಪ್ಯದಿಂದ ನಡುಗದೆ, ಉತ್ಸಾಹದಿಂದ ನಡೆದು ಬಂದ. "ಈ ಮಗುವನ್ನು ಆಶೀರ್ವದಿಸಿ" ಎಂದು ಹೇಳು ಅವನು ಋಷಿಗೆ ನಮಸ್ಕರಿಸಿದ. ಋಷಿ ಗೊಂದಲಕ್ಕೊಳಗಾದ ಮತ್ತು "ನೀವು ನಿಮ್ಮನ್ನು ಮಗು ಎಂದು ಹೇಳಿಕೊಳ್ಳುತ್ತಿದ್ದೀರಿ... ನಿಮ್ಮ ವಯಸ್ಸು ಎಷ್ಟು?" ಎಂದು ಋಷಿ ಕೇಳಿದ. "ನಾಲ್ಕು ವರ್ಷ" ವೃದ್ಧ ಹೇಳಿದ. "ಹೇಗೆ?" ಋಷಿ ಮತ್ತೆ ಕೇಳಿದ. "ನಾನು ನನ್ನ ತಪ್ಪುಗಳನ್ನು ಸರಿ ಪಡಿಸಿಕೊಂಡು ನಾಲ್ಕು ವರ್ಷಗಳ ಹಿಂದೆ ಹೊಸದಾಗಿ ಜೀವನವನ್ನು ಪ್ರಾರಂಭಿಸಿದೆ. ಆ ಪುನರ್ಜನ್ಮವನ್ನೇ ನನ್ನ ವಯಸ್ಸು ಎಂದು ನಾನು ಪರಿಗಣಿಸುತ್ತೇನೆ" ಎಂದು ವೃದ್ಧ ಹೇಳಿದ.

ಘನತೆಯಿಂದ ಮರುಹುಟ್ಟು ಪಡೆಯಿರಿ!

ಮತ್ತೆ ಹೊಸದಾಗಿ ಆರಂಭ!

ಕಡಲತೀರದಲ್ಲಿ ಆಟವಾಡುತ್ತಾ, ಮರಳಿನಲ್ಲಿ ಮನೆ ಕಟ್ಟುತ್ತಾ ಇರುವ ಮಗು, ಅಲೆಗಳು ಅದನ್ನು ಕೊಚ್ಚಿಕೊಂಡು ಹೋದರೂ, ಮತ್ತೆಮತ್ತೆ ಪ್ರಾರಂಭಿಸುತ್ತದೆ. ಹೀಗೆ ಎಷ್ಟು ಸಲ ಆದರೂ ಮಗು ಬೇಸರಿಸಿಕೊಳ್ಳುವುದಿಲ್ಲ. ಆದರೆ ಬದುಕಿನಲ್ಲಿ ಏನಾದರೂ ಅನಿರೀಕ್ಷಿತವಾಗಿ ಏನಾದರೂ ಸಂಭವಿಸಿದಾಗ ಮುದುಡಿ ಹೋಗುವುದು ವಯಸ್ಕರು ಮಾತ್ರ. ಹಾಗಾದಾಗ, ನಾವು ಹೇಗೆ ಮತ್ತೆ ಅದನ್ನು ಪ್ರಾರಂಭಿಸಬಹುದು?

ಒಂದು ವೈಫಲ್ಯದಿಂದ ಚೇತರಿಸಿಕೊಂಡು ಅದೇ ಕೆಲಸ ಅಥವಾ ವೃತ್ತಿಯಲ್ಲಿ ಮತ್ತೆ ಯಶಸ್ವಿಯಾಗುವುದು ಒಂದು ರೀತಿಯ ಪುನರುಜ್ಜೀವನದ ಜೀವನ. ಅನುಭವವು ನಿಮಗೆ ಅದರಲ್ಲಿ ಸಹಾಯ ಮಾಡುತ್ತದೆ. ಆದರೆ, ಹೊಸ ಆರಂಭವೆಂದರೆ ಅದು ಅಲ್ಲ! ಅದು ಏನನ್ನಾದರೂ ಮಾಡುವುದು, ಅದರಲ್ಲಿರುವ ಎಲ್ಲವನ್ನೂ ಕಳೆದುಕೊಳ್ಳುವುದು ಮತ್ತು ಶೂನ್ಯದಿಂದ ಹೊಸದನ್ನು ಪ್ರಾರಂಭಿಸುವುದು. ನೀವು ಸಂಪೂರ್ಣವಾಗಿ ಹೊಸ ಜನ್ಮದಂತೆ ಭಾವಿಸಿದಾಗ ಮಾತ್ರ ಇದು ಸಾಧ್ಯ.

ನೀವು ಈಗ ಇರುವ ಪರಿಸ್ಥಿತಿಯನ್ನು ಅರಿತುಕೊಳ್ಳಿ ಮತ್ತು ಸ್ವೀಕರಿಸಿ. ಎಲ್ಲಿಂದ ಪ್ರಾರಂಭಿಸಬೇಕು ಮತ್ತು ನಿಮ್ಮ ಜೀವನವನ್ನು ಹೇಗೆ ಪುನರ್ನಿರ್ಮಿಸಬೇಕು ಎಂದು ಯೋಜಿಸಿ.

ನೀವು ಹೊಸ ಆರಂಭವನ್ನು ಬಯಸಿದರೆ, ನಿಮ್ಮ ಗುಣಗಳು ಸಹ ಬದಲಾಗಬೇಕು. ಕೋಪ, ಹತಾಶೆ, ದ್ವೇಷ, ಅಸೂಯೆ ಮುಂತಾದ ಗುಣಗಳನ್ನು ದೂರವಿಡಿ. 'ನಾವು ಇದನ್ನು ಜಯಿಸಿ ಮುಂದುವರಿಯುತ್ತೇವೆ' ಎಂಬ ನಂಬಿಕೆಯೊಂದಿಗೆ ನಿಮ್ಮ ಮನಸ್ಸಿನಲ್ಲಿ ವರ್ತಿಸಿ.

ನಕಾರಾತ್ಮಕವಾಗಿ ಮಾತನಾಡುವ ಮತ್ತು ನಿಮ್ಮನ್ನು ವಿಫಲ ಎಂದು ಭಾವಿಸುವ ಸ್ನೇಹಿತರು ಮತ್ತು ಸಂಬಂಧಿಕರಿಂದ ದೂರವಿರಿ. ಸಕಾರಾತ್ಮಕವಾಗಿ ಮಾತನಾಡುವ ಮತ್ತು ನಿಮ್ಮನ್ನು ಪ್ರೋತ್ಸಾಹಿಸುವ ಜನರೊಂದಿಗೆ ಮಾತ್ರ ಮಾತನಾಡಿ.

ಇತರರು ನಿಮಗೆ ಏನು ಹೇಳುತ್ತಾರೆಯೋ ಹಾಗೆಯೇ, ನೀವು ನಿಮಗೆ ಏನು ಹೇಳಿಕೊಳ್ಳುತ್ತೀರಿ ಎಂಬುದು ನೀವು ನಿಮ್ಮೊಂದಿಗೆ ಮಾತನಾಡಿಕೊಳ್ಳುವುದು ಸಹ ಮುಖ್ಯ. ನಿಮ್ಮ ಕೆಲಸ ಮತ್ತು ನಿಮ್ಮ ಭವಿಷ್ಯದ ಗುರಿ ಯಾವಾಗಲೂ ನಿಮ್ಮ ಗಮನವಾಗಿರಬೇಕು. ಅದನ್ನು ಹೇಗೆ ಸಾಧಿಸುವುದು ಎಂಬುದರ ಬಗ್ಗೆ ಮಾತ್ರ ನಿಮ್ಮೊಂದಿಗೆ ಮಾತನಾಡಿ.

ನೀವು ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರಲಿ, ಅನುಭವಿ ಮಾರ್ಗದರ್ಶಕರ ಸಹಾಯವನ್ನು ಪಡೆಯಿರಿ. ನೀವು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದೀರಿ ಎಂದು ಖಚಿತಪಡಿಸಿಕೊಳ್ಳಲು ಅವರು ಅಥವಾ ಅವಳು ನಿಮ್ಮನ್ನು ಗುರುತಿಸಿ ಮಾರ್ಗದರ್ಶನ ನೀಡುತ್ತಾರೆ.

ನಮ್ಮ ಕಣ್ಣುಗಳು ಮುಂದೆ ನೋಡುತ್ತವೆ, ಭವಿಷ್ಯದ ಮೇಲೆ ನಾವು ಗಮನಹರಿಸಬೇಕು ಎಂದು ಸೂಚಿಸುತ್ತವೆ. ಆದರೆ ನಮ್ಮ ಮನಸ್ಸು, ಅದನ್ನು ಅರಿತುಕೊಳ್ಳದೆ, ಭೂತಕಾಲಕ್ಕೆ ಹಿಂತಿರುಗಿ ಹಳೆಯ ತಪ್ಪುಗಳನ್ನು ನೆನಪಿಸಿಕೊಳ್ಳುತ್ತಲೇ ಇರುತ್ತದೆ. ನಿಮ್ಮ ಹಿಂದಿನ ಯಾವುದೇ ಕ್ರಿಯೆಗಳು ನಿಮ್ಮ ಭವಿಷ್ಯವನ್ನು ನಿರ್ಧರಿಸುವುದಿಲ್ಲ. ನೀವು ಈಗ ಏನು ಮಾಡುತ್ತೀರಿ ಎಂಬುದು ಮುಖ್ಯ.

ನೀವು ಹಲವು ದಿನಗಳಿಂದ ಬೆಳಿಗ್ಗೆಯಿಂದ ಸಂಜೆಯವರೆಗೆ ಒಂದು ನಿರ್ದಿಷ್ಟ ದಿನಚರಿಗೆ ಒಗ್ಗಿಕೊಂಡಿದ್ದೀರಿ. ಇಂದಿನಿಂದ ಅದು ಬದಲಾಗಬಹುದು. ಯಾವುದೇ ಬದಲಾವಣೆಗಳಿಗೆ ಸಿದ್ಧರಾಗಿರಿ. 'ನಾನು ಎಲ್ಲವನ್ನೂ ಹೀಗೆಯೇ ಮಾಡಬೇಕು' ಎಂದು ಹೇಳುವ ನಿಮ್ಮ ಮನಸ್ಸಿನಲ್ಲಿ ಒಂದು ಸಣ್ಣ ಪ್ರತಿರೋಧದ ಭಾವನೆ ಇರುವುದು ತಪ್ಪು. ಅದನ್ನು ಅನುಮತಿಸಬೇಡಿ.

ವೈದ್ಯರು ರೋಗಿಯನ್ನು ಪರೀಕ್ಷಿಸುವಂತೆಯೇ, ಕಾಲಕಾಲಕ್ಕೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿ. ನೀವು ಸರಿಯಾದ ಹಾದಿಯಲ್ಲಿದ್ದೀರಾ, ನೀವು ಎಷ್ಟು ಪ್ರಗತಿ ಹೊಂದಿದ್ದೀರಿ, ನೀವು ಎಷ್ಟು ಜಾಗರೂಕರಾಗಿದ್ದೀರಿ ಮತ್ತು ನೀವು ಇತರರೊಂದಿಗೆ ಹೇಗೆ ಸಂವಹನ ನಡೆಸುತ್ತೀರಿ ಎಂಬುದನ್ನು ಗಮನಿಸಿ. ಹೊಸ ಆರಂಭವು ನಿಮ್ಮನ್ನು ಉತ್ತಮ ಅಂತ್ಯಕ್ಕೆ ಕೊಂಡೊಯ್ಯುತ್ತದೆ. ●

RAMRAJ ©
SHIRTINGS & SUITINGS
COTTON • LINEN • TRADITIONAL
100% Premium Fabrics
SCAN QR CODE FOR STORE LOCATION

RAMRAJ
LITTLE STARS®
KIDS DHOTIS • SHIRTS
SCAN QR CODE FOR
STORE LOCATION
Available at Ramraj Showrooms & All leading Textile Shops | Shop Online at www.ramrajcotton.in


RAMRAJ
ACHARYA
PANCHAKACHAM DHOTIS
True Spiritual
Strength Reflected
In Simplicity
SCAN QR CODE FOR
STORE LOCATION
Available at Ramraj Showrooms & All leading Textile Shops | Shop Online at www.ramrajcotton.in

RAMRAJ
mithu
TOWELS
Pure Comfort.
Woven from nature's finest,
100% pure cotton and bamboo,
Mrithu Towels are crafted for
quick absorption, a gentle touch,
and effortless elegance
Made for everyday moments
that deserve a little more.
STORE LOCATION
Shop Online at
www.ramrajcotton.in
BAMBOO TOWELS
SIGNATURE TOWELS
TERRY TOWELS
STRIPED & CHECKERED TOWELS
SUPER SOFT & SUPER ABSORBENT
Available at Ramraj Showrooms and All Leading Textile Shops

ನಿಮ್ಮ ಮನೆಗೇ ಬರಬೇಕೇ?

ಬಿಳುಪು

ಚಂದಾದಾರರಾಗಿ!

‘ಉನ್ನತವಾದ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು’ ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ ‘ಬಿಳುಪು’ ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯು ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

ವಾರ್ಷಿಕ ಚಂದಾ ರೂ. 200
ದ್ವೈವಾರ್ಷಿಕ ಚಂದಾ ರೂ. 380

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.

ಇಲ್ಲವೇ

VENMAII ಬ್ಯಾಂಕ್ ಖಾತೆ (A/C No: 1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.

ವಿಳಾಸ : Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net

ಚಂದಾ ಸಲ್ಲಿಸಲೂ, ಒಟ್ಟಾಗಿ ‘ಬಿಳುಪು’ ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.

ಫೋನ್ : 0421-4304106, 9842274137.

ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe G Pay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಫೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯ QR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.

ಬ್ಯಾಂಕ್ ಖಾತೆಯ ವಿವರ Venmaii
A/C No: 1809135000000299
Karur Vysya Bank,Tirupur SR Nagar Branch
IFSC Code: KVBL0001809.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ

(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

ವಾರ್ಷಿಕ ಚಂದಾ	ದ್ವೈವಾರ್ಷಿಕ ಚಂದಾ
ರೂ.~~200~~ ರೂ.125 ಮಾತ್ರ	ರೂ.~~380~~ ರೂ.250 ಮಾತ್ರ

ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ

(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

ವಾರ್ಷಿಕ ಚಂದಾ	ದ್ವೈವಾರ್ಷಿಕ ಚಂದಾ
ರೂ.~~200~~ ರೂ.125 ಮಾತ್ರ	ರೂ.~~380~~ ರೂ.250 ಮಾತ್ರ

ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.

ಒಬ್ಬ ಭಕ್ತ ಸನ್ಯಾಸಿಯ ಬಳಿಗೆ ಬಂದು ಯಾವಾಗಲೂ ಏನಾದರೂ ಹಲುಬಿಕೊಂಡೇ ಇರುತ್ತಿದ್ದ. ಪ್ರತಿ ಬಾರಿ ಬಂದಾಗಲೂ ಯಾವುದಾದರೂ ಒಂದು ಹೊಸ ಸಮಸ್ಯೆಯನ್ನು ಹೇಳುತ್ತಿದ್ದ. ಸನ್ಯಾಸಿ ತಾಳ್ಮೆಯಿಂದ ಪರಿಹಾರಗಳನ್ನು ತಿಳಿಸಿ ಕಳುಹಿಸುತ್ತಿದ್ದ. ಮುಂದಿನ ತಿಂಗಳು, ಆ ಭಕ್ತ ಬೇರೊಂದು ಬಗೆಯ ಸಮಸ್ಯೆಗಳ ಪಟ್ಟಿಯೊಂದಿಗೆ ಬರುತ್ತಿದ್ದ. ಸನ್ಯಾಸಿ ಆಶ್ಚರ್ಯಚಕಿತನಾಗಿ, "ಒಬ್ಬ ಮನುಷ್ಯ ತನ್ನ ಜೀವನದಲ್ಲಿ ಇಷ್ಟೊಂದು ಸಮಸ್ಯೆಗಳನ್ನು ಹೇಗೆ ಸೃಷ್ಟಿಸಿಕೊಳ್ಳಲು ಸಾಧ್ಯ?" ಎಂದು ಯೋಚಿಸಿದ. ಭಕ್ತ ತನ್ನ ಸಮಸ್ಯೆಗಳನ್ನು ವಿವರಿಸುವಾಗ ಸನ್ಯಾಸಿಗೆ ಕಿರಿಕಿರಿಯೂ ಆಗುತ್ತಿತ್ತು.

ಒಮ್ಮೆ ಆ ಭಕ್ತ ಬಂದಾಗ ಸನ್ಯಾಸಿ ಸದ್ದಿಲ್ಲದೆ ಅವನನ್ನು ಹತ್ತಿರಕ್ಕೆ ಕರೆದು, ಒಂದು ಲೋಟ ನೀರು ತರಲು ಹೇಳಿದ. ಅವನು ತಂದ ನೀರಿನಲ್ಲಿ ಒಂದು ಹಿಡಿ ಉಪ್ಪು ಹಾಕಿ ಆ ನೀರು ಕುಡಿಯುವಂತೆ ಹೇಳಿದ. ಒಂದು ಗುಟುಕು ಕುಡಿದ ನಂತರ, ಭಕ್ತ ಮುಖ ಗಂಟಿಕ್ಕಿಕೊಂಡು, "ಓಹ್, ಇದು ಉಪ್ಪಾಗಿದೆ" ಎಂದು ಹೇಳಿದ. ಸನ್ಯಾಸಿ ಸದ್ದಿಲ್ಲದೆ ಅವನನ್ನು ಹತ್ತಿರದ ಕೊಳಕ್ಕೆ ಕರೆದೊಯ್ದು, ಕೊಳದ ನೀರಿನೊಳಗೆ ಒಂದು ಹಿಡಿ ಉಪ್ಪು ಹಾಕಿ, ನಂತರ ಆ ನೀರನ್ನು ತೆಗೆದುಕೊಂಡು ಕುಡಿಯಲು ಹೇಳಿದ. "ಈ ನೀರು ಹೇಗಿದೆ?" ಎಂದು ಸನ್ಯಾಸಿ ಅವನನ್ನು ಕೇಳಿದ. "ಉಪ್ಪು ಕಾಣಿಸುತ್ತಿಲ್ಲ" ಎಂದು ಭಕ್ತ ಹೇಳಿದ.

"ಜೀವನದಲ್ಲಿ ಸಮಸ್ಯೆಗಳು ಕೂಡ ಈ ಉಪ್ಪಿನಂತೆಯೇ. ಅವು ಹೆಚ್ಚಾಗುವುದಿಲ್ಲ ಅಥವಾ ಕಡಿಮೆಯಾಗುವುದಿಲ್ಲ. ಸಮಸ್ಯೆಗಳು ಎದುರಾಗುವಾಗ ನಾವು ನಮ್ಮ ಮನಸ್ಸನ್ನು ಒಂದು ಲೋಟದ ಹಾಗೆ ಚಿಕ್ಕದಾಗಿಟ್ಟುಕೊಂಡಿದ್ದರೆ, ಸಮಸ್ಯೆಯ ನೋವು ಹೆಚ್ಚು ಎನ್ನಿಸುತ್ತದೆ. ನಾವು ನಮ್ಮ ಮನಸ್ಸನ್ನು ಕೊಳದಂತೆ ವಿಶಾಲಗೊಳಿಸಿಕೊಂಡರೆ, ನೋವು ಕಡಿಮೆಯಾಗಿ ಕಾಣಿಸುತ್ತದೆ. ನೀನು ಲೋಟದಂತೆ ಸಂಕುಚಿತವಾಗಿರದೆ, ಕೊಳದಂತೆ ವಿಶಾಲವಾಗಿರು" ಎಂದು ಸನ್ಯಾಸಿ ಹೇಳಿದ. ಭಕ್ತ ಅದನ್ನು ಅರ್ಥ ಮಾಡಿಕೊಂಡು ಅಲ್ಲಿಂದ ಹೊರಟು ಹೋದ. ಅದರ ನಂತರ, ಅವನು ಎಂದಿಗೂ ಸಮಸ್ಯೆಗಳೊಂದಿಗೆ ಸನ್ಯಾಸಿಯ ಬಳಿಗೆ ಬರಲಿಲ್ಲ.

ನೀವು ಆಳವಾದ ಖಿನ್ನತೆಯಿಂದ ಹೊರ ಬಂದು ಹೊಸ ಜೀವನವನ್ನು ಪ್ರಾರಂಭಿಸಿದಾಗ, ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ದುಃಖದ ಭಾವನೆಗಳು ಇರುವುದು ಸಹಜ. ಜೀವನದಲ್ಲಿ ಅದನ್ನು ಬದಿಗಿಟ್ಟು ಯಶಸ್ವಿಯಾಗಿ ಚೇತರಿಸಿಕೊಳ್ಳಲು ಮುಖ್ಯವಾದ ಕೆಲವು ವಿಷಯಗಳಿವೆ. ಅವುಗಳೆಂದರೆ:

- "ಇದು ನಿಮ್ಮ ಕೊನೆಯ ಅವಕಾಶ" ಎಂದು ಯೋಚಿಸಿ. ನೀವು ಏನಾದರೂ ಹೊಸದನ್ನು ಪ್ರಾರಂಭಿಸಿದರೂ, ಭರವಸೆ ಕಳೆದುಕೊಳ್ಳಬೇಡಿ. ಅದನ್ನು ಸಂತೋಷದಿಂದ ಮಾಡಲು ಪ್ರಾರಂಭಿಸಿ. ಸಂತೋಷವಾಗಿರುವ ಜನರು ಏನನ್ನಾದರೂ ಸಾಧಿಸಬಹುದು.
- ನೀವು ಬಹಳಷ್ಟು ಕಳೆದುಕೊಂಡಿದ್ದರೂ ಸಹ, ಕಳೆದು ಹೋದದ್ದಕ್ಕಾಗಿ ದುಃಖಿಸಬೇಡಿ. ಅದಕ್ಕಾಗಿ ದೇವರಿಗೆ ಧನ್ಯವಾದಗಳನ್ನು ಸಲ್ಲಿಸಿ. ನಿಮ್ಮಲ್ಲಿರುವ ಪ್ರತಿಭೆಗಳನ್ನು ಪ್ರಶಂಸಿಸಿ.
- ಎಲ್ಲಾ ಜನರನ್ನು ಗೌರವದಿಂದ ನಡೆಸಿಕೊಳ್ಳಿ. ಯಾರ ಹಿನ್ನೆಲೆ ಅಥವಾ ಸಂದರ್ಭಗಳನ್ನು ತಿಳಿಯದೆ ಅವರನ್ನು ನೋಯಿಸಬೇಡಿ. ನೀವು ಜನರನ್ನು ಪ್ರೀತಿಸಿ ಏನನ್ನಾದರೂ ಮಾಡಿದರೆ, ಅದರಲ್ಲಿ ನಿಮಗೆ ಹೆಚ್ಚಿನ ತೃಪ್ತಿ ಸಿಗುತ್ತದೆ.
- ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಂದಲ್ಲ ಒಂದು ಪ್ರತಿಭೆ ಇರುತ್ತದೆ. ಮುಖ್ಯ ವಿಷಯವೆಂದರೆ ಅದನ್ನು ಕಂಡುಕೊಳ್ಳುವುದು ಮತ್ತು ಅಗತ್ಯವಿರುವಲ್ಲಿ ಬಳಸುವುದು. ಪ್ರತಿಯೊಬ್ಬರ ಸಾಮರ್ಥ್ಯಗಳನ್ನು ಅನ್ವೇಷಿಸಿ. ಆದರೆ ನಿಮ್ಮ ಮನಸ್ಸಿನ ತಕ್ಕಡಿಯಲ್ಲಿ ಯಾರನ್ನೂ ತೂಗಿ ಅವರ ಜೊತೆ ಕೆಟ್ಟದಾಗಿ ವರ್ತಿಸಬೇಡಿ.
- 100ನೇ ವಯಸ್ಸಿನಲ್ಲಿಯೂ ಕಲಿಯುತ್ತಿರುವ ಜನರಿದ್ದಾರೆ. ಎಲ್ಲವೂ ತುಂಬಾ ವೇಗವಾಗಿ ಬದಲಾಗುತ್ತಿರುವ ಈ ಜಗತ್ತಿನಲ್ಲಿ,

ನಿಮ್ಮ ಕೆಲಸ, ವೃತ್ತಿ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ಹೊಸ ವಿಷಯಗಳನ್ನು ಕಲಿಯಿರಿ.

- ಇತರರು ಏನು ಹೇಳುತ್ತಿದ್ದಾರೆ ಎಂಬುದನ್ನು ಆಲಿಸಿ. ಅದು ನೀವು ಏನು ಮಾಡುತ್ತಿದ್ದೀರಿ ಎಂಬುದರ ಮೇಲೆ ಪರಿಣಾಮ ಬೀರಬಹುದು. ನಿಮ್ಮ ಮಾರ್ಗದರ್ಶಿಗಳಿಂದ ಹಿಡಿದು ಗ್ರಾಹಕರವರೆಗೆ ಎಲ್ಲರ ಅಭಿಪ್ರಾಯಗಳನ್ನು ಆಲಿಸಿ.
- ನೀವು ಯಾವುದೇ ಕ್ರಮ ಕೈಗೊಂಡರೂ, ಅದಕ್ಕೆ ಒಂದು ಸರಿಯಾದ ಕಾರಣವಿರಬೇಕು. ಅದೇ ರೀತಿ, "ನೀವು ಇದನ್ನು ಮಾಡಿದರೆ, ಈ ಫಲಿತಾಂಶ ಬರುತ್ತದೆ" ಎಂದು ನೀವು ಭಾವಿಸಬೇಕು. ಉತ್ತಮ ಫಲಿತಾಂಶಗಳಿಗೆ ಕಾರಣವಾಗುವ ಕ್ರಿಯೆಗಳನ್ನು ಮಾತ್ರ ನೀವು ಮಾಡಬೇಕು.
- ಇತರರಿಂದ ಬರುವ ಪ್ರೋತ್ಸಾಹವು ನಿಮ್ಮನ್ನು ಪ್ರೇರೇಪಿಸುತ್ತದೆ. ಅಂತಹ ಜನರೊಂದಿಗೆ ನಿಮ್ಮನ್ನು ಸುತ್ತುವರೆದಿರಿ. ಅದೇ ರೀತಿ, ಇತರರ ಸಾಧನೆಗಳನ್ನು ಪ್ರಶಂಸಿಸಿ ಮತ್ತು ಪ್ರೋತ್ಸಾಹಿಸಿ. ನೀವು ಏನು ನೀಡುತ್ತೀರೋ ಅದನ್ನು ನೀವು ಪಡೆಯುತ್ತೀರಿ.
- ಎಷ್ಟೇ ಒತ್ತಡದ ಕೆಲಸಗಳು ಮತ್ತು ಕಠಿಣ ಸನ್ನಿವೇಶಗಳು ಬಂದರೂ ನಗುವುದನ್ನು ಮರೆಯಬೇಡಿ. ನಗುವಿನಿಂದ ಕಷ್ಟಗಳನ್ನು ನಿವಾರಿಸುವುದು ಹೇಗೆಂದು ತಿಳಿದಿರುವ ಜನರು ಏನನ್ನಾದರೂ ಸಾಧಿಸಬಹುದು.
- ವಿನಮ್ರತೆ, ಧೈರ್ಯ ಮತ್ತು ಪ್ರಾಮಾಣಿಕತೆ – ಇವು ಮೂರೂ ವ್ಯಕ್ತಿಯನ್ನು ಮೇಲಕ್ಕೆತ್ತುವ ಏಣಿಗಳಾಗಿರುತ್ತವೆ. ಯಾವುದೇ ಸಂದರ್ಭದಲ್ಲೂ ಈ ಗುಣಗಳನ್ನು ಎಂದಿಗೂ ಬಿಟ್ಟುಕೊಡಬೇಡಿ. 'ಈ ವ್ಯಕ್ತಿ ಏನಾದರೂ ಹೇಳಿದರೆ ಅದು ಸರಿಯಾಗಿರುತ್ತದೆ' ಎಂಬ ವಿಶ್ವಾಸವನ್ನು ಹೊಂದಿರಿ.
- ಇತರರಿಗಿಂತ ವಿಭಿನ್ನವಾಗಿ ಕೆಲಸ ಮಾಡುವವರು ಗೆಲ್ಲುತ್ತಾರೆ. ಇತರರಿಗಿಂತ ವಿಭಿನ್ನವಾಗಿ ಯೋಚನೆ ಮಾಡುವವರು ಸಹ ಗೆಲ್ಲುತ್ತಾರೆ. ನೀವು ಏನೇ ಮಾಡಿದರೂ, ವ್ಯತ್ಯಾಸವಾಗಿ ಮಾಡಿ.
- ನೀವು ಕಷ್ಟಪಟ್ಟು ಕೆಲಸ ಮಾಡಿದರೂ, ನಡುವೆ ಸಾಕಷ್ಟು ವಿಶ್ರಾಂತಿ ಪಡೆಯಿರಿ. ನಿಮ್ಮ ಬಿಡುವಿನ ವೇಳೆಯನ್ನು ನಿಮ್ಮ ಮನಸ್ಸನ್ನು ಉತ್ಕೃಷ್ಟಗೊಳಿಸುವ ಚಟುವಟಿಕೆಗಳಲ್ಲಿ ಕಳೆಯಿರಿ. ನಿಮ್ಮ ಕುಟುಂಬದೊಂದಿಗೆ ಸಮಯ ಕಳೆಯಿರಿ. ಆದರೆ ಸಮಯ ವ್ಯರ್ಥ ಮಾಡಬೇಡಿ. ಅನಗತ್ಯ ಚರ್ಚೆಗಳನ್ನು ಮಾಡಬೇಡಿ.
- 'ಇದು ಆಗುತ್ತದೆಯೋ ಇಲ್ಲವೋ?', 'ನಾನು ಕೇಳಿದ ಹಣ ಇವರ ಬಳಿ ನನಗೆ ಸಿಗುತ್ತದೆಯೋ, ಇಲ್ಲವೋ?' ಎಂಬಂತೆ ಎಂದಿಗೂ ನಕಾರಾತ್ಮಕವಾಗಿ ಯೋಚಿಸಬೇಡಿ. ನಂಬಿಕೆ ಇದ್ದರೆ ಮಾತ್ರ ಎಲ್ಲವೂ ಸರಿಯಾಗಿ ನಡೆಯುತ್ತದೆ. ಇತರರು ತಪ್ಪು ಎಂದು ಭಾವಿಸುವ ಏನನ್ನೂ ಮಾಡಬೇಡಿ. ಇತರರಿಂದ ಹೊಗಳಿಕೆ ಪಡೆಯಬೇಕೆಂದು ಬಯಸಿ ಏನನ್ನೂ ಮಾಡಬೇಡಿ. ಯಾವುದು ಸರಿಯೋ ಅದನ್ನು ಚೆನ್ನಾಗಿ ಮಾಡಿ.
- ಇತರರು ನಿಮ್ಮನ್ನು ನಂಬದಿದ್ದರೂ, ನಿಮ್ಮ ಮೇಲೆ ಮೊದಲು ನೀವು ನಂಬಿಕೆ ಇಡಿ. ನಿಮ್ಮ ಕನಸುಗಳನ್ನು ನನಸಾಗಿಸಲು ನಿಮ್ಮನ್ನು ತಡೆಯುವ ಏಕೈಕ ವಿಷಯವೆಂದರೆ ನಿಮ್ಮ ಅನುಮಾನ! ಅದನ್ನು ಗುಡಿಸಿ ಎಸೆಯಿರಿ.
- ನಿಮ್ಮ ಜೀವನವನ್ನು ಬದಲಾಯಿಸುವ ಜವಾಬ್ದಾರಿ ನಿಮ್ಮದು. ನೀವು ಬದಲಾದರೆ ಮಾತ್ರ ಅದು ಬದಲಾಗುತ್ತದೆ. ಯಾವುದೇ ತಪ್ಪುಗಳಿಗೆ ಇತರರನ್ನು ದೂಷಿಸಬೇಡಿ.
- ಹೊಸದನ್ನು ಪ್ರಾರಂಭಿಸುವುದು ಪಾದಯಾತ್ರೆಯಂತೆ. ಹಾದಿ ಕಷ್ಟಕರವಾಗಿರುತ್ತದೆ. ನೀವು ಕೆಲವು ಸ್ಥಳಗಳಲ್ಲಿ ಎತ್ತರಕ್ಕೆ ಏರುತ್ತೀರಿ ಮತ್ತು ಇತರ ಸ್ಥಳಗಳಲ್ಲಿ ಪ್ರಪಾತಕ್ಕೆ ಇಳಿಯುತ್ತೀರಿ. ಆದ–ರೆ ತಲುಪಬೇಕಾದ ಶಿಖರವನ್ನು ಏರುವ ಆಸೆಯನ್ನು ಮಾತ್ರ ಕಳೆದುಕೊಳ್ಳಬಾರದು. ಅದೇ ರೀತಿ, ಗುರಿಯನ್ನು ಮರೆಯಬೇಡಿ.
- ಗೆಲ್ಲುವ ಆಸೆ ಯಾವಾಗಲೂ ನಿಮ್ಮ ಮನಸ್ಸಿನಲ್ಲಿರಬೇಕು. ಮಗು ತಿನ್ನಲು ನಿರಾಕರಿಸಿ ಓಡಿ ಹೋದರೂ, ತಾಯಿ ಅದನ್ನು ಬೆನ್ನಟ್ಟುತ್ತಾಳೆ. ಕನಿಷ್ಠ ಪಕ್ಷ ಅವಳು ಮಗುವಿನ ಗಮನವನ್ನು ಬೇರೆಡೆಗೆ ತಿರುಗಿಸಿ ಆಹಾರ ನೀಡುತ್ತಾಳೆ. ನೀವು ಆ ತಾಯಿಯಂತೆ ವರ್ತಿಸಬೇಕು.
- ಈ ಹೊಸ ಪ್ರಯತ್ನದಲ್ಲಿ ನೀವು ಸಾಧಿಸುವ ಯಶಸ್ಸನ್ನು ಊಹಿಸಿಕೊಳ್ಳಿ. ನಿಮ್ಮ ಕಲ್ಪನೆಯಲ್ಲಿ ನೀವು ನೋಡುವ ಕನಸು ಶೀಘ್ರದಲ್ಲೇ ವಾಸ್ತವವಾಗುತ್ತದೆ

ಮರುಹುಟ್ಟು ಪಡೆಯಿರಿ!

ಫೀನಿಕ್ಸ್ ಪಕ್ಷಿಯನ್ನು ಸುಟ್ಟು ಹಾಕಿದರೂ, ಅದು ತನ್ನ ಬೂದಿಯಿಂದಲೇ ಮತ್ತೆ ಮೇಲೆದ್ದು ಬರುತ್ತದೆ ಎಂದು ಹೇಳುವುದುಂಟು. ಇದು ಕಾಲ್ಪನಿಕ ಹಕ್ಕಿಯಾಗಿದ್ದರೂ, ನಷ್ಟಗಳಿಂದ ಚೇತರಿಸಿಕೊಳ್ಳುತ್ತಿರುವ ಎಲ್ಲರಿಗೂ ಫೀನಿಕ್ಸ್ ಒಂದು ಭರವಸೆಯ ಉದಾಹರಣೆಯಾಗಿದೆ. ಧ್ವನಿ ಮಾಡಿದ ಕೂಡಲೇ ಧಾವಿಸಿ ಓಡುವ ಓಟಗಾರರಂತೆ, ನೀವೂ ಹೊಸ ಆರಂಭದೊಂದಿಗೆ ಮುಂದುವರಿಯಲು ಕೆಲವು ಮಾರ್ಗಗಳು ಇದೋ ಇಲ್ಲಿವೆ:

- ಇತರರಿಗಿಂತ ಉನ್ನತ ಜೀವನವನ್ನು ನಡೆಸಬೇಕೆಂದು ಯೋಚಿಸಬೇಡಿ. ನಿಮ್ಮ ಹಿಂದಿನ ಸ್ಥಿತಿಗಿಂತ ಉತ್ತಮ ಸ್ಥಿತಿಯನ್ನು ಸಾಧಿಸುವ ಬಗ್ಗೆ ಯೋಚಿಸಿ. ನಿಮ್ಮ ಜೀವನ ಉತ್ತಮವಾಗಿರುತ್ತದೆ.
- ಕೋಪ ಅಥವಾ ಹತಾಶೆಯಿಂದ ಯಾವುದೇ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳಬೇಡಿ. ನಿರ್ಧಾರ ತೆಗೆದುಕೊಳ್ಳುವ ಮೊದಲು ಎಚ್ಚರಿಕೆಯಿಂದ ಯೋಚಿಸಿ. ಅದರಿಂದ ಹಿಂದೆ ಸರಿಯಬೇಡಿ.
- ನೀವು ಮಾಡಿದ್ದಕ್ಕಿಂತ ಹೆಚ್ಚಾಗಿ ಮಾಡದಿದ್ದಕ್ಕೆ ವಿಷಾದಿಸುತ್ತೀರಿ. ಆದ್ದರಿಂದ, ಒಳ್ಳೆಯ ಅವಕಾಶಗಳನ್ನು ಎಂದಿಗೂ ಕಳೆದುಕೊಳ್ಳಬೇಡಿ.
- 'ಇದು ನನ್ನ ಜೀವನ' ಎಂದು ನೀವು ನಿರ್ಧರಿಸಿದ್ದರಿಂದ ಹಿಂದೆ ಸರಿಯಬೇಡಿ. ಅದು ಏನೇ ಇರಲಿ, ಅದು ಕೆಲಸ, ವೃತ್ತಿ, ವ್ಯವಹಾರವೇ ಆಗಿರಲಿ, ಅದು ನಿಮ್ಮ ಪ್ರಜ್ಞೆಯ ಭಾಗವಾಗಿರಬೇಕು.
- ಹಿಂದಿನ ತಪ್ಪುಗಳಿಂದ ಕಲಿಯಿರಿ ಮತ್ತು ಸರಿಯಾಗಿ ಏನು ಮಾಡಬೇಕೆಂದು ತಿಳಿಯಿರಿ. ಇಲ್ಲದಿದ್ದರೆ, ಒಂದೇ ವಿಷಯಗಳ ಬಗ್ಗೆ ಯೋಚಿಸಬೇಡಿ. ಉತ್ತಮ ಭವಿಷ್ಯವನ್ನು ಸೃಷ್ಟಿಸುವುದು ಒಂದೇ ಗುರಿಯಾಗಿರಲಿ.
- ಇತರರು ಏನು ಹೇಳುತ್ತಾರೆಂದು ಗಮನಿಸಬೇಡಿ. ನಿಮ್ಮ ಸರಿ ತಪ್ಪುಗಳ ಬಗ್ಗೆ ನೀವೇ ಉತ್ತಮ ತೀರ್ಪುಗಾರರು. ನೀವು ಏನು ಮಾಡಿದ್ದೀರಿ ಮತ್ತು ನೀವು ಏನು ಮಾಡಬಹುದಿತ್ತು ಎಂಬುದನ್ನು ಪ್ರಾಮಾಣಿಕವಾಗಿ ನೋಡಿ. ನೀವು ಎಲ್ಲರ ಬಗ್ಗೆ ಕಾಳಜಿ ವಹಿಸುವಾಗ, ನಿಮ್ಮ ಬಗ್ಗೆಯೂ ಕಾಳಜಿ ವಹಿಸಿ. ಸ್ವಲ್ಪ ಸ್ವಾರ್ಥಿಯಾಗಿರುವುದು ಸರಿ. ಹೊಸ ಆರಂಭವು ಉತ್ತಮವಾಗಿರಲು, ನಿಮ್ಮ ಆರೋಗ್ಯ ಮತ್ತು ಮಾನಸಿಕ ಆರೋಗ್ಯವನ್ನು ಆರೋಗ್ಯಕರವಾಗಿಡುವುದು ಮುಖ್ಯ.
- "ನಾನು ವಿಫಲನಾದ ಕಾರಣ ಯಾರೂ ನನ್ನನ್ನು ಇಷ್ಟಪಡುವುದಿಲ್ಲ ಎಂಬಂತೆ ನಿಮ್ಮ ಬಗ್ಗೆ ವಿಷಾದಿಸಬೇಡಿ. ಈ ಜಗತ್ತಿನಲ್ಲಿ ದೇವರನ್ನು ದ್ವೇಷಿಸುವ ಜನರಿದ್ದಾರೆ. ನೀವು ಮೊದಲು ನಿಮ್ಮನ್ನು ಪ್ರೀತಿಸಿದರೆ, ಇತರರು ಸಹ ನಿಮ್ಮನ್ನು ಪ್ರೀತಿಸಲು ಪ್ರಾರಂಭಿಸುತ್ತಾರೆ."
- ಅರ್ಥವಿಲ್ಲದ ಮಾತುಗಳನ್ನಾಡುವ ಜನರೊಂದಿಗೆ ವಾದ ಮಾಡಿ ನಿಮ್ಮ ಮನಸ್ಸಿನ ಶಾಂತಿಯನ್ನು ಕಳೆದುಕೊಳ್ಳಬೇಡಿ. ಅವರು ತಮ್ಮ ಅಭಿಪ್ರಾಯವನ್ನು ಹೇಳಲಿ. ನೀವು ಏನು ಮಾಡಬೇಕೆಂದು ಸ್ಪಷ್ಟವಾಗಿರಿ.
- ನಿಮ್ಮನ್ನು ಬಳಸಿಕೊಳ್ಳಲು ಮತ್ತು ಪ್ರೀತಿಸಲು ಬಯಸುವ ಅನೇಕ ಜನರು ಸುಳ್ಳು ಹೊಗಳಿಕೆಯ ಮಾತುಗಳನ್ನು ಮಾತನಾಡಬಹುದು. ಅದನ್ನೆಲ್ಲ ಸತ್ಯವೆಂದು ನಂಬಬೇಡಿ. ಪ್ರಾಮಾಣಿಕ ಟೀಕೆಗಳನ್ನು ನೀಡುವ ಸ್ನೇಹಿತರ ಅಭಿಪ್ರಾಯಗಳನ್ನು ಆಲಿಸಿ.
- ನೀವು ಯಾವುದಾದರೂ ವಿಷಯದಲ್ಲಿ ನಿಪುಣರಲ್ಲ ಎಂದು ನಿಮಗೆ ಅನ್ನಿಸಿದರೂ ಪರವಾಗಿಲ್ಲ. ಅದನ್ನು ಮಾಡುತ್ತಲೇ ಇರಿ. ಅದರಲ್ಲಿ ನಿಪುಣರಾಗಿ, ಸ್ಥಿರವಾಗಿರುವವರು ಗೆಲ್ಲಬಹುದು.
- ನೀವು ಯಾವುದೇ ಸಮಸ್ಯೆಗಳು ಅಥವಾ ಹಿನ್ನಡೆಗಳನ್ನು ಎದುರಿಸಿದರೂ, ದುಃಖದಲ್ಲಿ ಮುಳುಗಬೇಡಿ. ಅವುಗಳಿಂದ ಚೇತರಿಸಿಕೊಳ್ಳಲು ಒಂದು ಮಾರ್ಗವನ್ನು ಕಂಡುಕೊಳ್ಳಿ. ಅದು ನಿಮ್ಮನ್ನು ಹೆಮ್ಮೆಪಡುವಂತೆ ಮಾಡುತ್ತದೆ.
- ಯಾವುದೇ ಪರಿಸ್ಥಿತಿಯಲ್ಲೂ ಇತರರಿಗೆ ಸಹಾಯ ಮಾಡುವ ಅವಕಾಶಗಳನ್ನು ಎಂದಿಗೂ ಕಳೆದುಕೊಳ್ಳಬೇಡಿ. ನಿಮಗೂ ಇದೇ ರೀತಿಯ ಅದೃಶ್ಯ ಸಹಾಯ ಸಿಗುತ್ತದೆ. ●

ತೃಪ್ತಿಯಿಂದ ಆರಂಭಿಸಿರಿ!

ಅನೇಕ ಜನರು ತಮ್ಮ ಇಡೀ ಜೀವನದಲ್ಲಿ ಯೋಚಿಸಿ ಯೋಚಿಸಿ ಮಿತವಾಗಿ ಖರ್ಚು ಮಾಡುತ್ತಾರೆ. ಹಲವು ಬಾರಿ ಖರ್ಚು ಮಾಡಲು ಹಣವಿಲ್ಲದೆ ಕಷ್ಟ ಪಡುತ್ತಾರೆ. ಆದರೆ ಅವರು ಹೀಗೆ ಕಷ್ಟಪಟ್ಟು ಉಳಿಸಿಟ್ಟ ಹಣವು ಮುಂದೆಂದೋ ಒಂದು ದಿನ ಬೇರೆ ಯಾರಿಗೋ ಉಪಯೋಗವಾಗುತ್ತದೆ. ಆರಾಮವಾಗಿ ಬದುಕುವುದು ಎಷ್ಟು ಮುಖ್ಯವೋ, ದೀರ್ಘ ಮತ್ತು ಆರೋಗ್ಯಕರ ಜೀವನವನ್ನು ನಡೆಸುವುದು ಸಹ ಅಷ್ಟೇ ಮುಖ್ಯ. ಅದಕ್ಕಾಗಿ, ನಾವು ಜೀವನವನ್ನು ಸಂಪೂರ್ಣವಾಗಿ ಮತ್ತು ಸಂತೃಪ್ತಿಯಿಂದ ಬದುಕಲು ಪ್ರಾರಂಭಿಸಬೇಕು.

ಸ್ಮಾರ್ಟ್‌ಫೋನ್ ಖರೀದಿಸುವಾಗ, ಅನೇಕ ಜನರು ಅದರಲ್ಲಿರುವ ಮುಕ್ಕಾಲು ಭಾಗದಷ್ಟು ಆಧುನಿಕ ವೈಶಿಷ್ಟ್ಯಗಳನ್ನು ಎಂದಿಗೂ ಬಳಸುವುದಿಲ್ಲ. ಅವರು ಹೆಚ್ಚಾಗಿ ಮಾತನಾಡಲು ಮತ್ತು ಸಂದೇಶಗಳನ್ನು ಕಳುಹಿಸಲು ಮಾತ್ರ ಫೋನನ್ನು ಬಳಸುತ್ತಾರೆ. ಒಂದು ಹೊಸ ಬಗೆಯ ಕಾರನ್ನು ಖರೀದಿಸಿದರೆ, ಅನೇಕ ಜನರು ಅದರಲ್ಲಿರುವ ಸೌಲಭ್ಯಗಳಲ್ಲಿ ಮುಕ್ಕಾಲು ಭಾಗವನ್ನು ಬಳಸುವುದಿಲ್ಲ. ಒಂದು ದೊಡ್ಡ ಬಂಗಲೆ ಖರೀದಿಸಿದರೂ ಕೂಡ, ಅದರ ಹೆಚ್ಚಿನ ಭಾಗವನ್ನು ತುಂಬಾ ಜನರು ಉಪಯೋಗಿಸುವುದೇ ಇಲ್ಲ. ಒಂದು ಟಿವಿಯಲ್ಲಿ ನೂರಾರು ಚಾನೆಲ್‌ಗಳು ಬರುತ್ತವೆ. ನಾವು ಅವುಗಳಲ್ಲಿ ಹೆಚ್ಚಿನದನ್ನು ನೋಡುವುದೇ ಇಲ್ಲ. ಆದರೆ ನಾವು ಜೀವನವನ್ನು ಈ ರೀತಿ ಚಾಯ್ಸ್‌ನಲ್ಲಿ ಬಿಡಲು ಸಾಧ್ಯವಿಲ್ಲ.



ನೀವು ನಿಮ್ಮ ಜೀವನ ಸಂಪನ್ಮೂಲಗಳನ್ನು ನೂರು ಪ್ರತಿಶತ ಬಳಸಿಕೊಳ್ಳಬೇಕು. ಅದಕ್ಕಾಗಿ ಆರೋಗ್ಯಕರ ಜೀವನ ನಡೆಸುವುದು ಅವಶ್ಯಕ. ಸಮತೋಲಿತ ಆಹಾರವನ್ನು ಸೇವಿಸಿ. ಪ್ರತಿದಿನ ಕನಿಷ್ಠ ಏಳು ಗಂಟೆಗಳ ಕಾಲ ನಿದ್ರೆ ಮಾಡಿ. ನೀವು ಎಷ್ಟೇ ಕಾರ್ಯನಿರತರಾಗಿದ್ದರೂ, ವ್ಯಾಯಾಮಕ್ಕೆ ಸಮಯ ಮೀಸಲಿಡಿ. ನಿಮ್ಮ ಮನಸ್ಸನ್ನು ಉತ್ಕೃಷ್ಟಗೊಳಿಸಲು ಅಭ್ಯಾಸ ಮಾಡಿ. ನೀವು ಆರೋಗ್ಯವಾಗಿದ್ದರೂ ಸಹ, ನಿಯಮಿತವಾಗಿ ವೈದ್ಯಕೀಯ ತಪಾಸಣೆಗಳನ್ನು ಮಾಡಿ.

ಅತ್ಯಂತ ಕೆಟ್ಟ ಸಮಸ್ಯೆಗಳನ್ನು ಎದುರಿಸಿದಾಗಲೂ, ಅವುಗಳನ್ನು ದಾಟಿ ಮುಂದೆ ಸಾಗಲು ಕಲಿಯಿರಿ. ನೀವು ಸರಿಯಾಗಿದ್ದರೂ ಮತ್ತು ನಿಮ್ಮ ಎದುರಾಳಿಯ ವಾದಗಳು ತಪ್ಪಾಗಿದ್ದರೂ ಸಹ, ಶಾಂತಿಯುತವಾಗಿ ನಡೆಯಲು ಕಲಿಯಿರಿ. ನೀವು ಬಲಶಾಲಿ, ಶಕ್ತಿಶಾಲಿ ಮತ್ತು ಉನ್ನತ ಸ್ಥಾನಮಾನ ಹೊಂದಿರುವಿರಿ, ಆದರೆ ವಿನಮ್ರವಾಗಿ ವರ್ತಿಸಿ. ನಿಮ್ಮ ಬಗ್ಗೆ ಕಾಳಜಿ ವಹಿಸುವ ಜನರಿಗಾಗಿ ಸಮಯ ಮೀಸಲಿಡಿ.

ನಿಮ್ಮ ಶಕ್ತಿ ಮೀರಿದ ಕೆಲಸಗಳನ್ನು ಮಾಡಲು ಪ್ರಚೋದಿಸಬೇಡಿ. ಅನಗತ್ಯ ಮಾತುಕತೆಗೆ ನಿಮ್ಮ ಸಮಯ ಮತ್ತು ಶಕ್ತಿಯನ್ನು ವ್ಯರ್ಥ ಮಾಡಬೇಡಿ. ನೀವು ಎಚ್ಚರವಾಗಿರುವಾಗ ನಿಮ್ಮ ಭವಿಷ್ಯದ ಬಗ್ಗೆ ಕನಸು ಕಾಣಿರಿ. ಹಿಂದಿನ ತಪ್ಪುಗಳನ್ನು ಮರೆತು ಬಿಡಿ. ಅವುಗಳನ್ನು ನೆನಪಿಸಿಕೊಳ್ಳುವುದು ನಿಮ್ಮ ಪ್ರಸ್ತುತ ಶಾಂತಿ ಮತ್ತು ಸಂತೋಷವನ್ನು ಕಸಿದುಕೊಳ್ಳುತ್ತದೆ.

ಪ್ರತಿದಿನ ಇತರರಿಗೆ ಏನಾದರೂ ಒಳ್ಳೆಯದನ್ನು ನೀಡಿ. ಪ್ರತಿಯೊಂದು ವಾದವನ್ನು ಗೆಲ್ಲಲು ಪ್ರಯತ್ನಿಸಬೇಡಿ. ನೀವು ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರೂ ಸಹ, ಅವುಗಳನ್ನು ಸ್ವೀಕರಿಸಲು ಕಲಿಯಿರಿ. ಆದರೆ ನೀವು ತೆಗೆದುಕೊಳ್ಳುವ ಕ್ರಮಗಳು ಸರಿಯಾಗಿರಲಿ.

ನಿಮ್ಮ ಪ್ರಸ್ತುತ ಪರಿಸ್ಥಿತಿ ಉತ್ತಮವಾಗಿರಲಿ ಅಥವಾ ಕೆಟ್ಟದಾಗಿರಲಿ ಖಂಡಿತ ಮುಂದೊಂದು ದಿನ ಅದು ಬದಲಾಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಿ. ಬೆಳಿಗ್ಗೆ ನಿಮಗೆ ದಣಿವೆನಿಸಿದರೂ ಅಥವಾ ಗೊಂದಲವಾಗಿದ್ದರೂ ಸಹ, ತಕ್ಷಣ ಸಿದ್ಧರಾಗಿ ಮತ್ತು ಕೆಲಸದಲ್ಲಿ ನಿರತರಾಗಿ. ಇದು ನಿಮ್ಮ ಜೀವನದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ.

ನ್ಯೂಟನ್ ಒಬ್ಬ ವಿಜ್ಞಾನಿ. ಅವರು ತಮ್ಮ ಸಂಶೋಧನೆಗಳಿಂದ ವಿಶ್ವ ಖ್ಯಾತಿಯನ್ನು ಗಳಿಸಿದರು. ಅವರ 'ಚಲನೆಯ ಮೂರು ನಿಯಮ'ಗಳನ್ನು ಈಗಲೂ ಶಾಲೆಗಳಲ್ಲಿ ಕಲಿಸಲಾಗುತ್ತದೆ ಮತ್ತು ಅನೇಕ ವೈಜ್ಞಾನಿಕ ಪ್ರಯತ್ನಗಳಿಗೆ ಇದು ಆಧಾರವಾಗಿದೆ. "ನಿಮ್ಮ ಜ್ಞಾನದಿಂದ ಜಗತ್ತು ಆಶ್ಚರ್ಯಚಕಿತವಾಗಿದೆ. ಇಂತಹ ನಿಮ್ಮನ್ನೇ ಬೆರಗುಗೊಳಿಸಿದ ವ್ಯಕ್ತಿ ಯಾರಾದರೂ ಇದ್ದಾರೆಯೇ?" ಎಂದು ಅವರನ್ನು ಒಮ್ಮೆ ಕೇಳಲಾಯಿತು. ಅವರು ಇತರ ಯಾರಾದರೂ ಪ್ರಸಿದ್ಧ ವ್ಯಕ್ತಿಗಳ ಹೆಸರನ್ನು ಹೆಸರಿಸಬೇಕೆಂದು ಪ್ರಶ್ನೆ ಕೇಳಿದವರು ನಿರೀಕ್ಷಿಸಿದ್ದರು. ಆದರೆ ನ್ಯೂಟನ್ ಹೇಳಿದರು: "ನನ್ನನ್ನು ಬೆರಗುಗೊಳಿಸಿದ ಏಕೈಕ ವ್ಯಕ್ತಿ ನನಗಾಗಿ ಕೆಲಸ ಮಾಡುವ ಹಳೆಯ ಸೇವಕ." ಕೇಳಿದವರಿಗೆ ಆಶ್ಚರ್ಯವಾಯಿತು. ನ್ಯೂಟನ್ ವಿವರಿಸಿದರು:

"ಒಂದು ಚಳಿಯ ದಿನ ನಾನು ಬೆಂಕಿಯ ಬಳಿ ಕುಳಿತು ಬೆಚ್ಚಗಾಗುತ್ತಿದ್ದೆ. ಇದ್ದಕ್ಕಿದ್ದಂತೆ ನನಗೆ ಬೆವರು ಬರುತ್ತಿದೆ ಎಂದು ಅನಿಸಿತು. ನಾನು ತಕ್ಷಣ ಸೇವಕನನ್ನು ಕರೆದು, 'ಸ್ವಲ್ಪ ಶಾಖ ಕಡಿಮೆ ಮಾಡು' ಎಂದು ಹೇಳಿದೆ. ಅವನು ನಕ್ಕು ಹೇಳಿದ: 'ಬೆವರು ಬರುತ್ತಿರುವಾಗ ಶಾಖ ಕಡಿಮೆ ಮಾಡುವುದು ಮತ್ತು ತಣ್ಣಗಾಗಿರುವಾಗ ಅದನ್ನು ಹೆಚ್ಚು ಮಾಡುತ್ತಲೇ ಇರುವುದು ಸರಿಯಾದ ಪರಿಹಾರವಲ್ಲ. ನೀವು ಬೆವರುತ್ತಿದ್ದೀರಾ? ತಕ್ಷಣ ಬೆಂಕಿಯಿಂದ ದೂರ ಸರಿಯಿರಿ. ಸಮಸ್ಯೆ ಬಗೆಹರಿಯುತ್ತದೆ. ನಿಮಗೆ ಯಾರ ಸಹಾಯವೂ ಬೇಕಾಗಿಲ್ಲ.'

ನಾನು ಕಂಡು ಹಿಡಿದ ಮೂರು ಚಲನೆಯ ನಿಯಮಗಳಿಗಿಂತ ಇದು ಹೆಚ್ಚು ಅಗತ್ಯವಾದ ಜೀವನ ನಿಯಮ ಎಂದು ನಾನು ಹೇಳುತ್ತೇನೆ. ಜೀವನದಲ್ಲಿ ನಿಮಗೆ ಯಾವುದಾದರೂ ಬಿಕ್ಕಟ್ಟು ಎದುರಾಗುತ್ತದೆಯೇ? ಅದಕ್ಕೆ ಯಾವುದು ಕಾರಣ ಎಂದು ಗುರುತಿಸಿ, ಅದಕ್ಕೆ ಸೂಕ್ತ ಪರಿಹಾರವನ್ನು ಕಂಡು ಕೊಂಡರೆ ಆ ಸಮಸ್ಯೆಯಿಂದ ಹೊರ ಬಂದು ಬಿಡಬಹುದು. ನಮಗೆ ಬೇರೆ ಯಾರ ಸಹಾಯದ ಅಗತ್ಯವೂ ಇರುವುದಿಲ್ಲ" ಎಂದು ನ್ಯೂಟನ್ ಉತ್ತರಿಸಿದರು.

ಅನೇಕ ಜನರು ತಮ್ಮ ಜೀವನದಲ್ಲಿ ಬಿಕ್ಕಟ್ಟುಗಳಿಂದ ಹೊರಬಂದು ಹೊಸದಾಗಿ ಇನ್ನೇನನ್ನೋ ಪ್ರಾರಂಭಿಸಬೇಕಾದ ಹಂತಕ್ಕೆ ಬರುತ್ತಾರೆ. ಒಂದು ಕೆಲಸವನ್ನು ಬಿಟ್ಟು ಇನ್ನೊಂದು ಕೆಲಸಕ್ಕೆ ಹೋಗುವುದು, ನಷ್ಟ ಅನುಭವಿಸುತ್ತಿರುವ ವ್ಯವಹಾರವನ್ನು ಬಿಟ್ಟು ಹೊಸದನ್ನು ಪ್ರಾರಂಭಿಸುವುದು ಅಥವಾ ಕಹಿಯನ್ನು ಮಾತ್ರ ತಂದಿರುವ ಸಂಬಂಧವನ್ನು ಬಿಟ್ಟು ಹೊಸ ಜೀವನವನ್ನು ಪ್ರಾರಂಭಿಸುವುದು ಯಾವುದೇ ಆಗಿರಲಿ, ನೀವು ಹೊಸ ವ್ಯಕ್ತಿಯಾಗಿ ಹೇಗೆ ವರ್ತಿಸಬಹುದು?

- ಹೊಸದಾಗಿ ಯಾವುದನ್ನೇ ಆಗಲಿ ಪ್ರಾರಂಭಿಸುವುದು ಯಾವಾಗಲೂ ಕಷ್ಟ. ಆರಂಭಿಕ ಹಂತಗಳಲ್ಲಿ ಬಹಳಷ್ಟು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಈ ಬದಲಾವಣೆಯನ್ನು ಸ್ವೀಕರಿಸಿ. 'ನಾನು ಹೇಗಿದ್ದೆ, ಆದರೆ ಈಗ ಹೀಗಾಗಿ ಹೋದೆನಲ್ಲ' ಎಂದು ನಿಮ್ಮನ್ನು ನೀವೇ ದೂಷಿಸಿಕೊಳ್ಳಬೇಡಿ. 'ನಾನು ಏನಾದರೂ ತಪ್ಪು ಮಾಡಿದ್ದೇನೆಯೇ?'

ಎಂದು ಚಿಂತಿಸಬೇಡಿ. ನೀವು ಏನು ಮಾಡಲು ಬಯಸುತ್ತೀರೋ ಅದನ್ನು ಪೂರ್ಣ ಹೃದಯದಿಂದ ಮಾಡಿ. ಆಗ ನೀವು ಆರಂಭಿಕ ಸವಾಲುಗಳನ್ನು ನಿವಾರಿಸಿ ಯಶಸ್ವಿಯಾಗುತ್ತೀರಿ.

• ನೀವು ಇಲ್ಲಿಯವರೆಗೆ ಮಾಡಿದ್ದನ್ನು ಸಂಪೂರ್ಣವಾಗಿ ಬಿಟ್ಟು ಹೊಸದನ್ನು ಮಾಡಬೇಕಾಗಿ ಬರಬಹುದು. 'ನಮಗೆ ಗೊತ್ತಿಲ್ಲದ ಯಾವುದೋ ಒಂದು ಹೊಸದನ್ನು ಮಾಡಬೇಕಾಗಿದೆಯಲ್ಲಾ' ಎಂದು ಆತಂಕಗೊಂಡು ಸುಮ್ಮನೆ ಕೂರುವ ಬದಲು ಧೈರ್ಯವಾಗಿ ಆತ್ಮವಿಶ್ವಾಸದಿಂದ ಅದನ್ನು ಆರಂಭಿಸಿ. 'ನಾನು ಮೊದಲು ಎಷ್ಟು ಆರಾಮವಾಗಿದೆ' ಎಂದು ಹಳೆಯ ವಿಷಯಗಳ ಬಗ್ಗೆ ಯೋಚಿಸುತ್ತಾ ನೀವು ಚಿಂತೆಯೊಳಗೆ ಸಿಲುಕಿಕೊಳ್ಳಬಾರದು. ಸರಿ ಅಥವಾ ತಪ್ಪು ಯಾವುದೇ ಆಗಿರಲಿ, ಸ್ವಚ್ಛವಾಗಿ ಒರೆಸಿದ ಕಪ್ಪು ಹಲಗೆಯಂತೆ ಹಳೆಯದನ್ನು ಮರೆತು ಮತ್ತೆ ಹೊಸ ದಿಕ್ಕಿನಲ್ಲಿ ಹೆಜ್ಜೆ ಹಾಕಬೇಕು.

• ನೀವು ಹೊಸ ಆರಂಭವನ್ನು ಮಾಡುವಾಗ, ನೀವು ಮೊದಲು ಇದ್ದ ವ್ಯಕ್ತಿಯಾಗಿರುವುದಿಲ್ಲ ಎಂದು ಒಪ್ಪಿಕೊಳ್ಳಿ. ಆಗ ನೀವು ಹೊಂದಿದ್ದ ಗುರಿಗಳು ಮತ್ತು ಈಗ ಇರುವ ಗುರಿಗಳು ಎರಡೂ ಒಂದೇ ಆಗಿರುವುದಿಲ್ಲ. ಆಗ ನಿಮಗೆ ಇಷ್ಟವಾಗಿದ್ದ ವಿಷಯಗಳು ಈಗ ನಿಮಗೆ ಇಷ್ಟವಾಗದಿರಬಹುದು. ಆಗ ನಿಮಗೆ ಮುಖ್ಯವಾಗಿದ್ದ ಜನರು ಈಗ ನಿಮಗೆ ಮುಖ್ಯವಾಗದಿರಬಹುದು.

• ಹೊಸ ಸ್ಥಳ, ಹೊಸ ಜನರು, ಹೊಸ ಚಟುವಟಿಕೆಗಳು, ಹೊಸ ಆರಂಭ ಇವುಗಳು ಯಾರನ್ನಾದರೂ ಸರಿ, ತಡವರಿಸುವಂತೆ ಮಾಡುತ್ತವೆ. ಮನಸ್ಸು ಹಳೆಯ ಸಂತೋಷಗಳಿಗಾಗಿ ಹಾತೊರೆಯುತ್ತದೆ. ಕಳೆದು ಹೋದ ಎಲ್ಲವೂ ಮನಸ್ಸಿಗೆ ನಿಧಿಯಂತೆ ತೋರುತ್ತದೆ. ಹಳೆಯ ಯುದ್ಧಭೂಮಿಯಲ್ಲಿ ನಿಂತು ಹೊಸ ವಿಜಯಗಳನ್ನು ಗೆಲ್ಲಲು ಸಾಧ್ಯವಿಲ್ಲ. ಯುದ್ಧದಲ್ಲಿ ನಷ್ಟಗಳು ಸಹಜ. ಹಳೆಯ ಯುದ್ಧಭೂಮಿಯ ನಷ್ಟಗಳನ್ನು ಮರೆತು ಬಿಡಿ.

• ಹೊಸ ಆರಂಭ ಎಂದರೆ ಹೊಸ ಜವಾಬ್ದಾರಿಗಳನ್ನು ತೆಗೆದುಕೊಳ್ಳುವುದು. ನೀವು ಹೊಸ ಕೆಲಸಗಳನ್ನು ಮಾಡಲು ಪ್ರಾರಂಭಿಸಿದಾಗ, ಅವುಗಳನ್ನು ಚೆನ್ನಾಗಿ ಮಾಡುವ ಜವಾಬ್ದಾರಿಯನ್ನು ತೆಗೆದುಕೊಳ್ಳಿ. ಆ ಹೊಸ ಜವಾಬ್ದಾರಿಯನ್ನು ನಿಮ್ಮ ಗುರುತನ್ನಾಗಿ ಮಾಡಿಕೊಳ್ಳಿ.

• ನಿಮ್ಮ ಹೊಸ ಪ್ರಯತ್ನದಲ್ಲಿ ನಿಮ್ಮ ಅನುಭವಗಳು ಮತ್ತು ನೀವು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಸ್ನೇಹಿತರೊಂದಿಗೆ ಮಾತನಾಡಿ. ಇದರ ಬಗ್ಗೆ ಯಾರೊಂದಿಗಾದರೂ ಮಾತನಾಡುವುದರಿಂದ ನಿಮ್ಮ ಒತ್ತಡ ಕಡಿಮೆಯಾಗುತ್ತದೆ. ಅವರ ಆಲೋಚನೆಗಳು ಮತ್ತು ಮಾರ್ಗದರ್ಶನವು ನಿಮಗೆ ಹೊಸ ಪರಿಹಾರಗಳನ್ನು ನೀಡಬಹುದು.

• ಹಳೆಯ ಕೆಲಸದಲ್ಲಿ, ಹಳೆಯ ವೃತ್ತಿಯಲ್ಲಿ, ಹಳೆಯ ಜೀವನದಲ್ಲಿ ಬಡ್ತಿ ಸಿಗದಿದ್ದಕ್ಕಾಗಿ ನಿಮ್ಮ ಕೆಲವು ಅಭ್ಯಾಸಗಳು ಸಹ ಇದಕ್ಕೆ ಕಾರಣವಾಗಿರಬಹುದು. ಅವುಗಳನ್ನು ಬದಲಾಯಿಸಲು ಇದು ಒಳ್ಳೆಯ ಅವಕಾಶ. ನಿಮ್ಮ ಪ್ರಗತಿಗೆ ಅಡ್ಡಿಯಾಗುತ್ತಿರುವುದನ್ನು ಗಮನಿಸಿ. ಅವುಗಳನ್ನು ಬಿಟ್ಟುಬಿಡಿ. ಹೊಸ ಚಟುವಟಿಕೆಗೆ ಅನುಗುಣವಾಗಿ ನಿಮ್ಮ ಅಭ್ಯಾಸಗಳನ್ನು ಬದಲಾಯಿಸಿ.

• ನಮ್ಮ ಸ್ವಂತ ಉಪಕ್ರಮದಿಂದ ವರ್ತಿಸುವುದು ಒಂದು ಬಗೆ ಮತ್ತು ಏನಾದರೂ ಸಂಭವಿಸಿದ ನಂತರ ಅದರ ಪರಿಣಾಮಗಳಿಗೆ ಅನುಗುಣವಾಗಿ ವರ್ತಿಸುವುದು ಇನ್ನೊಂದು ಬಗೆ. ನಾವು ಈ ಎರಡನೇ ರೀತಿಯಲ್ಲಿ ವರ್ತಿಸಿದರೆ, ನಾವು ಹೊಸದನ್ನು ಪ್ರಾರಂಭಿಸಲು ಸಾಧ್ಯವಿಲ್ಲ. ಬೇರೆಯವರು ಏನು ಮಾಡುತ್ತಿದ್ದಾರೆಂದು ನಾವು ಪ್ರತಿಕ್ರಿಯಿಸುತ್ತಲೇ ಇರಬೇಕು. ಎಲ್ಲಾ ಬಿಕ್ಕಟ್ಟುಗಳನ್ನು ನಿವಾರಿಸಿ ಮತ್ತು ಹೊಸದನ್ನು ಮಾಡಿ.

• ನಾವು ಯಾವುದರ ಮೇಲೆ ಮನಸ್ಸನ್ನು ಕೇಂದ್ರೀಕರಿಸುತ್ತೇವೋ, ಅದೇ ನಮ್ಮ ಮನಸ್ಸನ್ನು ಆಕ್ರಮಿಸುತ್ತದೆ. ನಾವು ಸಮಸ್ಯೆಗಳ ಮೇಲೆ ಮಾತ್ರ ಕೇಂದ್ರೀಕರಿಸಿದರೆ, ಆ ಸಮಸ್ಯೆಗಳು ನಮ್ಮ ಮನಸ್ಸಿನಲ್ಲಿ ಬೆಳೆಯುತ್ತಲೇ ಇರುತ್ತವೆ. ಸಮಸ್ಯೆಗಳನ್ನು ಮರೆತು ಬೆಳವಣಿಗೆಯ ಮೇಲೆ ಮಾತ್ರ ಗಮನ ಹರಿಸಿ. ಎಲ್ಲಾ ಬಿಕ್ಕಟ್ಟುಗಳನ್ನು ಪರಿಹರಿಸುವ ಮಾರ್ಗಗಳು ಕಾಣಿಸಿಕೊಳ್ಳಲು ಪ್ರಾರಂಭಿಸುತ್ತವೆ.

• ನಿಮ್ಮ ಕ್ರಿಯೆಗಳು ನೀವು ಏನು ಯೋಚಿಸುತ್ತೀರಿ ಮತ್ತು ನಿಮಗೆ ನೀವೇ ಏನು ಹೇಳಿಕೊಳ್ಳುತ್ತೀರಿ ಎಂಬುದರ ಪ್ರತಿಬಿಂಬವಾಗಿರುತ್ತದೆ. "ನಾನು ಇದನ್ನು ಮಾಡಬಹುದೇ?" ಎಂಬ ಸಂದೇಹದ ಧ್ವನಿ ನಿಮ್ಮ ಕಿವಿಯಲ್ಲಿ ರಿಂಗಣಿಸಲು ಬಿಡಬೇಡಿ. "ನಾನು ಇದನ್ನು ಮಾಡಬಲ್ಲೆ" ಎಂಬ ಆಲೋಚನೆಯೊಂದಿಗೆ ನೀವು ಏನನ್ನಾದರೂ ಪ್ರಾರಂಭಿಸಿದರೆ, ನಿಮ್ಮ ಹೊಸ ಪ್ರಯಾಣದಲ್ಲಿ ನೀವು ಯಶಸ್ಸಿನ ಮೇಲೆ ಯಶಸ್ಸನ್ನು ಕಾಣುತ್ತೀರಿ.

ಮಗುವಿನಂತೆ ಆರಂಭಿಸಬಹುದು!

ಐನ್‌ಸ್ಟೈನ್‌ಗೆ ಬಾಲ್ಯದಿಂದಲೂ ಮನಸ್ಸಿನಲ್ಲಿ ಹಲವು ವೈಜ್ಞಾನಿಕ ಪ್ರಶ್ನೆಗಳಿದ್ದವು. ಲಿಯೊನಾರ್ಡೊ ಡಾ ವಿನ್ಸಿ ಅವರು ತಮ್ಮ ಬಾಲ್ಯದ ಕಲ್ಪನೆಗಳಿಂದಲೇ ಅದ್ಭುತವಾದ ವರ್ಣಚಿತ್ರಗಳನ್ನು ರಚಿಸಿದರು. ಇವು ನಂತರ ಅನೇಕ ವೈಜ್ಞಾನಿಕ ಆವಿಷ್ಕಾರಗಳಿಗೆ ಆಧಾರವಾದವು. ಮೊಜಾರ್ಟ್ ಅವರ ಸಂಗೀತ ಪ್ರತಿಭೆಯೂ ಚಿಕ್ಕ ವಯಸ್ಸಿನಲ್ಲಿಯೇ ಹೊರಹೊಮ್ಮಿತು. ಸ್ಟೀವ್ ಜಾಬ್ಸ್ ಅವರು ಬಾಲ್ಯದಲ್ಲಿ ವಿವಿಧ ವಿನ್ಯಾಸಗಳಲ್ಲಿ ಅಕ್ಷರಗಳನ್ನು ಬರೆಯುತ್ತಿದ್ದರು. ಆ ಕಲ್ಪನೆಯೇ ಇಂದು ಕಂಪ್ಯೂಟರ್‌ಗಳಲ್ಲಿ ಬಳಸಲಾಗುವ ಅನೇಕ ಫಾಂಟ್‌ಗಳಿಗೆ ಕಾರಣವಾಗಿದೆ.

ಇದೇ ರೀತಿಯ ಹಲವು ಉದಾಹರಣೆಗಳಿವೆ. ಅನೇಕ ಜನರು ಬಾಲ್ಯದಲ್ಲಿಯೇ ತಮ್ಮ ಆಸಕ್ತಿಗಳು ಮತ್ತು ಪ್ರತಿಭೆಯನ್ನು ಪ್ರಕಟಿಸುತ್ತಾರೆ ಮತ್ತು ಅವರು ತಮ್ಮ ಜೀವನವನ್ನು ಯಾವ ಕ್ಷೇತ್ರದಲ್ಲಿ ಪ್ರಾರಂಭಿಸಲು ಬಯಸುತ್ತಾರೆ ಎಂಬುದನ್ನು ಕಂಡುಕೊಳ್ಳುತ್ತಾರೆ. ನಂತರದ ಜೀವನದಲ್ಲಿ ಅದನ್ನು ಕಂಡುಕೊಳ್ಳುವ ಕೆಲವರು ಸಹ ತಮ್ಮ ಮಗುವಿನಂತಹ ಮನಸ್ಸಿನ ಮೂಲಕ ಅದನ್ನು ಕಂಡುಕೊಳ್ಳುತ್ತಾರೆ.

ನಿಮ್ಮೊಳಗಿನ ಮಗುತನವನ್ನು ನೀವು ಅನುಸರಿಸಿದರೆ, ನಿಮಗಾಗಿ ಕಾಯುತ್ತಿರುವ ಜೀವನದ ನಿಧಿಯನ್ನು ನೀವು ತಲುಪಬಹುದು. ನೀವು ಅದನ್ನು ಮಗುವಿನ ಹೃದಯದಿಂದ ಮಾಡಬೇಕು. ವಯಸ್ಕರು ಮಾಡಲಾಗದ ಅನೇಕ ಕೆಲಸಗಳನ್ನು ಮಕ್ಕಳು ಮಾಡಬಹುದು. ವಿಜ್ಞಾನವು ಮಕ್ಕಳು ದಿನಕ್ಕೆ ಸುಮಾರು 300 ಬಾರಿ ನಗುತ್ತಾರೆ ಎಂದು ಹೇಳುತ್ತದೆ. ವಯಸ್ಕರು 30 ಬಾರಿ ನಗುವುದೇ ದೊಡ್ಡ ವಿಷಯ. ಕಾರಣವೇನೆಂದರೆ ಕುಟುಂಬ ಮತ್ತು ಕೆಲಸದ ಜವಾಬ್ದಾರಿಗಳ ಒತ್ತಡ, ಚಿಂತೆ, ಭಯ, ಕಿರಿಕಿರಿ ಮತ್ತು ಉದ್ವೇಗದ ಭಾವನೆಗಳಿಂದ ಅವರು ವಿಭಿನ್ನವಾಗಿ ಯೋಚಿಸಲು ಕಷ್ಟವಾಗುತ್ತವೆ.

ಆದರೆ, ವಯಸ್ಕರಲ್ಲಿ ಕೆಲವು ಒಳ್ಳೆಯ ವಿಷಯಗಳಿವೆ. ಅವರು ಬಾಲ್ಯದಲ್ಲಿ ಹೊಂದಿರದ ಅನುಭವ, ಜ್ಞಾನ ಮತ್ತು ಆಲೋಚನೆಯನ್ನು ಈಗ ಹೊಂದಿದ್ದಾರೆ. ಅವರು ಚಟುವಟಿಕೆಯನ್ನು ಮಾಡುವುದರ ಸಾಧಕ–ಬಾಧಕಗಳನ್ನು ವಿಶ್ಲೇಷಿಸಬಹುದು. ನೀವು ಮಗುವಿನ ಉತ್ಸಾಹ ಮತ್ತು ವಯಸ್ಕರ ಅನುಭವ ಮತ್ತು ಪ್ರಬುದ್ಧತೆಯೊಂದಿಗೆ ಚಟುವಟಿಕೆಯನ್ನು ಪ್ರಾರಂಭಿಸಿದರೆ, ಅದರಲ್ಲಿ ಯಶಸ್ವಿಯಾಗುವುದು ಸುಲಭ. ಅದನ್ನು ಮಾಡಲು ಕೆಲವು ಮಾರ್ಗಗಳು ಇಲ್ಲಿವೆ:

- ಪ್ರಶ್ನೆಗಳನ್ನು ಕೇಳಿ. ಮಕ್ಕಳು ಪ್ರಶ್ನೆಗಳನ್ನು ಆಸಕ್ತಿಯಿಂದ ಕೇಳುತ್ತಾರೆ, ದೊಡ್ಡವರು ಕೇಳುವುದಿಲ್ಲ. ಉದಾಹರಣೆಗೆ ನಾವು, ಯಾರ ಮುಂದೆಯಾದರೂ, "ನಾನು ರಾಯಚೂರಿನಲ್ಲಿ ಹುಟ್ಟಿ ಬೆಳೆದೆ. 15 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದೆ" ಎಂದು ಹೇಳಿದರೆ, ದೊಡ್ಡವರು "ಹೌದಾ?" ಎಂದು ಹೇಳಿ ಮುಗಿಸುತ್ತಾರೆ. ಆದರೆ ಮಕ್ಕಳು, "ನೀವು ಏಕೆ ಬೆಂಗಳೂರಿಗೆ ಬಂದಿರಿ?" ಎಂದು ಕುತೂಹಲದಿಂದ ಕೇಳುತ್ತಾರೆ!
- ಪ್ರಶ್ನೆಗಳು ಮಕ್ಕಳ ಕಲಿಕೆ ಮತ್ತು ಕಲ್ಪನೆಯ ಮೂಲ. 'ಒಂದು ದ್ವೀಪದಲ್ಲಿರುವ ಜೀವಿಗಳು ಇನ್ನೊಂದು ದ್ವೀಪದಲ್ಲಿರುವ

ಜೀವಿಗಳಂತೆಯೇ ಗುಣಲಕ್ಷಣಗಳನ್ನು ಏಕೆ ಹೊಂದಿಲ್ಲ?' ಎಂಬ ಕುತೂಹಲದ ಪ್ರಶ್ನೆಯೇ ಚಾರ್ಲ್ಸ್ ಡಾರ್ವಿನ್ ಅಭಿವೃದ್ಧಿಪಡಿಸಿದ ವಿಕಾಸ ಸಿದ್ಧಾಂತದ ಮೂಲವಾಗಿದೆ. ಮೇರಿ ಕ್ಯೂರಿ 'ಯುರೇನಿಯಂ ಏಕೆ ಹೊಳೆಯುತ್ತದೆ?' ಎಂಬ ಪ್ರಶ್ನೆಯಿಂದ ವಿಕಿರಣವನ್ನು ಕಂಡುಹಿಡಿದರು. ಪ್ರಶ್ನೆಗಳು ಹಾದಿಗಳನ್ನು ತೆರೆಯುತ್ತವೆ ಮತ್ತು ಅವಕಾಶಗಳನ್ನು ಸೃಷ್ಟಿಸುತ್ತವೆ.

● ನಿಮ್ಮ ಕುತೂಹಲವನ್ನು ಎಂದಿಗೂ ಕಳೆದುಕೊಳ್ಳಬೇಡಿ. ಗಾಳಿಪಟವನ್ನು ಹಾರಿಸಿ ಅದರ ಕಾರ್ಯಗಳನ್ನು ಗಮನಿಸಿದ ಬೆಂಜಮಿನ್ ಫ್ರಾಂಕ್ಲಿನ್ ಅದರ ಮೂಲಕ ವಿದ್ಯುತ್ ಅನ್ನು ಕಂಡುಹಿಡಿದರು. ಲೋಹದ ಚೆಂಡು ಮತ್ತು ಪಕ್ಷಿಯ ಗರಿ ಎತ್ತರದಿಂದ ಬೀಳುವಾಗ ಭೂಮಿಯನ್ನು ತಲುಪಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂಬುದನ್ನು ಕುತೂಹಲದಿಂದ ಗಮನಿಸಿದ ಗೆಲಿಲಿಯೋ ಗುರುತ್ವಾಕರ್ಷಣೆಯ ಬಲವನ್ನು ಕಂಡುಹಿಡಿದರು. ಕುತೂಹಲವು ಯಾವಾಗಲೂ ಹೊಸ ದಿಕ್ಕುಗಳಲ್ಲಿ ಅವಕಾಶಗಳಿಗೆ ಕಾರಣವಾಗುತ್ತದೆ.

● ಯಾವುದೇ ಸಂದರ್ಭದಲ್ಲೂ ನಿಮ್ಮ ಕನಸುಗಳು ಮತ್ತು ಭರವಸೆಯನ್ನು ಕಳೆದುಕೊಳ್ಳಬೇಡಿ. 'ಇದು ಸಾಧ್ಯವೇ' ಎಂಬ ಸಣ್ಣ ಸಂದೇಹವೂ ಸಹ ನಿಮ್ಮ ಭರವಸೆಯನ್ನು ಕುಗ್ಗಿಸಬಹುದು. ಈ ಹಿಂದೆ ಜಗತ್ತಿಗೆ ಪರಿಚಯವೇ ಇಲ್ಲದ ವಿದ್ಯುತ್, ರೇಡಿಯೋ, ಎಕ್ಸ್-ರೇ ಯಂತ್ರಗಳು ಮತ್ತು ರೈಲು ಎಂಜಿನ್‌ಗಳಂತಹ ವಸ್ತುಗಳನ್ನು ಮೊದಲು ಕಂಡು ಹಿಡಿದ ಜನರು 'ಇದು ಸಾಧ್ಯವೇ' ಎಂದು ಭಾವಿಸಿದ್ದರೆ ಎಂದಿಗೂ ಫಲಪ್ರದವಾಗುತ್ತಿರಲಿಲ್ಲ. ಅವರು ತಮ್ಮ ಕನಸುಗಳನ್ನು ನಂಬಿದ್ದರು. ನಿಮ್ಮ ಕನಸುಗಳನ್ನು ನಂಬಿರಿ.

● ಯಾವ ಸಂದರ್ಭದಲ್ಲೂ ಹಿಂಜರಿಯಬೇಡಿ. ನೀವು ಮಗುವಿಗೆ ಕಾಗದ ಮತ್ತು ಬಣ್ಣದ ಪೆನ್ಸಿಲ್‌ಗಳನ್ನು ನೀಡಿ ಚಿತ್ರ ಬಿಡಿಸಲು ಕೇಳಿದರೆ, ಅದು ಉತ್ಸಾಹದಿಂದ ಚಿತ್ರ ಬಿಡಿಸಲು ಪ್ರಾರಂಭಿಸುತ್ತದೆ. ಮಗುವು ತನಗೆ ಚಿತ್ರ ಬಿಡಿಸಲು ಬರುತ್ತದೆಯೇ, ಅದನ್ನು ತಾನು ಮಾಡಿದ್ದೇನೆಯೇ, ತಾನು ಚೆನ್ನಾಗಿ ಚಿತ್ರ ಬಿಡಿಸುತ್ತೇನೆಯೇ ಅಥವಾ ಯಾರಾದರೂ ತನ್ನನ್ನು ಗೇಲಿ ಮಾಡುತ್ತಾರೆಯೇ ಹೀಗೆ ಯಾವುದರ ಬಗ್ಗೆಯೂ ಯೋಚಿಸುವುದಿಲ್ಲ. ಆದರೆ ವಯಸ್ಕರಿಗೆ ಬಹಳಷ್ಟು ಹಿಂಜರಿಕೆ ಇರುತ್ತದೆ. ತಮಗೆ ಚೆನ್ನಾಗಿ ತಿಳಿದಿರುವ ಕೆಲಸವನ್ನು ಸಹ ಅವರು ಅರೆಮನಸ್ಸಿನಿಂದ ಹಿಂಜರಿಯುತ್ತಲೇ ಮಾಡುತ್ತಾರೆ. ಅದೇ ಅವರ ಯಶಸ್ಸಿನ ಹಾದಿಯಲ್ಲಿ ದೊಡ್ಡ ತಡೆಯಾಗಿ ನಿಲ್ಲುವುದು.

● ಎಲ್ಲದರ ಮೇಲೂ ನಿರೀಕ್ಷೆಗಳನ್ನು ಇಟ್ಟುಕೊಳ್ಳಬೇಡಿ. ಮಕ್ಕಳು ಆಟವಾಡುವಾಗ, ಓದುವಾಗ ಅಥವಾ ಬೇರೆ ಏನನ್ನಾದರೂ ಮಾಡುವಾಗ, ಅದು ನಮಗೆ ಏನು ಪ್ರಯೋಜನವನ್ನು ನೀಡುತ್ತದೆ ಎಂದು ಅವರು ಯೋಚಿಸುವುದಿಲ್ಲ. ಕೆಲವು ಸಂದರ್ಭಗಳಲ್ಲಿ, ವಯಸ್ಕರು ಸಹ ಹಾಗೆಯೇ ಇರಬೇಕು. ನೀವು ನಿಮ್ಮ ಕುಟುಂಬ ಅಥವಾ ಮಕ್ಕಳೊಂದಿಗೆ ಯಾವುದಾದರೂ ಆಟ ಆಡಬಹುದು. ನಿವಾಸಿಗಳ ಸಂಘ ಅಥವಾ ಸಾಮಾಜಿಕ ಸೇವಾ ಸಂಸ್ಥೆಗೆ ಸೇರಬಹುದು ಮತ್ತು ಸೇವೆ ಮಾಡಬಹುದು. ನಿಮ್ಮ ದೈನಂದಿನ ನಿಯಮಿತ ಕೆಲಸವನ್ನು ಮೀರಿ ನೀವು ಇದನ್ನು ಮಾಡಿದಾಗ, ನಿಮ್ಮ ಮನಸ್ಸು ಉಲ್ಲಾಸಭರಿತವಾಗಿರುತ್ತದೆ. ಹೊಸ ಆಲೋಚನೆಗಳು ನಿಮಗೆ ಬರುತ್ತವೆ.

● ಒಳ್ಳೆಯ ಸ್ನೇಹಿತರನ್ನು ಹೊಂದಿರುವುದು ಮುಖ್ಯ. ನೀವು ಸಮಾನ ಮನಸ್ಸಿನ ಸ್ನೇಹಿತರೊಂದಿಗೆ ಸಂಪರ್ಕ ಸಾಧಿಸಿದಾಗ, ಅವರ ಸಹಾಯದಿಂದ ನಮ್ಮ ಕಾರ್ಯಗಳು ಉತ್ತಮವಾಗಿ ಬದಲಾಗುತ್ತವೆ. ಇನ್ಫೋಸಿಸ್, ಆಪಲ್, ಟ್ವಿಟರ್‌ನಂತಹ ದೊಡ್ಡ ಕಂಪನಿಗಳನ್ನು ಇಬ್ಬರು ಅಥವಾ ಮೂವರು ಸ್ನೇಹಿತರು ಪ್ರಾರಂಭಿಸಿದರು. ಒಳ್ಳೆಯ ಸ್ನೇಹಿತರು ನಿಮಗೂ ಅವರಿಗೂ ಒಟ್ಟಾಗಿ ಒಂದು ಮಾರ್ಗವನ್ನು ಸೃಷ್ಟಿಸುತ್ತಾರೆ.

● ಸಾಮಾಜಿಕ ಸಂವಹನ ಮುಖ್ಯ. ಮಕ್ಕಳು ಎಲ್ಲಿಗೆ ಹೋದರೂ ತಮ್ಮ ಗೆಳೆಯರೊಂದಿಗೆ ಬೇಗನೆ ಬಾಂಧವ್ಯ ಬೆಳೆಸಿಕೊಳ್ಳುತ್ತಾರೆ. ಅವರಂತೆಯೇ ನೀವು ಕೂಡ ಎಲ್ಲರೊಂದಿಗೆ ಸಂವಹನ ನಡೆಸಿ. ವಿಶೇಷವಾಗಿ ನಿಮ್ಮ ಕ್ಷೇತ್ರದಲ್ಲಿ ಸಾಕಷ್ಟು ಸಂಪರ್ಕಗಳನ್ನು ಬೆಳೆಸಿಕೊಳ್ಳಿ. ಅದು ಕೆಲಸ, ವೃತ್ತಿ ಅಥವಾ ವ್ಯವಹಾರವಾಗಿರಲಿ, ಇತರರ ಸಹಕಾರವೂ ಮುಖ್ಯವಾಗಿರುತ್ತದೆ. ಅಗತ್ಯವಿದ್ದಾಗ ನಿಮಗೆ ಅವರಿಂದ ಸಹಾಯ ಸಿಗುವಷ್ಟು ಎಲ್ಲರಿಗೂ ಹತ್ತಿರವಾಗಿರಿ. ●

ಓದುಗರ ಪತ್ರಗಳು!



'ಬಿಳುಪು' ಭಾವನೆಗಳು ಪತ್ರಿಕೆಯ ಡಿಸೆಂಬರ್ ಸಂಚಿಕೆ ತುಂಬಾ ಆಕರ್ಷಕವಾಗಿಯೂ, ಆಸಕ್ತಿದಾಯಕವಾಗಿಯೂ ಇತ್ತು. 'ಆಸಕ್ತಿ'ಯನ್ನು ಕಂಡು ಕೊಳ್ಳುವುದು ಹೇಗೆ?', 'ಆಸಕ್ತಿಯೇ ಬೇರೆ, ಸಾಮರ್ಥ್ಯವೇ ಬೇರೆ', 'ಆಸಕ್ತಿಯಿಂದ ದೊರಕುವ ತಿಳಿವಳಿಕೆ' ಇತ್ಯಾದಿ ಎಲ್ಲಾ ಲೇಖನಗಳೂ ತುಂಬಾ ಚೆನ್ನಾಗಿ ಮೂಡಿ ಬಂದಿದ್ದವು. ಅದರಲ್ಲೂ ಮುಖ್ಯವಾಗಿ ರಾಮ್‌ರಾಜ್ ಕಾಟನ್ ಸಂಸ್ಥೆಯ ನಿರ್ವಾಹಕರಾದ ಶ್ರೀ. ಕೆ.ಆರ್. ನಾಗರಾಜನ್ ಅವರು ಬರೆದಿರುವ ಪತ್ರದಲ್ಲಿ, 'ಆಸಕ್ತಿ ಎನ್ನುವುದು ಅದ್ಭುತವಾದ ಮಾಂತ್ರಿಕ ಕೀ. ಅದು ಎಂತಹ ಭದ್ರವಾದ ಬಾಗಿಲನ್ನಾದರೂ ಸರಿ ಸುಲಭವಾಗಿ ತೆಗೆಯಲು ಸಹಾಯ ಮಾಡುತ್ತದೆ' ಎಂಬುದನ್ನು ಸುಂದರವಾಗಿ ಎತ್ತಿ ತೋರಿಸುತ್ತದೆ!

– ಎಂ.ಸಂಪತ್‌ಕುಮಾರ್, ದಾಂಡೇಲಿ, ಕರ್ನಾಟಕ.

'ಆಸಕ್ತಿ' ವಿಶೇಷಾಂಕವು ತುಂಬಾ ಅದ್ಭುತವಾಗಿದೆ. ಪ್ರತಿಯೊಬ್ಬರಿಗೂ ಯಾವುದೋ ಒಂದು ವಿಷಯದಲ್ಲಿ ಆಸಕ್ತಿ ಇರುತ್ತದೆ, ಒಂದು ವಿಷಯದಲ್ಲಿ ಸಾಮರ್ಥ್ಯ ಇರುತ್ತದೆ. ತಮಗೆ ಯಾವುದರಲ್ಲಿ ಆಸಕ್ತಿ ಎಂಬುದನ್ನು ಕಂಡು ಹಿಡಿದು, ಅದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂಬುದನ್ನು ಮನವರಿಕೆ ಮಾಡಿಕೊಡುವ ಸುಂದರವಾದ ಸಂಚಿಕೆ ಇದು!

– ನ.ಷಣ್ಮುಖಪ್ಪ, ತುಮರಿ, ಸಾಗರ ತಾ. ಶಿವಮೊಗ್ಗ.

ಕ್ರಿಕೆಟ್ ಪಟು ದೋನಿಯವರಿಂದ ಹಿಡಿದು, ಗಿಡ ಬೆಳೆಸುವವರೆಗೂ ಹಲವು ಉದಾಹರಣೆಗಳನ್ನು ತಿಳಿಸುವ ಮೂಲಕ, ಆಸಕ್ತಿ ಬೆಳೆಸಿಕೊಳ್ಳಲು ದಾರಿ ತೋರಿಸುವ 'ಬಿಳುಪು' ಪತ್ರಿಕೆಯ ಡಿಸೆಂಬರ್ ಸಂಚಿಕೆ ಶ್ಲಾಘನೀಯವಾಗಿ ಮೂಡಿ ಬಂದಿದೆ!

– ಟಿ.ಸುಂದರಿ, ಹೊಸದುರ್ಗ, ಚಿತ್ರದುರ್ಗ.

ಹೊಸ ಆರಂಭದ



- ಪ್ರತಿಯೊಂದು ಹೊಸ ದಿನವೂ ನಿಮ್ಮ ಜೀವನವೆಂಬ ದಿನಚರಿಯಲ್ಲಿ ಬರೆಯದ ಪುಟ. ಯಶಸ್ಸಿನ ರಹಸ್ಯವೆಂದರೆ ಆ ಪುಟದಲ್ಲಿ ನೀವು ಬರೆಯಬಹುದಾದ ನಿಮ್ಮ ಅತ್ಯುತ್ತಮ ಜೀವನ ಕಥೆಯನ್ನು ಬರೆಯುವುದು!

- ಪ್ರತಿ ಕ್ಷಣವೂ ಒಂದು ಉತ್ತಮ ಆರಂಭವನ್ನು ಮಾಡುವ ಸಮಯವೇ ಆಗಿರುತ್ತದೆ.

- ಜೀವನದಲ್ಲಿ ನೀವು ಏನಾಗಬೇಕೆಂದು ಬಯಸುತ್ತೀರೋ ಅದು ಆಗಲು ಈಗಲೂ ತಡವಾಗಿಲ್ಲ. ನಿಮ್ಮ ಜೀವನದ ಬಗ್ಗೆ ನೀವು ಹೆಮ್ಮೆ ಪಡಬೇಕು. ಅದನ್ನು ಬದಲಾಯಿಸಲು ನಿಮಗೆ ಶಕ್ತಿ ಬೇಕು.

- ನಿಮ್ಮ ನೆನಪುಗಳನ್ನು ಯಾರೂ ನಿಮ್ಮಿಂದ ಕಸಿದುಕೊಳ್ಳಲು ಸಾಧ್ಯವಿಲ್ಲ. ಪ್ರತಿ ದಿನವೂ ಹೊಸ ಆರಂಭ! ಆ ದಿನಗಳಲ್ಲಿ ಒಳ್ಳೆಯ ನೆನಪುಗಳನ್ನು ಮಾಡಿಕೊಳ್ಳಿ.

- ಆತ್ಮವಿಶ್ವಾಸದಿಂದ ಮೊದಲ ಹೆಜ್ಜೆ ಇರಿಸಿ. ಇಡೀ ಮಾರ್ಗವು ನಿಮ್ಮ ಕಣ್ಣಿಗೆ ಗೋಚರಿಸದಿರಬಹುದು. ಆದರೆ ಮೊದಲ ಹೆಜ್ಜೆ ಇಡದೆ ಹಾದಿಯನ್ನು ದಾಟುವುದು ಅಸಾಧ್ಯ.

- ನಾವು ಸಮಯಕ್ಕೆ ಹಿಂತಿರುಗಿ ಜೀವನವನ್ನು ಮತ್ತೆ ಪ್ರಾರಂಭಿಸಲು ಸಾಧ್ಯವಿಲ್ಲ. ಆದರೆ ನಾವು ಈಗಲೇ ಉತ್ತಮ ಜೀವನವನ್ನು ಪ್ರಾರಂಭಿಸಬಹುದು, ಈಗಲೇ ಪ್ರಾರಂಭಿಸಿ.

- ಯಶಸ್ಸಿನ ಹಾದಿಯಲ್ಲಿ ಅನೇಕ ಜನರು ಮಾಡುವ ಎರಡು ತಪ್ಪುಗಳಿವೆ. ಒಂದು ಪ್ರಾರಂಭಿಸದಿರುವುದು. ಇನ್ನೊಂದು ಪ್ರಯಾಣವನ್ನು ಪೂರ್ಣಗೊಳಿಸದಿರುವುದು.

- ಸೋಲಿಗೆ ನೋವಿನ ಅಂತ್ಯವಿದೆಯೇ? ಅದನ್ನು ಹೊಸ ಆರಂಭ ಎಂದು ಭಾವಿಸಿ. ಆಚರಿಸಿ.

- ವೈಫಲ್ಯವು, ಅದೇ ಕೆಲಸವನ್ನು ಮತ್ತೆ ಹೆಚ್ಚು ಬುದ್ಧಿವಂತಿಕೆಯಿಂದ ಪ್ರಾರಂಭಿಸಲು ಮತ್ತು ಅದನ್ನು ಸರಿಯಾಗಿ ಮಾಡಲು ಒಂದು ಅವಕಾಶವಾಗಿದೆ.

- ಯಾವುದೇ ನದಿಯು ಪ್ರಾರಂಭವಾದ ಸ್ಥಳಕ್ಕೆ ಹಿಂತಿರುಗುವುದಿಲ್ಲ. ಆದರೆ ಎಲ್ಲಾ ನದಿಗಳಿಗೆ ಒಂದು ಆರಂಭಿಕ ಹಂತವಿರುತ್ತದೆ.

- ಪ್ರತಿ ದಿನದ ಉದಯವೂ ನಿಮಗೆ ಭರವಸೆಯಿಂದ ತುಂಬಿದ ಹೊಸ ದಿನವನ್ನು ತರುತ್ತದೆ. ಆ ದಿನ ಹೊಸದನ್ನು ಪ್ರಾರಂಭಿಸುವ ಮನಸ್ಥಿತಿಯೊಂದಿಗೆ ನಿಮ್ಮನ್ನು ಸಿದ್ಧಪಡಿಸಿಕೊಳ್ಳಿ. 'ಇದೊಂದು ದಿನ ಮಾತ್ರ' ಎಂಬ ಮನಸ್ಥಿತಿಯಲ್ಲಿ ಯಾವುದೇ ದಿನದ ಬಗ್ಗೆ ಯೋಚಿಸಬೇಡಿ. ಪ್ರತಿ ದಿನವೂ ಹೊಸ ಆರಂಭಕ್ಕೆ ಅವಕಾಶವನ್ನು ನೀಡುತ್ತದೆ.

- ಪ್ರತಿದಿನವೂ ಒಂದೇ ರೀತಿ ಸಾಗುತ್ತಿದ್ದರೆ, ನೀವು ಅತ್ಯುತ್ತಮ ಜೀವನವನ್ನು ನಡೆಸುತ್ತಿಲ್ಲ. ಹೊಸದನ್ನು ಪ್ರಾರಂಭಿಸಿ.

- ಏನಾಯಿತು ಎಂಬುದರ ಬಗ್ಗೆ ನೀವು ಯೋಚಿಸುತ್ತಿದ್ದರೆ, ನೀವು ಭೂತಕಾಲದಲ್ಲಿ ಬದುಕುತ್ತಿದ್ದೀರಿ. ನೀವು ಅದನ್ನು ಬಿಟ್ಟು ಭವಿಷ್ಯದ ಬಗ್ಗೆ ಯೋಚಿಸಿದರೆ, ನಿಮಗೆ ಹೊಸ ಆರಂಭ ಸಿಗುತ್ತದೆ.

- ಅತ್ಯಂತ ದೊಡ್ಡ ಸಾಧಕರು ಕೂಡ ಒಂದು ಕಾಲದಲ್ಲಿ ತಮ್ಮ ಕ್ಷೇತ್ರದಲ್ಲಿ ಆರಂಭಿಕರಾಗಿದ್ದ ಸಾಮಾನ್ಯ ಜನರು. ಆದ್ದರಿಂದ, ಏನನ್ನಾದರೂ ಪ್ರಾರಂಭಿಸಲು ಹಿಂಜರಿಯಬೇಡಿ.

- ನಿಮ್ಮ ಎಲ್ಲಾ ಸಮಸ್ಯೆಗಳು ಮತ್ತು ವೈಫಲ್ಯಗಳನ್ನು ಮರೆತು ಹೊಸ ಪ್ರಯತ್ನವನ್ನು ಪ್ರಾರಂಭಿಸಲು ನೀವು ಸಿದ್ಧರಿದ್ದರೆ, ಈ ವಿಶ್ವದಲ್ಲಿ ಯಾವುದೂ

ಮುಡಿಗಳು!



ಸಂದರ್ಭಗಳು ಸ್ವಯಂಚಾಲಿತವಾಗಿ ನಿಮಗಾಗಿ ಉದ್ಭವಿಸುತ್ತವೆ.

- ಗಾಳಿ ಬೀಸುವ ದಿಕ್ಕಿನಲ್ಲಿ ಹೋಗಿ ಹೊಸದನ್ನು ಪ್ರಯತ್ನಿಸುವ ಮೂಲಕ ತಮ್ಮ ನಿಜವಾದ ಸಾಮರ್ಥ್ಯವನ್ನು ಕಂಡುಕೊಂಡ ಅನೇಕ ಜನರಿದ್ದಾರೆ. ಯಾವುದೇ ಸಂದರ್ಭದಲ್ಲೂ ಏನೂ ಮಾಡದೆ ಸುಮ್ಮನೆ ಕುಳಿತುಕೊಳ್ಳಬೇಡಿ.

- "ಇನ್ನು ಅಷ್ಟೆ, ಎಲ್ಲವೂ ಮುಗಿಯಿತು. ಇನ್ನು ನನಗೆ ಯಾವುದೇ ಅವಕಾಶವಿಲ್ಲ" ಎಂದು ಅನ್ನಿಸುವಾಗ, ಎಲ್ಲಿಂದಲೋ ಸ್ವಲ್ಪ ಬೆಳಕು ನಿಮ್ಮ ಮೇಲೆ ಬೀಳುತ್ತದೆ. ಆ ದಿಕ್ಕಿನಲ್ಲಿ ಪ್ರಯಾಣಿಸಿ.

- ಏನಾದರೂ ನಿಮ್ಮ ಯೋಜನೆಯಂತೆ ನಡೆಯದಿದ್ದರೆ, ವಿಧಿಯನ್ನು ದೂಷಿಸಬೇಡಿ. ನಿಮ್ಮ ಪ್ರಯತ್ನವು ಯಾವುದೇ ಅಡಚಣೆಯನ್ನು ಯಶಸ್ಸಿನ ಹೊಸ ಹಾದಿಯಾಗಿ ಪರಿವರ್ತಿಸುತ್ತದೆ.

- ಎಲ್ಲರನ್ನೂ ಕ್ಷಮಿಸಿ, ಎಲ್ಲವನ್ನೂ ಮರೆತುಬಿಡುವುದು ನಿಮಗೆ ಹೊಸದನ್ನು ಪ್ರಾರಂಭಿಸಲು ಮತ್ತೊಂದು ಅವಕಾಶವನ್ನು ನೀಡುತ್ತದೆ.

- ನಿನ್ನೆಯ ತಪ್ಪುಗಳ ಬಗ್ಗೆ ಯೋಚಿಸಬೇಡಿ. ಇಂದು ಹೊಸದಾಗಿ ಪ್ರಾರಂಭಿಸಲು ಒಳ್ಳೆಯ ದಿನವೆಂದು ಭಾವಿಸಿ. ನಾಳೆ ಉತ್ತಮ ಭವಿಷ್ಯವನ್ನು ತರುತ್ತದೆ.

- ನಿಮ್ಮ ಭೂತಕಾಲ ಎಷ್ಟೇ ಕೆಟ್ಟದಾಗಿದ್ದರೂ, ಇಂದು ನೀವು ಆತ್ಮವಿಶ್ವಾಸದಿಂದ ಕ್ರಮ ತೆಗೆದುಕೊಳ್ಳಲು ಪ್ರಾರಂಭಿಸಿದರೆ, ನಿಮ್ಮನ್ನು ತಡೆಯಲು ಸಾಧ್ಯವಿಲ್ಲ.

- ಜೀವನದಲ್ಲಿ ಸವಾಲುಗಳು ಸುಂಟರಗಾಳಿಯಂತೆ ಬಂದಾಗ, ಅವುಗಳನ್ನು ಎದುರಿಸಬೇಡಿ. ಆ ಗಾಳಿಯ ದಿಕ್ಕಿನಲ್ಲಿ ಹೊಸ ಪ್ರಯಾಣವನ್ನು ಪ್ರಾರಂಭಿಸಿ.

- ಪ್ರತಿ ಹೊಸ ದಿನವೂ ದೇವರ ಆಶೀರ್ವಾದ. ಆ ದಿನ ನೀವು ಮಾಡುವ ಯಾವುದೇ ಹೊಸ ಕೆಲಸವು ನಿಮ್ಮ ಜೀವನವನ್ನು ಸುಂದರಗೊಳಿಸುತ್ತದೆ.

- ಸರಿಯಾದ ಸಂದರ್ಭಗಳು ಉದ್ಭವಿಸುವವರೆಗೆ ಕಾಯಬೇಡಿ. ನೀವು ಏನನ್ನಾದರೂ ಮಾಡಲು ಪ್ರಾರಂಭಿಸಿದಾಗ ಸರಿಯಾದ ಸಂದರ್ಭಗಳು ಸ್ವಯಂಚಾಲಿತವಾಗಿ ನಾಳೆ ನಿಮಗೆ ಉತ್ತಮ ಸಮಯಗಳನ್ನು ತರುತ್ತದೆ.

- ಎಲ್ಲೋ ಸಿಕ್ಕಿಹಾಕಿಕೊಳ್ಳುವ ಬದಲು, ಯಾವುದಾದರೂ ಒಂದು ದಿಕ್ಕಿನಲ್ಲಿ ಹೊಸ ಪ್ರಯಾಣವನ್ನು ಪ್ರಾರಂಭಿಸಿ. ಪ್ರಯಾಣದ ಕೊನೆಯಲ್ಲಿ, ನಿಮಗಾಗಿ ಹೊಸ ಮಾರ್ಗವು ಸೃಷ್ಟಿಯಾಗುತ್ತದೆ.

- ನಿನ್ನೆ ನಮ್ಮ ಪ್ರಯಾಣದಲ್ಲಿ ನಾವು ಬಯಸಿದ ಎತ್ತರವನ್ನು ತಲುಪಲು ವಿಫಲರಾಗಿರಬಹುದು. ಆದರೆ ಇಂದು ನಾವು ಮತ್ತೊಮ್ಮೆ ಪ್ರಯತ್ನಿಸಿದರೆ, ನಾವು ಅದನ್ನು ಸಾಧಿಸಬಹುದು.

- ನಮಗೆ ಸತತವಾಗಿ ಹಲವು ದಿನಗಳು, ತಿಂಗಳುಗಳು ಮತ್ತು ವರ್ಷಗಳು ದೊರಕುತ್ತವೆ. ಅವು ಬರುವುದರಿಂದ ನಾವು ಅನೇಕ ವಿಷಯಗಳನ್ನು ಹೊಸದಾಗಿ ಪ್ರಾರಂಭಿಸಬಹುದು.

- ನಾವು ಬದುಕಿರುವವರೆಗೂ, ಹೊಸದನ್ನು ಪ್ರಾರಂಭಿಸಲು ನಮಗೆ ಯಾವುದೇ ಅಡ್ಡಿಯಿಲ್ಲ. ●



ಪ್ರಶ್ನೆಗಳ ಮೂಲಕ ಜೀವನವನ್ನು ಆರಂಭಿಸಬಹುದು!

- ಆ ಹಳ್ಳಿಯ ಆಶ್ರಮದಲ್ಲಿರುವ ಸನ್ಯಾಸಿ ತುಂಬ ಶಕ್ತಿವಂತರು ಎಂದು ಕೇಳಿದ ಪ್ರವಾಸಿಗನೊಬ್ಬ ಅವರನ್ನು ಭೇಟಿ ಮಾಡಲು ಬಂದ. ಆಶ್ರಮವನ್ನು ಪ್ರವೇಶಿಸಿದ ಅವನು ಆ ಸನ್ಯಾಸಿಯನ್ನು ನೋಡಿ ದಿಗ್ಭ್ರಮೆಗೊಂಡ. ಅದು ಒಂದು ಸಣ್ಣ ಗುಡಿಸಲು. ಸನ್ಯಾಸಿ ಚಾಪೆಯ ಮೇಲೆ ಕುಳಿತಿದ್ದ. ಹತ್ತಿರದಲ್ಲಿ ಒಂದು ದೀಪ, ಕೈಯಲ್ಲಿ ಒಂದು ಪುಸ್ತಕ ಮತ್ತು ಬೇರೇನೂ ಇರಲಿಲ್ಲ.
- "ನಿಮ್ಮ ವಸ್ತುಗಳು ಎಲ್ಲಿವೆ?" ಎಂದು ಅವನು ಸನ್ಯಾಸಿಯನ್ನು ಕೇಳಿದ. "ನಿಮ್ಮ ವಸ್ತುಗಳು ಎಲ್ಲಿವೆ?" ಎಂದು ಸನ್ಯಾಸಿ ಪ್ರತಿಯಾಗಿ ಕೇಳಿದ. "ನಾನು ಒಬ್ಬ ಪ್ರವಾಸಿ, ನನಗೆ ವಸ್ತುಗಳು ಏನು ಬೇಕು?" ಎಂದು ಪ್ರವಾಸಿಗ ಹೇಳಿದ. ಸನ್ಯಾಸಿ ಮುಗುಳ್ನಗುತ್ತಾ, "ನಾನೂ ಕೂಡ ಒಬ್ಬ ಪ್ರಯಾಣಿಕ. ನಾನು ಈ ಜಗತ್ತನ್ನು ನೋಡಲು ಬಂದಿದ್ದೇನೆ. ಈ ಸತ್ಯವನ್ನು ಕಲಿತ ನಂತರವೇ ನನ್ನ ಜೀವನ ಹೊಸದಾಗಿ ಪ್ರಾರಂಭವಾಯಿತು."
- ಸರಿಯಾದ ಪ್ರಶ್ನೆಗಳನ್ನು ಕೇಳುವ ಮೂಲಕ, ನಿಮ್ಮ ಜೀವನವು ಹೊಸದಾಗಿ ಪ್ರಾರಂಭವಾಗಬಹುದು. ಈ ಪ್ರಶ್ನೆಗಳು ಜೀವನದಲ್ಲಿ ಹೊಸ ಅರ್ಥವನ್ನು ಕಂಡುಕೊಳ್ಳಲು ಮತ್ತು ಆ ಹೊಸ ಪ್ರಯಾಣದ ಬಗ್ಗೆ ಸ್ಪಷ್ಟತೆಯನ್ನು ಪಡೆಯಲು ನಿಮಗೆ ಸಹಾಯ ಮಾಡುತ್ತದೆ.
- ಈ ಹೊಸ ಆರಂಭಕ್ಕೆ ನಾನು ಮಾನಸಿಕವಾಗಿ ಸಿದ್ಧನಾಗಿದ್ದೇನೆಯೇ? ನನ್ನ ಪ್ರಸ್ತುತ ಮನಸ್ಥಿತಿ ನನ್ನ ಜೀವನದ ಮೇಲೆ ಪರಿಣಾಮ ಬೀರುತ್ತಿಲ್ಲವೇ?
- ನನ್ನ ಬಗ್ಗೆ ನಾನು ಹೆಮ್ಮೆಪಡುವ ವಿಷಯಗಳು ಯಾವುವು? ನನ್ನ ಬಗ್ಗೆ ನಾನು ಬದಲಾಯಿಸಲು ಬಯಸುವ ವಿಷಯಗಳು ಯಾವುವು?
- ನಾನು ಜೀವನದಲ್ಲಿ ಎಂದಾದರೂ 'ಇದರಿಂದ ಸಾಕು' ಎಂದು ತೃಪ್ತನಾಗದೆ, ಅಪಾಯವನ್ನು ತೆಗೆದುಕೊಂಡಿದ್ದೇನೆಯೇ? ನಾನು ಈಗ ಅಪಾಯವನ್ನು ತೆಗೆದುಕೊಳ್ಳಲು ಸಿದ್ಧನಿದ್ದೇನೆಯೇ?
- ನಾನು ಹೀಗೆಯೇ ಬದುಕುವುದನ್ನು ಮುಂದುವರೆಸಿದರೆ ಏನಾಗುತ್ತದೆ? ಬದಲಾವಣೆಗಳೊಂದಿಗೆ ನನ್ನ ಜೀವನವನ್ನು ಹೊಸದಾಗಿ ಪ್ರಾರಂಭಿಸಿದರೆ ನನಗೆ ಯಾವ ಪ್ರಯೋಜನಗಳು ಸಿಗುತ್ತವೆ? ನಾನು ಈಗ ಏನೇ ಮಾಡಿದರೂ, ಅದು ಉದ್ಯೋಗವಾಗಿರಲಿ, ವೃತ್ತಿಯಾಗಿರಲಿ, ವ್ಯವಹಾರವಾಗಿರಲಿ, ಅದು ನನಗೆ ಏನು ನೀಡುತ್ತದೆ? ನಾನು ಇದರಿಂದ ಬದಲಾದರೆ ನನಗೆ ಏನು ಸಿಗುತ್ತದೆ?
- ನನ್ನ ಸಾಮರ್ಥ್ಯಗಳು ಯಾವುವು? ನನ್ನ ಕಾರ್ಯಗಳಲ್ಲಿ ನಾನು ಅವುಗಳನ್ನು ಸಮರ್ಪಕವಾಗಿ ಬಳಸುತ್ತಿದ್ದೇನೆಯೇ?
- ನಾನು ಈಗ ಬದುಕುತ್ತಿರುವ ಜೀವನ ಹೇಗಿದೆ? ಅದರಲ್ಲಿ ನನಗೆ ಏನು ಇಷ್ಟವಿಲ್ಲ? ಅದು ಬದಲಾಗಬೇಕೆಂದು ನಾನು ಬಯಸುತ್ತೇನೆಯೇ?
- ನನ್ನ ಜೀವನದಲ್ಲಿ ಯಾವ ವಿಷಯಗಳು ನನ್ನ ನಿಯಂತ್ರಣದಲ್ಲಿವೆ? ನಾನು ಯಾವ ವಿಷಯಗಳನ್ನು ಬದಲಾಯಿಸಲು ಸಾಧ್ಯವಿಲ್ಲ?
- ನಾನು ಎಷ್ಟು ವಿಷಯಗಳನ್ನು ಬದಲಾಯಿಸಬೇಕು? ಅವುಗಳಲ್ಲಿ ಯಾವುದು ಕಷ್ಟಕರ?
- ನನ್ನ ಜೀವನದ ಅಂತ್ಯದ ಬಗ್ಗೆ ನಾನು ಯೋಚಿಸಿದರೆ, ನಾನು ಈಗ ಮಾಡುತ್ತಿರುವುದನ್ನೇ ಮುಂದುವರಿಸುತ್ತೇನೆಯೇ? ಅಥವಾ ಬದಲಾವಣೆಯ ಅಗತ್ಯ ನನಗಿದೆಯೇ?
- ನಾನು ನನ್ನ ಸ್ವಂತ ಸುಧಾರಣೆಗೆ ಸಾಕಷ್ಟು ಸಮಯ ಮತ್ತು ಹಣವನ್ನು ಹೂಡಿಕೆ ಮಾಡುತ್ತಿದ್ದೇನೆಯೇ?
- ನಾನು ಜೀವನದಲ್ಲಿ ಯಾವುದಕ್ಕೆ ಆದ್ಯತೆ ನೀಡುತ್ತೇನೆ? ನನ್ನ ಶಾರೀರಿಕ ಆರೋಗ್ಯ, ಮಾನಸಿಕ ಆರೋಗ್ಯ ಮತ್ತು ಆರ್ಥಿಕ ಯೋಗಕ್ಷೇಮವನ್ನು ನಾನು ಮುಖ್ಯವೆಂದು ಪರಿಗಣಿಸುತ್ತೇನೆಯೇ?
- ಈ ಪ್ರಶ್ನೆಗಳಿಗೆ ಪ್ರಾಮಾಣಿಕ ಉತ್ತರಗಳನ್ನು ಹುಡುಕಿ. ನಿಮ್ಮ ಜೀವನವು ಉತ್ತಮವಾಗಿ ಬದಲಾಗುತ್ತದೆ.

ಮತ್ತೊಮ್ಮೆ ಒಂದು ಆರಂಭ!

ಮಳೆಗಾಲ ಮುಗಿದು, ಚಳಿಗಾಲ ಬಂದು, ಮತ್ತೆ ಬೇಸಿಗೆ ಬಂದೇ ಬರುತ್ತದೆ. ಋತುಗಳು ಬದಲಾಗುತ್ತಲೇ ಇರುತ್ತವೆ. ಹೀಗೆಯೇ ನಮ್ಮ ಜೀವನವೂ ಬದಲಾಗುತ್ತಿರುತ್ತದೆ. ಅದಕ್ಕಾಗಿಯೇ ಮನುಷ್ಯರು ಕಾಲಕಾಲಕ್ಕೆ ಹೊಸ ಆರಂಭಗಳನ್ನು ಎದುರಿಸುತ್ತಾರೆ.

ಕೆಲವು ಜನರು ಸಂತೋಷದ ಕ್ಷಣಗಳಲ್ಲಿ ಹೊಸ ಆರಂಭವನ್ನು ಪಡೆಯುತ್ತಾರೆ. ಆ ಹೊಸ ಆರಂಭವು ಮದುವೆ, ಹೊಸ ಮನೆಗೆ ಸ್ಥಳಾಂತರ, ಹೊಸ ಉದ್ಯೋಗವನ್ನು ಪ್ರಾರಂಭಿಸುವುದು, ಬಡ್ತಿ ಪಡೆಯುವುದು, ತಮ್ಮ ವೃತ್ತಿ ಜೀವನವನ್ನು ವಿಸ್ತರಿಸುವುದು ಇತ್ಯಾದಿ ಯಾವುದೇ ಆಗಿರಬಹುದು. ಕೆಲವರಿಗೆ, ವೃತ್ತಿ ಜೀವನದ ನಷ್ಟ, ಉದ್ಯೋಗ ನಷ್ಟ, ಪರಿಚಯವಿಲ್ಲದ ಪ್ರದೇಶಕ್ಕೆ ಸ್ಥಳಾಂತರ, ವಿಚ್ಛೇದನ ಅಥವಾ ನಿವೃತ್ತಿಯಂತಹ ಒತ್ತಡದ ಸಂದರ್ಭಗಳು ಹೊಸ ಆರಂಭದ ಅಗತ್ಯವನ್ನು ಸೃಷ್ಟಿಸುತ್ತವೆ. ಅದು ಅವರನ್ನು ಎಡವಿ ಬೀಳುವಂತೆ ಮಾಡುತ್ತದೆ.

ಬದಲಾವಣೆಯೊಂದೇ ಸ್ಥಿರ. ಅನುಭವಗಳಿದ್ದರೂ ಸಹ, ನಾವು ಮೊದಲಿಗಿಂತ ಉತ್ತಮರಾಗಬೇಕು. ನಾವು ಉತ್ತಮ ಜೀವನವನ್ನು ನಡೆಸಬೇಕು. ಹೊಸ ಆರಂಭಗಳು ಅದನ್ನು ಮಾಡಲು ನಮಗೆ ಸಹಾಯ ಮಾಡುತ್ತವೆ. ನಾವು ಯಾವುದೇ ರೀತಿಯ ವಾತಾವರಣದಿಂದ ಹೊಸದನ್ನು ಪ್ರಾರಂಭಿಸಿದರೂ, ಅದು ಸಂತೋಷವಾಗಿರಲಿ ಅಥವಾ ದುಃಖವಾಗಿರಲಿ, ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದ ಕೆಲವು ವಿಷಯಗಳಿವೆ. ನೀವು ಏನನ್ನು ಕಳೆದುಕೊಂಡರೂ ಪರವಾಗಿಲ್ಲ, ನೀವು ಇಲ್ಲಿಯವರೆಗೆ ಕಲಿತದ್ದೆಲ್ಲವೂ ನಿಮ್ಮೊಂದಿಗೆ ಉಳಿಯುತ್ತದೆ ಮತ್ತು ಅನುಭವಗಳು ಸೂಕ್ತವಾಗಿ ಬರುತ್ತವೆ. ಜೀವನದಲ್ಲಿ ನಾವು ಮಾಡಿಕೊಂಡ ಸ್ನೇಹ ಮತ್ತು ಸಂಬಂಧಗಳು ನಮ್ಮೊಂದಿಗೆ ಉಳಿಯುತ್ತವೆ.

ಹೊಸದಾಗಿ ಆರಂಭಿಸುವಾಗ ನೀವು ಮಾಡಬೇಕಾದ ಏಳು ವಿಷಯಗಳು ಇದೋ ಇಲ್ಲಿವೆ :

- ನಿಮ್ಮ ಜೀವನ ಈಗ ಎಲ್ಲಿದೆ ಎಂದು ನಿಮ್ಮನ್ನು ಕೇಳಿಕೊಳ್ಳಿ. ನಾನು ಇಲ್ಲಿಂದ ಎಲ್ಲಿಗೆ ಹೋಗಬೇಕು? ಈ ಸಮಯದಲ್ಲಿ ನೀವೇನು ಮಾಡಲಿದ್ದೀರಿ ಎಂಬ ಉತ್ತರವನ್ನು ಹುಡುಕಿ. ಏಕೆಂದರೆ ಮೊದಲು ನಿಮ್ಮ ಪರಿಸರವನ್ನು ಪರೀಕ್ಷಿಸಿಕೊಳ್ಳುವುದು ಉತ್ತಮ.

- ನಮ್ಮ ಆಲೋಚನೆಗಳು ಕಾಲಕ್ರಮೇಣ ಬದಲಾಗುತ್ತವೆ. ಶಾಲೆಯಲ್ಲಿ ಹೆಚ್ಚು ಮೌಲ್ಯಯುತವಾಗಿದ್ದ ವಿಷಯವು ಈಗ ಕಡಿಮೆ ಮೌಲ್ಯಯುತವಾಗಬಹುದು. ನಿಮ್ಮ ವಯಸ್ಸು, ಜೀವನ ಹಂತ ಮತ್ತು ಪರಿಸರವನ್ನು ಅವಲಂಬಿಸಿ ಎಲ್ಲವೂ ಬದಲಾಗುತ್ತದೆ. ಈಗ ನೀವು ಯಾವುದನ್ನು ಹೆಚ್ಚು ಗೌರವಿಸುತ್ತೀರಿ, ಯಾವ ಪ್ರಮುಖ ವಿಷಯಗಳನ್ನು ನೀವು ನಿರ್ಲಕ್ಷಿಸಿದ್ದೀರಿ ಮತ್ತು ನೀವು ಏನನ್ನು ಬದಲಾಯಿಸಬೇಕು ಎಂಬುದನ್ನು ವಿಶ್ಲೇಷಿಸಿ. ಅದನ್ನು ಬದಲಾಯಿಸಿ.

- ನಿಮ್ಮ ಹೊಸ ಜೀವನದಲ್ಲಿ ನಿಮ್ಮ ಗುರಿ ಏನೆಂದು ನಿರ್ಧರಿಸಿ. ಅದನ್ನು ಸಣ್ಣ ಭಾಗಗಳಾಗಿ ವಿಂಗಡಿಸಿ. ಪ್ರತಿಯೊಂದನ್ನೂ ಸಾಧಿಸಲು ಒಂದು ಮಾರ್ಗವನ್ನು ಯೋಜಿಸಿ.

- ನೀವು ಇಷ್ಟು ದಿನ ಇದ್ದ ಹಾಗೆಯೇ ಅದೇ ರೀತಿ ಇದ್ದು ಹೊಸದನ್ನು ಪ್ರಾರಂಭಿಸಲು ಸಾಧ್ಯವಿಲ್ಲ. ನಿಮ್ಮೊಳಗೆ ಬಹಳಷ್ಟು ಬದಲಾವಣೆಗಳು ಆಗಬೇಕು. ಧೈರ್ಯಶಾಲಿಯಾಗಿರಿ ಮತ್ತು ನಿಮ್ಮ ಎಲ್ಲಾ ಮಾನಸಿಕ ನಿರ್ಬಂಧಗಳನ್ನು ಬಿಟ್ಟು ಸಂಪೂರ್ಣವಾಗಿ ಬದಲಾಗಿರಿ.

- ಹಿಂಜರಿಯಬೇಡಿ ಅಥವಾ ನಿಲ್ಲಬೇಡಿ, ಕ್ರಮ ಕೈಗೊಳ್ಳಿ. ನೀವು ಯೋಚಿಸುತ್ತಲೇ ಇದ್ದರೆ, ಏನೂ ಬದಲಾಗುವುದಿಲ್ಲ.

- ನಿಮಗಾಗಿ ಒಬ್ಬ ಮಾರ್ಗದರ್ಶಕರನ್ನು ಹುಡುಕಿಕೊಳ್ಳಿ. ಅದು ನಿಮ್ಮ ಸ್ನೇಹಿತರಾಗಿರಲಿ, ಸಂಬಂಧಿಕರಾಗಿರಲಿ ಅಥವಾ ನಿಮ್ಮ ವೃತ್ತಿಯಲ್ಲಿ ಹಿರಿಯರಾಗಿರಲಿ. ಅವರು ನಿಮ್ಮ ದಾರಿಯಲ್ಲಿ ಒಂದು ಮೈಲಿಗಲ್ಲು ಎಂಬಂತೆ ಮಾರ್ಗದರ್ಶನ ನೀಡುತ್ತಾರೆ.

- ಜೀವನದ ಹಾದಿಯು ಏರಿಳಿತಗಳಿಂದ ತುಂಬಿದೆ. ಹಿನ್ನಡೆಗಳಿಂದ ನಿರುತ್ಸಾಹಗೊಳ್ಳಬೇಡಿ ಮತ್ತು ಪ್ರಗತಿಯಿಂದ ನಿರುತ್ಸಾಹಗೊಳ್ಳಬೇಡಿ. ಕಳೆದ ತಿಂಗಳು ನೀವು ಉತ್ತಮವಾಗಿದ್ದೀರಾ ಎಂದು ನೋಡಲು ನಿಯತಕಾಲಿಕವಾಗಿ ನಿಮ್ಮನ್ನು ಸ್ವಯಂ ಪರೀಕ್ಷೆ ಮಾಡಿಕೊಳ್ಳಿ. ●

ಜೀವನ ಬದಲಾಗುತ್ತದೆ!

ನೀವು ಹೊಸ ಚಟುವಟಿಕೆಯನ್ನು ಪ್ರಾರಂಭಿಸಿದಾಗ, ನಿಮ್ಮ ಜೀವನವು ಬದಲಾಗುತ್ತದೆ. ಅದನ್ನು ಮಾಡಲು ನೀವು ಏನು ಮಾಡಬೇಕು?

• ನೀವು ಏನೇ ಮಾಡಿದರೂ ಧೈರ್ಯದಿಂದ ಮಾಡಿ. ಇಲ್ಲಿಯವರೆಗೆ ನೀವು ಯಶಸ್ವಿಯಾಗದಂತೆ ತಡೆಯುತ್ತಿರುವುದು ನಿಮ್ಮ ಭಯ. ನೀವು ಯಾವುದೇ ಸವಾಲನ್ನು ಧೈರ್ಯದಿಂದ ಎದುರಿಸಿದಾಗ, ನೀವು ಯಶಸ್ವಿಯಾಗುತ್ತೀರಿ.

• ಯಾವಾಗಲೂ ಯೋಚಿಸುವಂತೆಯೇ ಯೋಚಿಸಿದರೆ ಆ ನಿಯಮಿತ ಚಿಂತನೆಯು ನಿಮಗೆ ಯಾವುದೇ ವ್ಯತ್ಯಾಸವನ್ನುಂಟು ಮಾಡುವುದಿಲ್ಲ. ಆದ್ದರಿಂದ, ನಿಮ್ಮ ಆಲೋಚನೆಯೂ ಸ್ಪಷ್ಟವಾಗಿ ಬದಲಾಗಬೇಕು.

• ನೀವು ಪ್ರತಿದಿನ ತೆಗೆದುಕೊಳ್ಳುವ ಕ್ರಮಗಳು ನಿಮ್ಮ ಪಾತ್ರವನ್ನು ನಿರ್ಧರಿಸುತ್ತವೆ. ನೀವು ಸರಿಯಾದ ಕೆಲಸಗಳನ್ನು ದೃಢನಿಶ್ಚಯದಿಂದ ಮಾಡಿದರೆ, ನೀವು ಸಕಾರಾತ್ಮಕ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳುತ್ತೀರಿ.

• ನಿಮ್ಮ ಅಭ್ಯಾಸಗಳು ಸಹ ಸಕಾರಾತ್ಮಕವಾಗಿರಬೇಕು. ನೀವು ಬಳಸುವ ಪದಗಳಿಂದ ಹಿಡಿದು ಇತರರಿಗೆ ನೀವು ನೀಡುವ ಪ್ರತಿಕ್ರಿಯೆಗಳವರೆಗೆ ಎಲ್ಲವೂ ಉತ್ಸಾಹ ಮತ್ತು ಸಕಾರಾತ್ಮಕತೆಯಿಂದ ತುಂಬಿರಬೇಕು.

ಯಾವುದು ಆರಂಭ?

ಅಸ್ತಿತ್ವ ಮತ್ತು ಬದುಕುವುದರ ನಡುವೆ ವ್ಯತ್ಯಾಸವಿದೆ. ಜೈಲಿನಿಂದ ಬಿಡುಗಡೆಯಾಗಿ ಬಂದ ಕೈದಿ "ನಾನು ಜೈಲಿನಲ್ಲಿದ್ದೆ" ಎಂದು ಹೇಳುತ್ತಾನೆಯೇ ವಿನಃ ಅವನು "ನಾನು ಜೈಲಿನಲ್ಲಿ ವಾಸಿಸುತ್ತಿದ್ದೆ" ಎಂದು ಹೇಳುವುದಿಲ್ಲ. ಕಾರಣ, ಅವನು ಜೈಲಿನಲ್ಲಿರಲು ಬಯಸಲಿಲ್ಲ. ಜೀವನ ಎಂದರೆ ಇತರರನ್ನು ಅವಲಂಬಿಸದೆ, ಸ್ವಇಚ್ಛೆಯಿಂದ ತನ್ನ ಜೀವನವನ್ನು ನಡೆಸುವುದು. ಒಳ್ಳೆಯ ಜೀವನ ಎಂದರೆ ನಾವು ಬಯಸಿದಂತೆ ಬದುಕುವುದು. ಆ ಜೀವನದಲ್ಲಿ, ನಾವು ಏನು ಬೇಕಾದರೂ ಪ್ರಾರಂಭಿಸಬಹುದು ಮತ್ತು ಮಾಡಬಹುದು.

ಅನೇಕ ಜನರು ವರ್ತಮಾನದಲ್ಲಿ ತಮ್ಮ ಜೀವನವನ್ನು ನಡೆಸುವುದಿಲ್ಲ. ಶಾಲಾ ದಿನಗಳಲ್ಲಿ, ಕಾಲೇಜಿಗೆ ಹೋದ ನಂತರವೇ ಜೀವನ ಪ್ರಾರಂಭವಾಗುತ್ತದೆ ಎಂದು ಅವರು ಭಾವಿಸುತ್ತಾರೆ. ಕಾಲೇಜು ದಿನಗಳಲ್ಲಿ, ಅವರು ತಮ್ಮ ಅಧ್ಯಯನವನ್ನು ಮುಗಿಸಿ ಕೆಲಸಕ್ಕೆ ಹೋದ ನಂತರ ಜೀವನವು ನೆಲೆಗೊಳ್ಳುತ್ತದೆ ಎಂದು ಅವರು ನಂಬುತ್ತಾರೆ. ಕೆಲಸಕ್ಕೆ ಹೋದ ನಂತರ, ಅವರು ಮದುವೆಯಾದ ನಂತರ ತಮ್ಮ ಜೀವನವನ್ನು ಪ್ರಾರಂಭಿಸುವ ಕನಸು ಕಾಣುತ್ತಾರೆ. ಅವರು ಈ ಕನಸನ್ನು ಮಕ್ಕಳು, ಸ್ವಂತ ಮನೆ, ಬಡ್ತಿ, ಕಾರು – ಎಲ್ಲದಕ್ಕೂ ವರ್ಗಾಯಿಸುತ್ತಾರೆ. ಅವರು ಎಂದಿಗೂ ತಮ್ಮ ಜೀವನವನ್ನು ಪ್ರಾರಂಭಿಸುವುದಿಲ್ಲ. ಅವರು ಹೊಸ ಆರಂಭಗಳನ್ನು ಮುಂದೂಡುತ್ತಾರೆ ಮತ್ತು ಅವುಗಳನ್ನು ಮುಂದೂಡುವ ಮೂಲಕ ವೃದ್ಧಾಪ್ಯವನ್ನು ತಲುಪುತ್ತಾರೆ. ನಾವು ಈ ಕ್ಷಣದಲ್ಲಿ ಬದುಕಲು ಕಲಿತರೆ, ಸಂತೋಷ ಶಾಶ್ವತವಾಗಿರುತ್ತದೆ.

ಬೆಳಕನ್ನು ಹುಡುಕಿರಿ!

ವಾಸ್ತವವೆಂದರೆ ನೀವು ಜೀವನದಲ್ಲಿ ಹೊಸ ಆರಂಭವನ್ನು ಹುಡುಕುತ್ತಿರುವಾಗ, ನಿಮ್ಮ ಹಳೆಯ ಜೀವನವನ್ನು ಸಂಪೂರ್ಣವಾಗಿ ಮರೆಯಲು ಅಥವಾ ಮರೆಮಾಡಲು ಸಾಧ್ಯವಿಲ್ಲ. ಆ ಅನುಭವಗಳು ನಿಮ್ಮ ಪ್ರಸ್ತುತ ನಿರ್ಧಾರಗಳನ್ನು ನಿರ್ಧರಿಸುತ್ತವೆ. ಒಮ್ಮೆ ಬಿಸಿ ಹಾಲು ಕುಡಿದ ಬೆಕ್ಕು ಮತ್ತೆ ಹಾಲು ಕುಡಿಯಲು ಹೆದರುವಂತೆಯೇ, ಹಿಂದೆ ನಿಮಗೆ ಕೆಟ್ಟ ಅನುಭವಗಳನ್ನು ನೀಡಿದ ಕೆಲವು ಕೆಲಸಗಳನ್ನು ಮಾಡಲು ನೀವು ಹೆದರುತ್ತೀರಿ.

ಆದರೆ, ಎರಡು ವಿಷಯಗಳನ್ನು ಎಂದಿಗೂ ಮರೆಯಬೇಡಿ. ನೀವು ಹಿಂದೆಂದೂ ಮಾಡದ ಕೆಲಸಗಳನ್ನು ಮಾಡಿ. ಅವುಗಳನ್ನು ಸಕಾರಾತ್ಮಕ ಮನಸ್ಥಿತಿಯಿಂದ ಮಾಡಿ. ಬುದ್ಧ ಹೇಳಿದ, 'ಎಲ್ಲವನ್ನೂ ಅನುಮಾನಿಸಿ, ನಿಮ್ಮ ಸ್ವಂತ ಬೆಳಕನ್ನು ಹುಡುಕಿ.' ನಿಮ್ಮ ಜೀವನವನ್ನು ಬದಲಾಯಿಸಲು ಒಂದು ಮಾರ್ಗವನ್ನು ಕಂಡುಕೊಳ್ಳಿ. ನಿಮಗೆ ಏನು ಮುಖ್ಯ, ನೀವು ಏನು ಮಾಡಲು ಸಾಧ್ಯವಿಲ್ಲ. ನಿಮ್ಮ ಪರಿಸ್ಥಿತಿಯನ್ನು ವಿಶ್ಲೇಷಿಸಿ ಮತ್ತು ಇದನ್ನು ಮಾಡಿ. 'ನಾನು ಇದಕ್ಕಿಂತ ಹೆಚ್ಚಿನದನ್ನು ಮಾಡಲು ಸಾಧ್ಯವಿಲ್ಲ' ಎಂದು ಹೇಳುವ ಮೂಲಕ ನಿಮ್ಮನ್ನು ಕಡಿಮೆ ಅಂದಾಜು ಮಾಡಿಕೊಳ್ಳಬೇಡಿ. ನೀವು ತೆಗೆದುಕೊಳ್ಳುವ ನಿರ್ಧಾರಗಳು ನಿಮ್ಮನ್ನು ಯಾವುದೇ ಎತ್ತರಕ್ಕೆ ಕೊಂಡೊಯ್ಯುತ್ತವೆ.



ಹೋರಾಟದಲ್ಲಿ ಗೆಲ್ಲಿರಿ!

ನಿಮ್ಮೊಳಗೆ ಒಬ್ಬ ಬಲಿಷ್ಠ ವ್ಯಕ್ತಿ ಮತ್ತು ನಿಮ್ಮೊಳಗೆ ಒಬ್ಬ ದುರ್ಬಲ ವ್ಯಕ್ತಿ ಇದ್ದಾರೆ. ನಿಮ್ಮ ಜೀವನವು ಈ ಎರಡರ ನಡುವಿನ ನಿರಂತರ ಹೋರಾಟವಾಗಿದೆ. ನಿಮ್ಮೊಳಗಿನ ಬಲಿಷ್ಠ ವ್ಯಕ್ತಿಯ ಬೆಂಬಲಕ್ಕೆ ನೀವು ನಿಂತಾಗ, ನಿಮಗೆ ಉತ್ತಮ ಆರಂಭ ಸಿಗುತ್ತದೆ.

ನಿಮ್ಮ ಭವಿಷ್ಯದಲ್ಲಿ ಏನು ಬೇಕು, ಏನು ಮಾಡಲು ಸಾಧ್ಯ ಮತ್ತು ನೀವು ಯಾವುದರ ಮೇಲೆ ಗಮನ ಹರಿಸಬೇಕು ಎಂಬುದನ್ನು ತಿಳಿದುಕೊಳ್ಳಿ. ಹಳೆಯ ಕಸ ಕೊಳೆಯನ್ನೆಲ್ಲ ತೆಗೆದು ಹಾಕಿ ಫಳಫಳ ಹೊಸದಾಗಿ ಕಂಗೊಳಿಸುವ ಹೊಸ ಮನೆಯಂತೆ ಇರಿ. ನಿಮ್ಮ ಎಲ್ಲಾ ಹಳೆಯ ನಂಬಿಕೆಗಳು ಮತ್ತು ಹಳೆಯ ಜ್ಞಾನವನ್ನು ಪಕ್ಕಕ್ಕಿಟ್ಟು ಹೊಸದನ್ನು ಹುಡುಕಿ. ಹೊಸ ಕೌಶಲ್ಯಗಳನ್ನು ಕಲಿಯಿರಿ.

ಕೆಲಸದಲ್ಲಿ ಬಿಕ್ಕಟ್ಟು ಎದುರಾದಾಗ, ಅದನ್ನು ಸಮಸ್ಯೆ ಎಂದು ಭಾವಿಸಬೇಡಿ. ಅದನ್ನು ಒಂದು ಸವಾಲಾಗಿ ಭಾವಿಸಿ. ಅದನ್ನು ನಿವಾರಿಸುವ ಪರಿಹಾರವು ನಿಮಗೆ ತಕ್ಷಣವೇ ಗೋಚರಿಸುತ್ತದೆ.

ಯಶಸ್ಸಿನ ರಹಸ್ಯ!

"ನಿಮ್ಮ ಯಶಸ್ಸಿನ ರಹಸ್ಯವೇನು?" ಎಂದು ಒಬ್ಬ ಉದ್ಯಮಿಯನ್ನು ಕೇಳಲಾಯಿತು. "ನಾನು ಅದಕ್ಕೆ ಎರಡು ಪದಗಳಲ್ಲಿ ಉತ್ತರಿಸಬಲ್ಲೆ" ಎಂದು ಅವರು ಹೇಳಿದರು. ಆ ಎರಡು ಪದಗಳು, "ಸರಿಯಾದ ನಿರ್ಧಾರಗಳು!", "ಸರಿ, ನೀವು ಸರಿಯಾದ ನಿರ್ಧಾರಗಳನ್ನು ಹೇಗೆ ತೆಗೆದುಕೊಂಡಿದ್ದೀರಿ?" ಎಂದು ಕೇಳಿದಾಗ ಅವರು, "ನಾನು ಅದಕ್ಕೆ ಒಂದೇ ಪದದಲ್ಲಿ ಉತ್ತರಿಸಬಲ್ಲೆ. ಅದು ಅನುಭವ" ಎಂದು ಹೇಳಿದರು. 'ಆ ಅನುಭವ ಎಲ್ಲಿಂದ ಬಂತು?' ಎಂದು ಕೇಳಿದಾಗ, ಅವರು ಹೇಳಿದರು, "ನಾನು ಅದಕ್ಕೆ ಎರಡು ಪದಗಳಲ್ಲಿ ಉತ್ತರಿಸಬಲ್ಲೆ'. ಉತ್ತರ 'ತಪ್ಪು ನಿರ್ಧಾರಗಳು'."

ನೀವು ಏನೇ ಮಾಡಲು ಪ್ರಾರಂಭಿಸಿದರೂ, ಎರಡು ವಿಷಯಗಳನ್ನು ದೃಢವಾಗಿ ನಂಬಿರಿ.

1. ಬೇರೆಯವರು ಅದನ್ನು ಮಾಡಲು ಸಾಧ್ಯವಾದರೆ, ನಾವು ಏಕೆ ಅದನ್ನು ಮಾಡಲು ಸಾಧ್ಯವಿಲ್ಲ?

2. ಇದುವರೆಗೆ ಯಾರೂ ಮಾಡಿಲ್ಲದಿದ್ದರೂ, ಅದನ್ನು ಮಾಡುವ ಮೊದಲಿಗರಾಗಲು ನನ್ನಿಂದ ಏಕೆ ಸಾಧ್ಯವಿಲ್ಲ?

ಯಶಸ್ಸಿಗೆ ಯಾವುದೇ ಅಡ್ಡದಾರಿ ಇಲ್ಲ. ನೀವು ಏನನ್ನಾದರೂ ಪ್ರಾರಂಭಿಸಿದಾಗ, ಸಂದರ್ಭಗಳು ನಿಮ್ಮನ್ನು ಎಲ್ಲೋ ಕರೆದೊಯ್ಯುತ್ತವೆ, 'ನನಗೆ ಸಾಧ್ಯವಿಲ್ಲ' ಎಂದು ಹೇಳುವುದೇ ಇಲ್ಲ. ಕಠಿಣ ಪರಿಶ್ರಮ ಮತ್ತು ಸರಿಯಾದ ಅವಕಾಶಗಳು ಒಟ್ಟಿಗೆ ಇದ್ದಾಗ, ಯಶಸ್ಸು ಬರುತ್ತದೆ. ಕಷ್ಟಪಟ್ಟು ಕೆಲಸ ಮಾಡಿದ ನಂತರವೂ ಸರಿಯಾದ ಅವಕಾಶ ಬರದಿದ್ದರೆ? ಅದನ್ನು ನೀವೇ ಸೃಷ್ಟಿಸಿಕೊಳ್ಳದೆ ಬೇರೆ ದಾರಿಯಿಲ್ಲ.

ಕೊನೇ ಬೆಂಚಿನ ವಿದ್ಯಾರ್ಥಿ!

ಆ ಬಾಲಕ ಶಾಲೆಗೆ ಬೇಸರದಿಂದ ಬರುತ್ತಿದ್ದ. ಅವನಿಗೆ ಓದಲು ಇಷ್ಟವಿಲ್ಲ. ಎಲ್ಲಾ ವಿಷಯಗಳಲ್ಲೂ 20 ಅಂಕಗಳು ಬಂದರೆ ಅದು ದೊಡ್ಡ ವಿಷಯ. ಅವನು ಯಾವಾಗಲೂ ಕೊನೆಯ ಬೆಂಚಿನಲ್ಲಿ ಕುಳಿತುಕೊಳ್ಳುತ್ತಿದ್ದ. ಶಿಕ್ಷಕರಿಗೆ ಕಾಣಿಸದಂತೆ ಅವನು ಆಗಾಗ್ಗೆ ಕಣ್ಣುಗಳನ್ನು ಮುಚ್ಚಿಕೊಂಡು ನಿದ್ರೆಗೆ ಜಾರುತ್ತಿದ್ದ.

ಅವನಿಗೆ ಇರುವ ಇಬ್ಬರು ಸ್ನೇಹಿತರು ಅವನಂತೆಯೇ ಅಲ್ಲಿ ಕುಳಿತಿರುವ ಇಬ್ಬರು ಹುಡುಗರು ಮಾತ್ರ. ಅವನು ಅವರೊಂದಿಗೆ ಮಾತ್ರ ಮಾತನಾಡುತ್ತಿದ್ದ. ತರಗತಿಯಲ್ಲಿರುವ ಉಳಿದವರೆಲ್ಲರೂ ಅವನನ್ನು ನೋಡಿದಾಗ ದೂರ ಹೋಗುತ್ತಿದ್ದರು. ಅವರಿಗೆ ಅವನೊಂದಿಗೆ ಮಾತನಾಡಲು ಏನೂ ಇರುತ್ತಿರಲಿಲ್ಲ. ಶಾಲೆಯಲ್ಲಿ ಅನೇಕ ಶಿಕ್ಷಕರು ಅವನನ್ನು ಸರಿಪಡಿಸಲು ಪ್ರಯತ್ನಿಸಿದ್ದಾರೆ. ಆದರೆ ಅದರಲ್ಲಿ ವಿಫಲರಾಗಿದ್ದಾರೆ.

ತ್ರೈಮಾಸಿಕ ಪರೀಕ್ಷೆಗಳ ನಂತರ ತರಗತಿಯ ಶಿಕ್ಷಕರು ಎಲ್ಲರಿಗೂ ತಮ್ಮ ರ್‍ಯಾಂಕ್ ಕಾರ್ಡ್‌ಗಳನ್ನು ನೀಡುವ ದಿನ ಬಂದಿತು. ಸಾಮಾನ್ಯವಾಗಿ ಉತ್ತಮ ಅಂಕಗಳನ್ನು ಗಳಿಸುತ್ತಿದ್ದ ಇತರ ಕೆಲವು ವಿದ್ಯಾರ್ಥಿಗಳು ಕೂಡ ಈ ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ಗಳಿಸಿದ್ದರಿಂದ ಅವರು ತುಂಬ ಕೋಪಗೊಂಡಿದ್ದರು.

ಕೊನೆಗೆ ಅವರು ಕೊನೇ ಬೆಂಚಿನ ಆ ಹುಡುಗನನ್ನು ಹತ್ತಿರ ಕರೆದು, "ನೋಡಿ, ಇವನೇ ನಮ್ಮ ತರಗತಿಯಲ್ಲಿ ಎಲ್ಲರಿಗಿಂತ ಅತಿ ಕಡಿಮೆ ಅಂಕಗಳನ್ನು ಪಡೆದಿರುವವನು. ಎಲ್ಲಾ ವಿಷಯಗಳಲ್ಲಿಯೂ ಫೇಲ್ ಆಗಿದ್ದಾನೆ. ನೀವೂ ಕೂಡ ಇನ್ನು ಮುಂದೆ ಸರಿಯಾಗಿ ಓದದಿದ್ದರೆ, ಇವನಂತೆಯೇ ಮೂರ್ಖ ಮತ್ತು ಸೋಮಾರಿಯಾಗಿ ಬದಲಾಗುತ್ತೀರಿ. ನಂತರ ಮುಂದೆ ನಿಮ್ಮ ಜೀವನದಲ್ಲಿ ಬಿಸಿಲಿನಲ್ಲಿ ಬೀದಿಬೀದಿಗಳಲ್ಲಿ ಅಲೆದಾಡಿ ಕೂಲಿ ಕೆಲಸಗಳನ್ನು ಮಾಡಬೇಕಾಗುತ್ತದೆ, ಅಷ್ಟೇ!" ಎಂದು ಹೇಳಿದರು. ತರಗತಿಯಲ್ಲಿರುವ ಎಲ್ಲರೂ ಅವನನ್ನು ನೋಡಿ ನಕ್ಕರು.

ಇಷ್ಟು ದಿನ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತನ್ನನ್ನು ಕಡೆಗಣಿಸಿದ್ದರು ಎಂಬುದು ಅವನಿಗೆ ಬೇಸರವಾಗಿರಲಿಲ್ಲ. ಆದರೆ ಎಲ್ಲರ ಮುಂದೆ ಈ ರೀತಿ ಅವಮಾನಿಸಿದ್ದು ಅವನಿಗೆ ಹೊಸದು. ಅವನು ತನ್ನ ಆಸನದಲ್ಲಿ ಹೋಗಿ ಕುಳಿತಾಗ, ಅವನ ಕಣ್ಣುಗಳಲ್ಲಿ ನೀರು ತುಂಬಿತ್ತು.

'ನಾನು ಇಷ್ಟೊಂದು ಕೆಟ್ಟ ಉದಾಹರಣೆಯಾಗಿದ್ದೇನೆಯೇ! ಎಲ್ಲರೂ ನನ್ನನ್ನು ನೋಡಿ ನಗುತ್ತಿದ್ದಾರೆ... ಇದನ್ನು ಬದಲಾಯಿಸಲು ನಾನು ಇನ್ನು ಮುಂದೆ ಏನು ಮಾಡಬಹುದು?' ಎಂದು ಅವನು ಯೋಚಿಸಿದ. ಅವನು ಸೋಮಾರಿಯಾಗಿದ್ದನು. ಮಾತ್ರವಲ್ಲ, ಅಧ್ಯಯನದಲ್ಲಿಯೂ ನಿರಾಸಕ್ತನಾಗಿದ್ದನು. ಆ ದಿನದಿಂದ ಅವನು ಶಾಲೆ ಮುಗಿಸಿ ಮನೆಗೆ ಹೋದ ಮೇಲೆ, ದಿನವೂ ಕುಳಿತು ಅಧ್ಯಯನ ಮಾಡಲು ಪ್ರಾರಂಭಿಸಿದನು. ತಾನು ಓದಿದ್ದನ್ನು ಬರೆಯತೊಡಗಿದನು. ಕೊಳಕು ಕನ್ನಡಿಯನ್ನು ಒರೆಸಿದಂತೆ, ಅವನೊಳಗೆ ಬುದ್ಧಿವಂತಿಕೆಯ ಕಿಡಿಯೊಂದು, ಪ್ರಕಾಶಮಾನವಾಗಿ ಹೊಳೆಯುವ ಕಿಡಿಯಂತೆ ಹೊಮ್ಮಿತು. ಅಂದಿನಿಂದ ಅವನು ಪ್ರತಿದಿನ ಮನೆಯಲ್ಲಿ ಹಲವು ಗಂಟೆಗಳ ಕಾಲ ಅಧ್ಯಯನ ಮಾಡುತ್ತಿದ್ದ ಮತ್ತು ಬರೆಯುತ್ತಿದ್ದ. ಅವನ ಹೆತ್ತವರು ಅವನನ್ನು ಆಶ್ಚರ್ಯದಿಂದ ನೋಡಿದರು.

ಮುಂದಿನ ತಿಂಗಳು ನಡೆದ ಪರೀಕ್ಷೆಗಳಲ್ಲಿ, ಆ ಹುಡುಗ ಎಲ್ಲಾ ವಿಷಯಗಳಲ್ಲಿ ಅತ್ಯುತ್ತಮವಾದ ಅಂಕಗಳನ್ನು ಗಳಿಸಿ ಉತ್ತೀರ್ಣನಾದ. ತರಗತಿಯ ಶಿಕ್ಷಕರಿಗೇ ಆಶ್ಚರ್ಯವಾಯಿತು. ಒಂದು ದಿನ, ತರಗತಿಯಲ್ಲಿ ವಿಜ್ಞಾನ ಶಿಕ್ಷಕರು ಕೇಳಿದ ಪ್ರಶ್ನೆಗೆ ಬೇರೆ ಯಾರೂ ಉತ್ತರಿಸಲು ಸಾಧ್ಯವಾಗದಿದ್ದಾಗ, ಅವರು ಸರಿಯಾದ ಉತ್ತರ ನೀಡಿದ. "ನೀನು ಬಂದು ಮುಂದಿನ ಬೆಂಚಿನಲ್ಲಿ ಕುಳಿತುಕೊ" ಎಂದು ಹೇಳಿ ಶಿಕ್ಷಕರು ಅವನನ್ನು ಹೊಗಳಿದರು ಮತ್ತು ಮುಂದಿನ ಸಾಲಿನಲ್ಲಿ ಆಸನವನ್ನು ನೀಡಿದರು. ಇತರ ವಿದ್ಯಾರ್ಥಿಗಳು ಅವನೊಂದಿಗೆ ಮಾತನಾಡಲು ಪೈಪೋಟಿ ನಡೆಸಿದರು. ವಿದ್ಯಾರ್ಥಿನಿಯರು ಅವನ ಬಳಿ ಬಂದು ಪ್ರಶ್ನೆಗಳನ್ನು ಕೇಳಿದರು.

ಆ ಅರ್ಧವಾರ್ಷಿಕ ಪರೀಕ್ಷೆಯಲ್ಲಿ ಆ ಹುಡುಗ ತರಗತಿಯಲ್ಲಿ ಮೊದಲಿಗನಾಗಿದ್ದ. "ಎಲ್ಲರೂ ಇವನ ತರಹ ಓದಬೇಕು" ಎಂದು ಹೇಳಿದ ತರಗತಿ ಶಿಕ್ಷಕರು ಅವನ ಕಡೆಗೆ ತಿರುಗಿ, "ನಾನು ನಿನ್ನನ್ನು ತುಂಬಾ ಅವಮಾನಿಸಿದ್ದೇನೆ, ದಯವಿಟ್ಟು ನನ್ನನ್ನು ಕ್ಷಮಿಸು" ಎಂದರು.

ಆ ಹುಡುಗ, "ಸರ್, ಹಾಗೆ ಹೇಳಬೇಡಿ. ನಾನು ಓದಲು ಪ್ರಾರಂಭಿಸಿದ್ದು ಮತ್ತು ನಾನು ಈ ರೀತಿ ಆಗಲು ನೀವೇ ಕಾರಣ" ಎಂದ.

Owned, Published by K.R. NAGARAJAN, Published from 10, Sengunthapuram Mangalam Road, TIRUPUR - 641 604 &
Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL

SUKRA SUPER FINE COTTON VESTS | ROMEX SUPERIOR BANIANS | RISE-UP PREMIUM BANIANS | ACOSTE LUXURY INNERWEARS | Breeze Eye Let Vests | WinStripe STRIPED BANIANS | ARCHERY GYM VEST | COMPACT PREMIUM COTTON RIB VESTS | LITTLE STARS KIDS INNERWEARS

Available at Ramraj Showrooms and All Leading Textile Shops | Shop Online at www.ramrajcotton.in

Bilupu Monthly - Postal Registration No. TN/TRU/30/2024-26. Registered with the Registrar of Newspapers for India under No. TNKAN/2017/74564. Day of Publishing: 01-01-2026 Posted at Tirupur BPC on 5th of every month.